
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 46 | ನವೆಂಬರ್ 11–17 | ಪುಟ 16 | ರೂ. 10/-







ಸಮೃದ್ಧ, ಸೌಹಾರ್ದ ಕರ್ನಾಟಕಕ್ಕಾಗಿ

ಬಲಿಷ್ಟ ಕಾರ್ಮಿಕ ಚಳುವಳಿ

ಸಿಐಟಿಯು 14ನೇ ಸಮ್ಮೇಳನ ಪಣ



ಈಗ ಸುಪ್ರೀಂಕೋರ್ಟ್ ನಿಂದಲೂ ಅನರ್ಹರೆನೆಸಿಕೊಂಡವರು

ಇಸ್ರೇಲಿ ಬೇಹುಗಾರಿಕೆ ತಂತ್ರವನ್ನು ಬಳಸಿದವರಾರು?



ಅಯೋಧ್ಯಾ ತೀರ್ಪು: ತೊಡಕುಗಳೊಂದಿಗೆ ಅಂತಿಮ ಪರಿಹಾರ



ಆರ್‌ಸಿಇಪಿ ಬೇಡ ರೈತ-ಕಾರ್ಮಿಕರಿಗೆ ದೊಡ್ಡ ಜಯ



ಅಯೋಧ್ಯಾ ವಿವಾದಕ್ಕೆ ಕೊನೆಗೂ ಸುಪ್ರಿಂ ಕೋರ್ಟಿನಿಂದ ನ್ಯಾಯಾಂಗ ಪರಿಹಾರ

ಬಾಬ್ರಿ ಮಸೀದಿಯ ಕಾನೂನುಬಾಹಿರ ಧ್ವಂಸದ ಪ್ರಕರಣಗಳೂ ಬೇಗನೇ ಇತ್ಯರ್ಥಗೊಳ್ಳಲಿ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯಾಗಲಿ –ಸಿಪಿಐ(ಎಂ) ಪೊಲಿಟ್‌ಬ್ಯುರೊ

ದೀರ್ಘ ಕಾಲದ ಅಯೋಧ್ಯಾ ವಿವಾದದ ಬಗ್ಗೆ ಸುಪ್ರೀಂಕೋರ್ಟ್ ತನ್ನ ತೀರ್ಪು ನೀಡಿದೆ. 2.77 ಎಕರೆ ವಿವಾದಿತ ಜಾಗವನ್ನು ಟ್ರಸ್ಟ್ ಮೂಲಕ ದೇವಸ್ಥಾನ ನಿರ್ಮಿಸಲು ಹಿಂದೂ ಕಡೆಯವರಿಗೆ ಕೋರ್ಟ್ ನೀಡಿದೆ. 5 ಎಕರೆ ಪರ್ಯಾಯ ಜಾಗವನ್ನು ಮುಸ್ಲಿಂ ವಕ್ಫ್ ಮಂಡಳಿಗೆ ಮಸೀದಿ ನಿರ್ಮಿಸಲು ಮಂಜೂರು ಮಾಡಬೇಕೆಂದು ನಿರ್ದೇಶನ ನೀಡಿದೆ.

ಈ ಆದೇಶದ ಮೂಲಕ ಸುಪ್ರೀಂ ಕೋರ್ಟಿನ ಐವರು ನ್ಯಾಯಾಧೀಶರ ಸಂವಿಧಾನ ಪೀಠವು, ಕೋಮುವಾದಿ ಶಕ್ತಿಗಳು ದುರ್ಬಳಕೆ ಮಾಡಿಕೊಂಡು ಅಪಾರ ಹಿಂಸೆ ಮತ್ತು ಜೀವಹಾನಿಗೆ ಕಾರಣವಾಗಿದ್ದ ಬಹುಕಾಲದ ವಿವಾದವೊಂದನ್ನು ಕೊನೆಗೊಳಿಸಲು ಪ್ರಯತ್ನಿಸಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಈ ವಿವಾದವನ್ನು ಮಾತುಕತೆಯ ಮೂಲಕ ಸಾಧ್ಯವಾಗದಿದ್ದರೆ ನ್ಯಾಯಾಲಯದ ತೀರ್ಪಿನ ಮೂಲಕ ಬಗೆಹರಿಸಬೇಕೆಂಬ ನಿಲುವನ್ನು ಸಿಪಿಐ(ಎಂ) ಸದಾ ಹೊಂದಿತ್ತು. ಈ ತೀರ್ಪು ಅಂಕೆಯಿಲ್ಲ ದಂತಾಗಿದ್ದ ವಿಷಯ ಒಂದಕ್ಕೆ ನ್ಯಾಯಾಂಗ ಪರಿಹಾರವನ್ನು ಒದಗಿಸಿದೆಯಾದರೂ, ಈ ತೀರ್ಪಿಗೆ ಆಧಾರವಾಗಿ ಹೇಳಿರುವ ಕೆಲವು ಅಂಶಗಳು ಪ್ರಶ್ನಾರ್ಹವಾಗಿವೆ ಎಂದು ಪೊಲಿಟ್ ಬ್ಯುರೊ ಅಭಿಪ್ರಾಯ ಪಟ್ಟಿದೆ.

ಡಿಸೆಂಬರ್ 1992 ರಲ್ಲಿ ಬಾಬ್ರಿ ಮಸೀದಿಯನ್ನು ಕೆಡವಿದ್ದು ಕಾನೂನು ಬಾಹಿರ ಕೃತ್ಯವೆಂದು ಕೋರ್ಟ್ ತೀರ್ಪೇ ಹೇಳಿದೆ. ಅದೊಂದು ಅಪರಾಧ ಕೃತ್ಯ ಹಾಗೂ ಜಾತ್ಯತೀತ ತತ್ವದ ಮೇಲಿನ ದಾಳಿಯಾಗಿದೆ. ಮಸೀದಿ ಧ್ವಂಸಕ್ಕೆ ಸಂಬಂಧಪಟ್ಟ ಪ್ರಕರಣಗಳ ಇತ್ಯರ್ಥ ತ್ವರಿತಗೊಳ್ಳಬೇಕು ಮತ್ತು ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು.

ಧಾರ್ಮಿಕ ಪೂಜಾ ಸ್ಥಳಗಳ ಕಾಯಿದೆ –1991 ಕುರಿತು ನ್ಯಾಯಾಲಯ ಮೆಚ್ಚುಗೆ ವ್ಯಕ್ತಪಡಿಸಿದೆ. ಈ ಕಾನೂನಿಗೆ ಬದ್ಧರಾಗಿ ಧಾರ್ಮಿಕ ಸ್ಥಳಗಳ ಬಗ್ಗೆ ಮತ್ತೆ ಇಂತಹ ವಿವಾದಗಳನ್ನು ಎತ್ತಿ ಬಳಸದಂತೆ ಖಾತರಿಪಡಿಸಬೇಕು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ತೀರ್ಪನ್ನು ಬಳಸಿ ಕೋಮು ಸಾಮರಸ್ಯವನ್ನು ಕದಡುವಂತಹ ಯಾವುದೇ ಪ್ರಚೋದನಕಾರಿ ಕೃತ್ಯಗಳು ನಡೆಯಬಾರದು ಎಂದು ಕೋರಿದೆ.

ಮಹಾರಾಷ್ಟ್ರದಲ್ಲಿ ತರಾತುರಿಯಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿಕೆ–ಸುಪ್ರಿಂ ಕೋರ್ಟ್ ತೀರ್ಪಿನ ಭಂಡ ಉಲ್ಲಂಘನೆ

ಸಂವಿಧಾನದ ಮೇಲೆ ಮೋದಿ ಸರಕಾರದ ಇನ್ನೊಂದು ಪ್ರಹಾರ: ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾದ ಖಂಡನೆ

ಮಹಾರಾಷ್ಟ್ರದಲ್ಲಿ ಏಕಾಏಕಿಯಾಗಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಲಾಗಿದೆ, ಇದನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ. ಸನ್ಮಾನ್ಯ ರಾಜ್ಯಪಾಲರು ಎನ್ ಸಿ ಪಿ ಮುಖಂಡ ಶ್ರೀ ಶರದ್ ಪವಾರ್ ಅವರಿಗೆ ಸರಕಾರವನ್ನು ರಚಿಸಲಿಕ್ಕೆ ಚುನಾಯಿತ ಶಾಸಕರ ಬಹುಮತದ ಬೆಂಬಲದ ದಾವೆಯನ್ನು ಸಲ್ಲಿಸಲು ನವಂಬರ್ 12ರ ಸಂಜೆ 8.30ರ ವರೆಗೆ ಸಮಯಾವಕಾಶ ಕೊಟ್ಟಿದ್ದರು. ಆದರೆ ತಾನು ನೀಡಿದ ಸಮಯಾವಕಾಶ ಮುಗಿಯುವ ಮೊದಲೇ ಅವರು ಭಾರತದ ರಾಷ್ಟ್ರಪತಿಗಳು ಕಲಮು 356 ನ್ನು ಹೇರುವಂತೆ ಶಿಫಾರಸು ಮಾಡಿದ್ದಾರೆ.

ಪ್ರಧಾನ ಮಂತ್ರಿಗಳು ವಿದೇಶಕ್ಕೆ ಹೊರಡುವ ಸ್ವಲ್ಪವೇ ಮೊದಲು ತರಾತುರಿಯಲ್ಲಿ ಕರೆದ ಕೇಂದ್ರ ಸಂಪುಟದ ಸಭೆ ರಾಜ್ಯಪಾಲರ ಶಿಫಾರಸನ್ನು ಅನುಮೋದಿಸಿದೆ ಮತ್ತು ಅದನ್ನು ಸನ್ಮಾನ್ಯ ರಾಷ್ಟ್ರಪತಿಗಳಿಗೆ ಕೇಂದ್ರೀಯ ಆಳ್ವಿಕೆಯನ್ನು ಹೇರಲು ಕಳಿಸಲಾಗಿದೆ.

ಇವೆಲ್ಲವೂ ಬೊಮ್ಮಾಯಿ ಕೇಸಿನಲ್ಲಿ ಸುಪ್ರಿಂ ಕೋರ್ಟ್ ತೀರ್ಪನ್ನು ನೇರವಾಗಿ ಉಲ್ಲಂಘಿಸುತ್ತವೆ. ಒಂದು ಸರಕಾರವನ್ನು ರಚಿಸುವ ದಾವೆಯನ್ನು ಚುನಾಯಿತ ಸದಸ್ಯರ ಒಂದು ಬಹುಮತದ ಮೂಲಕ ಸ್ಥಾಪಿಸುವ ಏಕೈಕ ಸ್ಥಳವೆಂದರೆ ಸದನದ ವೇದಿಕೆಯೇ ಎಂದು ಆ ಕೇಸಿನಲ್ಲಿ ಅಸಂದಿಗ್ಧವಾಗಿ ಹೇಳಲಾಗಿತ್ತು. ಕಾನೂನು ವಿಧಿಸಿರುವ ವಿಧಾನಗಳನ್ನು ಅನುಸರಿಸದೆ, ಬಿಜೆಪಿ ಈ ರೀತಿಯಲ್ಲಿ ವರ್ತಿಸಿ ನಮ್ಮ ಸಂವಿಧಾನಿಕ ವ್ಯವಸ್ಥೆಯನ್ನು ಭಂಡತನದಿಂದ ಉಲ್ಲಂಘಿಸಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ರಾಷ್ಟ್ರಪತಿ ಆಳ್ವಿಕೆಯ ಅವಧಿಯನ್ನು ಬಳಸಿಕೊಂಡು ಬಿಜೆಪಿ ಈ ಹಿಂದೆ ಹಲವು ರಾಜ್ಯಗಳಲ್ಲಿ ಮಾಡಿರುವಂತೆ ತನಗೆ ಒಂದು ಬಹುಮತವನ್ನು ತಯಾರಿಸಿಕೊಳ್ಳಲು ತನ್ನ ಬತ್ತಳಿಕೆಯಲ್ಲಿರುವ ಎಲ್ಲ ವಿಧಾನಗಳಲ್ಲಿ ತೊಡಗುತ್ತದೆ ಎನ್ನುವುದು ಸ್ಪಷ್ಟ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ, ಇದು ಭಾರತೀಯ ಸಂವಿಧಾನದ ಮೇಲೆ ಈ ಮೋದಿ ಸರಕಾರದ ಇನ್ನೊಂದು ಪ್ರಹಾರವಾಗಿದೆ, ಇದನ್ನು ಎಲ್ಲ ಜಾತ್ಯತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳು ದೃಢವಾಗಿ ವಿರೋಧಿಸಬೇಕು ಎಂದಿದೆ.

ಬೊಲಿವಿಯಾದಲ್ಲಿ ಬಲಪಂಥೀಯ ಶಕ್ತಿಗಳಿಂದ ಚುನಾಯಿತ ಅಧ್ಯಕ್ಷರ ಪದಚ್ಯುತಿ–ಸಿಪಿಐ(ಎಂ) ಪೊಲಿಟ್ ಬ್ಯುರೊ ಖಂಡನೆ

ಬೊಲಿವಿಯಾದಲ್ಲಿ ಇವೊ ಮೊರಲೆಸ್ ಅವರನ್ನು ರಾಷ್ಟ್ರಾಧ್ಯಕ್ಷ ಸ್ಥಾನದಿಂದ ಇಳಿಸಿರುವುದು ವಾಸ್ತವವಾಗಿ ಕಾನೂನು ಪ್ರಕಾರ ಚುನಾಯಿತರಾದ ಅಧ್ಯಕ್ಷರೊಬ್ಬರ ವಿರುದ್ಧ ನಡೆಸಿರುವ ಒಂದು ಕ್ಷಿಪ್ರಕ್ರಾಂತಿಯೇ ಆಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಖಂಡಿಸಿದೆ.

ಅಮೆರಿಕ ಸಂಯುಕ್ತ ಸಂಸ್ಥಾನಗಳ ಬೆಂಬಲ ಪಡೆದಿರುವ ಬಲಪಂಥೀಯ ಶಕ್ತಿಗಳು ಅಕ್ಟೋಬರ್ 20ರಂದು ನಡೆದ ಚುನಾವಣೆಗಳ ಫಲಿತಾಂಶವನ್ನು ಸ್ವೀಕರಿಸಲು ನಿರಾಕರಿಸಿವೆ ಮತ್ತು ದೊಡ್ಡ ಪ್ರಮಾಣದಲ್ಲಿ ಹಿಂಸಾಚಾರವನ್ನು ಹರಿಯ ಬಿಟ್ಟಿವೆ. ಸಶಸ್ತ್ರ ಪೋಲೀಸರ ಕೆಲವು ವಿಭಾಗಗಳು ಪ್ರತಿಭಟನಾಕಾರರ ಪರ ವಹಿಸಿದವು, ಮತ್ತು ಅಂತಿಮವಾಗಿ ಸೇನೆ ಮೊರಲೆಸ್ ಅವರು ಅಧಿಕಾರದಿಂದ ಕೆಳಗಿಳಿಯುವಂತೆ ಬಲವಂತ ಮಾಡಿದೆ.

ಈ ಹಿಂದೆ ಬ್ರೆಝಿಲ್ ನಲ್ಲಿ, ನಂತರ ಇಕ್ವೆಡೋರ್ ಮತ್ತು ವೆನೆಝುವೆಲಾದಲ್ಲಿ ಪ್ರಗತಿಪರ ಆಳ್ವಿಕೆಗಳ ಮೇಲೆ ಗುರಿಯಿಟ್ಟ ಪ್ರಯತ್ನಗಳ ಹಿನ್ನೆಲೆಯಲ್ಲಿ ಬೊಲಿವಿಯಾದಲ್ಲಿ ಈ ಬಲಪಂಥೀಯ ಕ್ಷಿಪ್ರಕ್ರಾಂತಿ ನಡೆದಿದೆ.

ಇವೊ ಮೊರಲೆಸ್ ಅವರ ಮೊತ್ತಮೊದಲ ಮೂಲನಿವಾಸಿ ಅಧ್ಯಕ್ಷರ ನೇತೃತ್ವದಲ್ಲಿ ಬೊಲಿವಿಯ ಬಡತನ ನಿರ್ಮೂಲನೆಯತ್ತ ಮತ್ತು ದೇಶದ ನೈಸರ್ಗಿಕ ಸಂಪನ್ಮೂಲಗಳ ಮೇಲೆ ರಾಷ್ಟ್ರೀಯ ಸಾರ್ವಭೌಮತ್ವವನ್ನು ಖಾತ್ರಿಗೊಳಿಸುವತ್ತ ದೊಡ್ಡ ದಾಪುಗಾಲು ಹಾಕಿತ್ತು ಎಂದಿರುವ ಸಿಪಿ(ಐಎಂ) ಪೊಲಿಟ್ ಬ್ಯುರೊ ಇವೊ ಮೊರಲೆಸ್ ಮತ್ತು ಎಂ.ಎ.ಎಸ್. (ಮೂವ್ಮೆಂಟ್ ಫಾರ್ ಸೋಶಲಿಸಂ–ಸಮಾಜವಾದಕ್ಕಾಗಿ ಆಂದೋಲನ) ಪಕ್ಷಕ್ಕೆ ಸೌಹಾರ್ದವನ್ನು ವ್ಯಕ್ತಪಡಿಸಿದೆ.

ಬೇಹುಗಾರಿಕೆ ಸಾಧನದ ವಿರುದ್ಧ ಕ್ರಮ ಕೈಗೊಳ್ಳಿ –ಸಿಪಿಐ(ಎಂ) ಪೊಲಿಟ್ ಬ್ಯುರೊ

ಭಾರತದಲ್ಲಿ ಸಕ್ರಿಯ ಕಾರ್ಯಕರ್ತರು, ವಕೀಲರು, ಪತ್ರಕರ್ತರ ಫೋನ್ ಮಾಹಿತಿಗಳನ್ನು ಇಸ್ರೇಲಿ ಪೆಗಾಸಿಸ್ ಬೇಹುಗಾರಿಕೆ ಸಾಧನದಿಂದ ಸೀಳಿರುವುದನ್ನು ಸಿಪಿಐ(ಎಂ) ಬಲವಾಗಿ ಖಂಡಿಸಿದೆ. ಸ್ವತಃ ವಾಟ್ಸ್ ಆಪ್ ಭಾರತದಲ್ಲಿ 40 ಮಂದಿ ಸೇರಿದಂತೆ ಜಗತ್ತಿನಾದ್ಯಂತ 1400 ಜನಗಳ ಮೇಲೆ ಗುರಿಯಿಡಲಾಗಿತ್ತು ಎಂದು ಒಪ್ಪಿಕೊಂಡಿದೆ. ಫೋನ್ ಮಾಹಿತಿಗಳನ್ನು ಸೀಳಿದರೆ, ಅದರಲ್ಲಿರುವ ವಾಟ್ಸ್ ಆಪ್ ಮಾತ್ರವಲ್ಲ, 'ಟೆಲಿಗ್ರಾಮ್' ಅಥವ 'ಸಿಗ್ನಲ್' ಮುಂತಾದ ಸಾಮಾಜಿಕ ಮಾಧ್ಯಮಗಳ ವೇದಿಕೆಗಳನ್ನು ಬಳಸಿ ಕಳಿಸಿದ ಸಂದೇಶಗಳೆಲ್ಲವೂ ಹೀಗೆ ಸೀಳಿದ ಸಂಸ್ಥೆಗೆ ಲಭ್ಯವಾಗುತ್ತದೆ ಎಂಬುದನ್ನು ಗಮನಿಸಬಹುದು.

ಸ್ಮಾರ್ಟ್ ಫೋನ್ ಅಥವ ಕಂಪ್ಯೂಟರ್ ಮುಂತಾದ ಯಾವುದೇ ವೈಯಕ್ತಿಕ ಸಾಧನದಿಂದ, ಒಂದು ಸೂಕ್ತ ವಿಧಾನವನ್ನು ಅನುಸರಿಸದೆ, ಅದರಿಂದ ಯಾವುದೇ ರೀತಿಯಲ್ಲಿ ಮಾಹಿತಿ ಸೀಳುವುದು ವ್ಯಕ್ತಿಯ ಖಾಸಗಿತ್ವದ ಮೂಲಭೂತ ಹಕ್ಕಿನ ಒಂದು ಉಲ್ಲಂಘನೆಯಾಗುತ್ತದೆ ಎಂದು ಸುಪ್ರಿಂ ಕೋರ್ಟ್ ವಿಧಿಸಿದೆ. ಪೆಗಾಸಸ್ ನಂತಹ ಬೇಹುಗಾರಿಕೆ ಸಾಧನವನ್ನು ಬಳಸುವುದು, ಒಂದು ವ್ಯಕ್ತಿ ಖಾಸಗಿಯಾಗಿ ಹೊಂದಿರುವ ಮಾಹಿತಿ ಮತ್ತು ದತ್ತಾಂಶವನ್ನು ಕಾನೂನುಬಾಹಿರವಾಗಿ ಹುಡುಕುವುದು ಮತ್ತು ವಶಪಡಿಸಿಕೊಳ್ಳುವುದಕ್ಕೆ ಸಮನಾದುದದಾಗಿರುತ್ತದೆ.

ಪೆಗಾಸಸ್ ಬೇಹುಗಾರಿಕೆ ಸಾಧನದ ಮಾಲಕರಾದ ಎನ್.ಎಸ್.ಒ. ಈ ಬೇಹುಗಾರಿಕೆ ತಂತ್ರಾಂಶವನ್ನು ಸರಕಾರೀ ಏಜೆನ್ಸಿಗಳಿಗೆ ಮಾತ್ರವೇ ಮಾರುವುದು ಎಂದು ಘೋಷಿಸಿದೆ. ಇದು ಈ ತಂತ್ರಾಂಶವನ್ನು ಕಾರ್ಯಕರ್ತರು, ಪತ್ರಕರ್ತರು, ವಕೀಲರುಗಳ ಮೇಲೆ ಗುರಿಯಿಡಲು ಸರಕಾರದ ಒಂದು ಸಂಸ್ಥೆಯೇ ಖರೀದಿಸಿದೆಯೇ ಎಂಬ ಸಂದೇಹವನ್ನು ಎಬ್ಬಿಸುತ್ತದೆ.

ತನ್ನ ಏಜೆನ್ಸಿಗಳುಲ್ಲಿ ಯಾವುದಾದರೂ ಈ ಮಾಹಿತಿ ಸೀಳುವ ತಂತ್ರಾಂಶವನ್ನು ಬಳಸುವಲ್ಲ ಶಾಮೀಲಾಗಿದೆಯೇ ಎಂದು ಸರಕಾರ ಉತ್ತರಿಸಬೇಕಾಗಿದೆ. ಏಕೆಂದರೆ, ಈ ತಂತ್ರಾಂಶವನ್ನು ಯಾರ ಮೇಲೆ ಗುರಿಯಿಡಲಾಗಿದೆಯೋ ಅವರಲ್ಲಿ ಹೆಚ್ಚಿನ ವ್ಯಕ್ತಿಗಳ ಮೇಲೆ ಸರಕಾರ ಕಳೆದ ವರ್ಷದ ಮೇ ತಿಂಗಳಲ್ಲಿ ಗುರಿಯಿಟ್ಟಿತ್ತು. ಕಾನೂನಿನ ಅಡಿಯಲ್ಲಿ ಜನಗಳ ಫೋನುಗಳ ಮಾಹಿತಿಗಳನ್ನು ಸೀಳುವುದು ಒಂದು ಸೈಬರ್ ಅಪರಾಧವಾಗುತ್ತದೆ. ಸರಕಾರ ಹೇಳಿಕೊಳ್ಳುವಂತೆ ಪೆಗಾಸಸ್ ತಂತ್ರಾಂಶದಲ್ಲಿ ತೊಡಗಿರದಿದ್ದರೆ, ಅದು ಒಂದು ಎಫ್ ಐ ಆರ್ ನ್ನು ಏಕೆ ದಾಖಲಿಸಲಿಲ್ಲ, ಕ್ರಿಮಿನಲ್ ತನಿಖೆಯನ್ನು ಏಕೆ ಆರಂಭಿಸಲಿಲ್ಲ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಪ್ರಶ್ನಿಸಿದೆ. ಗೃಹ ವ್ಯವಹಾರಗಳ ಇಲಾಖೆಯ ಸೈಬರ್ ಮತ್ತು ಮಾಹಿತಿ ಭದ್ರತಾ ವಿಭಾಗ ಪೆಗಾಸಸ್ ತಂತ್ರಾಂಶವನ್ನು ಬಳಸಿಲ್ಲ ಎಂದು ಹೇಳುತ್ತದೆ. ಇತರ ಇಲಾಖೆಗಳಲ್ಲಿ ಬೇರೆ ಯಾವುದೂ, ಅಂದರೆ ಎನ್.ಟಿ.ಆರ್.ಒ., ಸಿಬಿಐ ಅಥವ ಆರ್.ಎ.ಡಬ್ಲ್ಯು ನಂತಹ ಸಂಸ್ಥೆಗಳು ಖರೀದಿಸಿಲ್ಲ ಎಂದು ಸರಕಾರ ಇನ್ನೂ ಘೋಷಿಸಿಲ್ಲ.


ಈ ವಿಷಯದಲ್ಲಿ, ಸರಕಾರ ತನ್ನ ಕೈ ಸ್ವಚ್ಛವಾಗಿದೆ ಎಂದು ಸಾಬೀತು ಪಡಿಸಬೇಕಾಗಿದೆ. ಅದು ಒಂದು ಕ್ರಿಮಿನಲ್ ತನಿಖೆಯನ್ನು ನಡೆಸಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ನಾಗರಿಕರ ಹಕ್ಕುಗಳನ್ನು ಮತ್ತು ಖಾಸಗಿತ್ವವನ್ನು ರಕ್ಷಿಸುವ ಒಂದು ಸಮಗ್ರ ದತ್ತಾಂಶ ಕಾಯ್ದುಕೊಳ್ಳುವ ಕಾಯ್ದೆಯನ್ನು ಪಾಸು ಮಾಡಬೇಕು ಎಂದೂ ಆಗ್ರಹಿಸಿದೆ.

ಹಾಸ್ಟೆಲ್ ಶುಲ್ಕಗಳ ವಿಪರೀತ ಏರಿಕೆಗೆ ಜೆ.ಎನ್.ಯು. ವಿದ್ಯಾರ್ಥಿಗಳ ಪ್ರತಿಭಟನೆ ಪೋಲೀಸ್ ಕಾರ್ಯಾಚರಣೆಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ (ಜೆ.ಎನ್.ಯು.)ದಲ್ಲಿ ಇತ್ತೀಚೆಗೆ ಪ್ರಕಟಿಸಿರುವ ಹಾಸ್ಟೆಲ್ ಶುಲ್ಕಗಳ ವಿಪರೀತ ಏರಿಕೆಯನ್ನು ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಪೋಲೀಸ್ ಕಾರ್ಯಾಚರಣೆ ನಡೆಸಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ಖಂಡಿಸಿದೆ. ಇದು ವಿಭಿನ್ನ ಹಿನ್ನೆಲೆಗಳ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಕೈಗೆಟಕುವಂತೆ ಮಾಡುವ ಜೆ.ಎನ್.ಯು.ನ ಪ್ರಸಕ್ತ ಸ್ವರೂಪವನ್ನು ಬದಲಿಸಿ ಅದನ್ನು ಒಂದು ಮೇಲ್ವರ್ಗದ ಜನಗಳ ವಿಶ್ವವಿದ್ಯಾಲಯವಾಗಿ ಮಾಡುತ್ತದೆ ಎಂದು ಅದು ಹೇಳಿದೆ. ಜೆ.ಎನ್.ಯು.ನ ವಾರ್ಷಿಕ ವರದಿಯ ಪ್ರಕಾರ 2017ರಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಲ್ಲಿ 40ಶೇ. ಮಂದಿಯ ಪಾಲಕರ ಮಾಸಿಕ ಆದಾಯ ರೂ.12,000ಕ್ಕಿಂತ ಕಡಿಮೆ ಇದೆ.

ಜೆ.ಎನ್.ಯು.ನ ಈ ಸ್ವರೂಪದಿಂದಾಗಿಯೇ, ಹಿಂದುಳಿದ ಪ್ರದೇಶಗಳಿಂದ ಮತ್ತು ಅಂಚಿಗೆ ತಳ್ಳಲ್ಪಟ್ಟ ವಿಭಾಗಗಳಿಂದ ಬರುವ ವಿದ್ಯಾರ್ಥಿಗಳಿಗೆ ಅವರ ಕೈಗೆಟಕುವ ರೀತಿಯಲ್ಲಿ ಶಿಕ್ಷಣವನ್ನು ಒದಗಿಸಿ ಅದು ಹಲವು ತಲೆಮಾರುಗಳ ಸಾಮಾಜಿಕ ಪ್ರಜ್ಞೆಯುಳ್ಳ ನಾಗರಿಕರು ಮತ್ತು ದೇಶ ಕಟ್ಟುವವರನ್ನು ನಿರ್ಮಿಸಿದೆ. ಈ ರೀತಿ ಕೈಗೆಟಕುವ ವೆಚ್ಚದಲ್ಲಿ ಪ್ರತಿಭೆಗಳು ಅರಳುತ್ತಿರುವುದರ ಮೇಲೆಯೇ ಈಗ ಹಲ್ಲೆ ಮಾಡಲಾಗುತ್ತಿದೆ. ಇದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಹೇಳಿದೆ.

ಉಪಕುಲಪತಿ ಈ ಬಗ್ಗೆ ವಿದ್ಯಾರ್ಥಿ ಸಂಘದ ಮುಖಂಡರೊಂದಿಗೆ ಚರ್ಚಿಸಲು ಕೂಡ ಹಠಮಾರಿತನದಿಂದ ನಿರಾಕರಿಸಿರುವುದರಿಂದಾಗಿ ಇಂತಹ ಸನ್ನಿವೇಶ ಏರ್ಪಟ್ಟಿದೆ. ಕೇಂದ್ರ ಮಾನವ ಸಂಪನ್ಮೂಲ ಮಂತ್ರಿಗಳು ಈಗ ಉಪಕುಲಪತಿಗಳಿಗೆ ವಿದ್ಯಾರ್ಥಿಗಳೊಂದಿಗೆ ಮಾತುಕತೆ ನಡೆಸುವಂತೆ ನಿರ್ದೇಶಿಸುವುದಾಗಿ ಆಶ್ವಾಸನೆಯನ್ನು ವಿದ್ಯಾರ್ಥಿಗಳಿಗೆ ನೀಡಿದ್ದಾರೆ. ಇದನ್ನು ಕೂಡಲೇ ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹಿಸಿದೆ.



17 ಶಾಸಕರ ಅನರ್ಹತೆಯ ಸ್ಪೀಕರ್ ಅದೇಶ ಎತ್ತಿ ಹಿಡಿದ ಸುಪ್ರಿಂ ಕೋರ್ಟ್–ಸಿಪಿಐ(ಎಂ) ಸ್ವಾಗತ

ಉಪ ಚುನಾವಣೆಯಲ್ಲಿ ಕೋಮುವಾದಿ ಹಾಗೂ ಪ್ರಜಾಪ್ರಭುತ್ವ ವಿರೋಧಿ ಬಿಜೆಪಿ ಹಾಗೂ ಅನರ್ಹರನ್ನು ಸೋಲಿಸಲು ಸಿಪಿಐ(ಎಂ) ಕರೆ

ಪ್ರಜಾಸತ್ತಾತ್ಮಕವಾಗಿ ರಚಿಸಲ್ಪಟ್ಟ ಶ್ರೀ ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ – ಕಾಂಗ್ರೆಸ್ ಮೈತ್ರಿ ಸರಕಾರವನ್ನು ಉರುಳಿಸುವ ಬಿಜೆಪಿ ಸಂಚಿಗೆ ಕೈಜೋಡಿಸಿದ್ದ ಆಡಳಿತ ಪಕ್ಷಗಳ 17 ಶಾಸಕರ ರಾಜಿನಾಮೆಯನ್ನು ತಿರಸ್ಕರಿಸಿ, ಪಕ್ಷಾಂತರ ನಿಷೇಧ ಕಾಯ್ದೆಯಡಿ ಅವರನ್ನು ಅನರ್ಹಗೊಳಿಸಿದ್ದ ವಿಧಾನ ಸಭೆಯ ಅಧ್ಯಕ್ಷರ ನಿರ್ಣಯವನ್ನು ಸುಪ್ರಿಂ ಕೋರ್ಟ್ ಎತ್ತಿ ಹಿಡಿದಿರುವುದು ಪ್ರಜಾಸತ್ತೆಗೆ ದೊರೆತ ಜಯವೆಂದು ಸಿಪಿಐ(ಎಂ) ರಾಜ್ಯಸಮಿತಿ ವರ್ಣಿಸಿ ಅದನ್ನು ಸ್ವಾಗತಿಸಿದೆ.ಇದು ಪಕ್ಷ ಮತ್ತು ತಮನ್ನು ಆಯ್ಕೆ ಮಾಡಿದ್ದ ಜನರಿಗೆ ದ್ರೋಹ ಎಸಗಿ ಪಕ್ಷಾಂತರ ಮಾಡುವ ಜನಪ್ರತಿನಿಧಿಗಳಿಗೆ ಗುಣಪಾಠವಾಗಿದೆ ಎಂದು ಅದು ಹೇಳಿದೆ.

ಸಂವಿಧಾನದ 164(1ಬಿ) ಮತ್ತು 361(ಬಿ)ಯಂತೆ ಅನರ್ಹಗೊಂಡವರು ಹೊಸದಾಗಿ ಚುನಾಯಿತರಾಗುವವರೆಗೆ ಸಚಿವ ಪದವಿಯನ್ನಾಗಲೀ ಅಥವಾ ಯಾವುದೇ ರಾಜಕೀಯ ಹುದ್ದೆಗಳನ್ನು ಪಡೆಯಲು ಅವಕಾಶವಿಲ್ಲವೆಂದು ಕೋರ್ಟ್ ಸ್ಪಷ್ಟ ಪಡಿಸಿದೆ.

ಅದೇ ರೀತಿ, ಕುದುರೆ ವ್ಯಾಪಾರದ ಮಾದರಿಯಲ್ಲಿ ಶಾಸಕರನ್ನು ಖರೀದಿಸುವ ಮತ್ತು ಪಕ್ಷಾಂತರದಂತಹ ಪ್ರಜಾಪ್ರಭುತ್ವ ವಿರೋಧಿ ಪ್ರಕ್ರಿಯೆಯನ್ನು ತಡೆಯುವ ನಿಟ್ಟಿನಲ್ಲಿ ಕಾನೂನನ್ನು ಬಲಪಡಿಸಲು ಕೋರ್ಟ್ ಸೂಚಿಸಿದೆ.

ಆದರೆ, ಪಕ್ಷಾಂತರ ನಿಷೇದ ಕಾಯ್ದೆಯಡಿ ಅನರ್ಹಗೊಂಡ ಶಾಸಕರಿಗೆ ಪುನಃ ಉಪಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಸಿಕ್ಕಿರುವುದು ದುರದೃಷ್ಟಕರ. ಇಂತಹ ತಪ್ಪಿತಸ್ಥರನ್ನು ಶಿಕ್ಷಿಸಲಾಗದ ದೌರ್ಬಲ್ಯ ಈ ಕಾಯ್ದೆ ಹೊಂದಿರುವುದನ್ನು ಇದು ಬಯಲಿಗೆಳೆದಿದೆ ಎಂದಿರುವ ಸಿಪಿಐ(ಎಂ) ರಾಜ್ಯಸಮಿತಿ ತಕ್ಷಣವೇ ಕಾಯ್ದೆಗೆ ಸೂಕ್ತ ತಿದ್ದುಪಡಿಯನ್ನು ಮಾಡುವಂತೆ ಸರಕಾರವನ್ನು ಒತ್ತಾಯಿಸಿದೆ.

ಮತದಾರರ ತೀರ್ಪನ್ನು ಲಘುವಾಗಿ ಕಾಣುವ ಜನವಿರೋಧಿ ಶಕ್ತಿಗಳನ್ನು ಸೋಲಿಸಿ

ಬಿಜೆಪಿ ತನ್ನ ಅಧಿಕಾರದಾಹದ ಕಾರಣದಿಂದ ತೊಡಗಿದ ವಿರೋಧ ಮುಕ್ತ ಭಾರತ ರಚನೆಯ ಅನೈತಿಕ ಸರ್ವಾಧಿಕಾರದ ರಾಜಕಾರಣದಿಂದ ಮತ್ತು ಆಡಳಿತ ಪಕ್ಷದ ಸದಸ್ಯರು ಕೈ ಜೋಡಿಸಿದ ಪ್ರಜಾಸತ್ತೆಯ ವಿರೋಧಿ ಸಂಚಿನಿಂದಾಗಿ, ಈ ಉಪ ಚುನಾವಣೆಗಳು ಜನತೆಯ ಮೇಲೆ ಹೇರಲ್ಪಟ್ಟಿರುವುದು ಸ್ಪಷ್ಟವಿದೆ.

ರಾಜ್ಯ ವ್ಯಾಪಕವಾದ ಬರಗಾಲ, ಅತಿವೃಷ್ಠಿ, ಪ್ರವಾಹಗಳಿಂದ ಮತ್ತು ಬೆಳೆಯುತ್ತಿರುವ ಆರ್ಥಿಕ ಬಿಕ್ಕಟ್ಟಿನ ಪರಿಣಾಮದಿಂದ ನರಳುತ್ತಿರುವಾಗ, ಜನತೆಗೆ ಪರಿಣಾಮಕಾರಿ ಯಾಗಿ ನೆರವಾಗುವ ಬದಲು ಇಂತಹ ಅನೈತಿಕ ರಾಜಕಾರಣದಲ್ಲಿ ತೊಡಗಿ, ಜನತೆಯನ್ನು ಸಂಕಷ್ಠದಲ್ಲಿಟ್ಟ ಜನವಿರೋಧಿ ಬಿಜೆಪಿ ಹಾಗೂ ಸುಪ್ರಿಂಕೋರ್ಟ್ ಅನರ್ಹರೆಂದು ಗುರುತಿಸಿದ ಮತ್ತು ವಿಧಾನ ಸಭೆಯ ಸಭಾಧ್ಯಕ್ಷರು ಪಕ್ಷಾಂತರ ನಿಷೇಧ ಕಾಯ್ದೆಯಡಿ ಶಾಸನ ಸಭೆಯಿಂದ ಅನರ್ಹರೆಂದು ವಜಾ ಗೊಳಿಸಿದವರನ್ನು ನಿರ್ಣಾಯಕವಾಗಿ ಸೋಲಿಸಲು ಸಿಪಿಐ(ಎಂ) ರಾಜ್ಯ ಸಮಿತಿ ರಾಜ್ಯದ ಮತದಾರರಿಗೆ ಕರೆ ನೀಡಿದೆ.

ಮತದಾರರ ತೀರ್ಪನ್ನು ಲಘುವಾಗಿ ಪರಿಗಣಿಸುವ ಈ ಜನವಿರೋಧಿ ಶಕ್ತಿಗಳನ್ನು ಸೋಲಿಸಲು ರಾಜ್ಯದಾದ್ಯಂತ ಸಿಪಿಐಎಂ ಘಟಕಗಳು ಕಾರ್ಯ ನಿರ್ವಹಿಸಿಲಿವೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಹೇಳಿದೆ.

ಉಡುಪು ಸಂಹಿತೆ ವಿಧಿಸುವ ಬೆಂಗಳೂರು ನಗರ ಸಿವಿಲ್ ನ್ಯಾಯಾಲಯದ ಕಾರ್ಯಾಲಯದ ಸುತ್ತೋಲೆ–ಜೆಎಂಎಸ್ ಖಂಡನೆ

“ಉಡುಪು, ಊಟ, ದೇವರು, ಧರ್ಮ ಇವೆಲ್ಲವುಗಳು ಈ ದೇಶದ ಪ್ರಜೆಗಳ ಖಾಸಗಿ ವಿಷಯಗಳಾಗಿದ್ದು ಇದರಲ್ಲಿ ಪ್ರತಿಯೊಬ್ಬ ನಾಗರಿಕರಿಗೂ ಆಯ್ಕೆಯ ಹಕ್ಕನ್ನು ಈ ದೇಶದ ಸಂವಿಧಾನ ನೀಡಿದೆ”

ಬೆಂಗಳೂರು ನಗರ ಸಿವಿಲ್ ನ್ಯಾಯಾಲಯದ ಕಾರ್ಯಾಲಯವು ದಿನಾಂಕ 11–11–2019 ರಂದು ಸಂಖ್ಯೆ/ಆ.ವಿ.(ಏ) 807/2019 – ಸುತ್ತೋಲೆಯೊಂದನ್ನು ಹೊರಡಿಸಿದೆ. ಇದರಲ್ಲಿ ಅವರು ಸರ್ಕಾರಿ ಸೇವೆಯಲ್ಲಿರುವ ಪುರುಷ ಅಧಿಕಾರಿಗಳು ಮತ್ತು ನೌಕರರು ಪ್ಯಾಂಟ್ ಮತ್ತು ಷರ್ಟ್ ಪೈಜಾಮ\ ಕುರ್ತಾ ಧರಿಸುವಂತೆ ಹಾಗೂ ಮಹಿಳಾ ಅಧಿಕಾರಿಗಳು ಮತ್ತು ನೌಕರರು ಸೀರೆ ಅಥವಾ ಚೂಡಿದಾರ್ ನಂತಹ ಸಭ್ಯ ಉಡುಪುಗಳನ್ನು ಧರಿಸುವುದು ಕಡ್ಡಾಯವಾಗಿದೆ ಎಂದು ಹೇಳಿದೆ. ತಮ್ಮ ಈ ಸುತ್ತೋಲೆಗೆ ಕರ್ನಾಟಕ ರಾಜ್ಯ ಸರಕಾರವು ದಿನಾಂಕ 12\9\2013 ರಲ್ಲಿ ಹೊರಡಿಸಿದ್ದ ಆದೇಶವನ್ನು ಆಧಾರವಾಗಿಟ್ಟುಕೊಂಡಿದ್ದಾಗಿ ಸೂಚಿಸಿದೆ. ತಾವು ಹೊರಡಿಸಿದ ಈ ಆದೇಶವನ್ನು ತಮ್ಮ ಆಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರುಗಳು ಇದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಹೇಳಿದೆ.

ಸಿವಿಲ್ ನ್ಯಾಯಾಲಯ ಕಾರ್ಯಾಲಯದ ಈ ಆದೇಶವನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಕರ್ನಾಟಕ ರಾಜ್ಯಸಮಿತಿ ತೀವ್ರವಾಗಿ ಖಂಡಿಸಿದೆ. ಈ ಮುಂಚೆ 2013 ರಲ್ಲಿ ಆಗಿನ ರಾಜ್ಯ ಸರಕಾರ ಹೊರಡಿಸಿದ್ದ ಆದೇಶವನ್ನೂ ಕೂಡ ಸಂಘಟನೆ ಖಂಡಿಸಿತ್ತು.

ಉಡುಪು, ಊಟ, ದೇವರು, ಧರ್ಮ ಇವೆಲ್ಲವುಗಳು ಈ ದೇಶದ ಪ್ರಜೆಗಳ ಖಾಸಗಿ ವಿಷಯಗಳಾಗಿದ್ದು ಇದರಲ್ಲಿ ಪ್ರತಿಯೊಬ್ಬ ನಾಗರಿಕರಿಗೂ ಆಯ್ಕೆಯ ಹಕ್ಕನ್ನು ಈ ದೇಶದ ಸಂವಿಧಾನ ನೀಡಿದೆ. ಇಂಥ ವಿಷಯಗಳನ್ನು ಅನಾವಶ್ಯಕವಾಗಿ ನಿಯಂತ್ರಿಸಲಾಗದು. ಈ ರೀತಿಯ ವಸ್ತ್ರ ಸಂಹಿತೆಯ ಆದೇಶವು ವ್ಯಕ್ತಿಗಳ ಸಾಂವಿಧಾನಿಕ ಹಕ್ಕಿನನ ಉಲ್ಲಂಘನೆಯೂ ಆಗುತ್ತದೆ. ಇಂಥ ಆದೇಶಗಳು ಸರಕಾರದಲ್ಲಿ ಕೆಲಸ ಮಾಡುವವರ ಮೇಲೆ ಒತ್ತಡ ನಿರ್ಮಾಣ ಮಾಡುತ್ತವೆ. ಸಿವಿಲ್ ನ್ಯಾಯಾಲಯದ ಕಾರ್ಯಾಲಯದ ಪ್ರಕಾರ ಇವರು ಹೇಳಿದ್ದನ್ನು ಬಿಟ್ಟು ಬೇರೆ ಉಡುಪು ತೊಟ್ಟವರು ಅಸಭ್ಯರೆ? ಅಷ್ಟಕ್ಕೂ ಈ ಆದೇಶ ಪ್ರಧಾನವಾಗಿ ಸ್ತ್ರೀಯರನ್ನು ಗುರಿಯಾಗಿಸಿಕೊಂಡು ಹೊರಡಿಸಲಾಗಿದೆ ಎಂಬುದನ್ನು ಬೇರೆ ಹೇಳಬೇಕಿಲ್ಲ. ಪುರುಷರು ನಮ್ಮ ಪ್ರಾಚೀನ ಮಾದರಿಯಾಗಿದ್ದ ಪಂಚೆ, ಬಾರಾಕಸಿ ಅಂಗಿ, ರುಮಾಲು ಅಥವಾ ಟೊಪ್ಪಿಗೆಗಳನ್ನು ಬಿಟ್ಟು ಈಗಾಗಲೇ ಬಹುದೂರ ಕ್ರಮಿಸಿದ್ದಾರೆ. ಅವರು ಫ್ಯಾಷನ್ನಿಗಾಗಿ ಪ್ಯಾಂಟು ಷರ್ಟ್ ತೊಟ್ಟಿರಬಹುದಾದರೂ ಅದರಿಂದ ಕೆಲಸ ಮಾಡುವಲ್ಲಿ ತುಂಬಾ ಅನುಕೂಲವಾಗಿದೆ. ಗಂಡಸರಂತೂ ಪ್ಯಾಂಟ್, ಕುರ್ತಾ, ಪೈಜಾಮಾ ಇತ್ಯಾದಿ ಧರಿಸುತ್ತಾರೆ. ಅವುಗಳಿಂದ ಅವರಿಗೆ ತೊಂದರೆ ಇಲ್ಲ. ಆದರೆ ಮಹಿಳೆಯರು ಸೀರೆ ಮತ್ತು ಚೂಡಿದಾರ್ ಮಾತ್ರ ಧರಿಸಬೇಕೆಂಬುದು ಲಿಂಗ ತಾರತಮ್ಯದ ಪರಾಕಾಷ್ಠೆಯಾಗಿದೆ.

ಬೆಂಗಳೂರಿನಂಥ ಮಹಾನಗರಗಳಲ್ಲಿ ದಿನಕ್ಕೆ ನೂರಾರು ಕಿ.ಮೀ ಬಸ್ಸು, ಮೆಟ್ರೋ ಕ್ಯಾಬ್ಗಳಲ್ಲಿ ಪ್ರಯಾಣಿಸಿ ಧಾವಂತದಲ್ಲಿ ಕೆಲಸದ ಸ್ಥಳ ತಲುಪುವ ಮಹಿಳೆಯರು ಸೀರೆ, ಚೂಡಿಗಳನ್ನೇ ತೊಡಬೇಕೆಂಬ ಆದೇಶ ನೀಡುವ ಮೂಲಕ ಸರ್ಕಾರ ಮತ್ತು ಅದರ ಜಾರಿಗೆ ಸುತ್ತೋಲೆ ಹೊರಡಿಸಿದ ಸಿವಿಲ್ ನ್ಯಾಯಾಲಯಗಳಿಗೆ ಮಹಿಳೆಯರು ಉಡುಪಿನಿಂದಾಗಿಯೇ ಅನುಭವಿಸುವ ಎಷ್ಟೋ ಸಮಸ್ಯೆಗಳ ಮಾಹಿತಿಯೇ ಇಲ್ಲವೆಂದು ನಾವು ಭಾವಿಸುತ್ತೇವೆ. ಸೀರೆಯ ಸೆರಗು ನಿರಿಗೆಗಳು, ಚೂಡಿದಾರದ ವೇಲ್‌ನಿಂದಾಗಿಯೇ ಎಷ್ಟು ಜನ ಮಹಿಳೆಯರು – ದ್ವಿಚಕ್ರತ್ರಿಚಕ್ರ ವಾಹನಗಳಲ್ಲಿ ಸಿಕ್ಕು ಅವಘಡಕ್ಕೆ ಬಲಿಯಾಗಿದ್ದಾರೆ. ಎಸ್ಕಲೇಟರ್ ಗಳಲ್ಲಿ ಸೀರೆ ಸೆರಗು ಸಿಲುಕಿ ಮುಗ್ಗರಿಸಿ ಬಿದ್ದು ಸಾವನ್ನಪ್ಪಿದವರು ಇದ್ದಾರೆ. ಸೀರೆ ಸಭ್ಯತೆ ಅದು ಮೈಮುಚ್ಚುವಂತೆ ಇರುತ್ತದೆ ಎಂಬ ಈ ಪೂರ್ವಾಗ್ರಹ ನಂಬಿಕೆಯೇ ಸರಿಯಲ್ಲ. ಹೊಟ್ಟೆ, ಟೊಂಕ, ಎದೆಗಳನ್ನು ಢಾಳವಾಗಿ ರಾಚುವಂತೆ ಪ್ರದರ್ಶಿಸ ಬಹುದಾದ ಸೀರೆಯಂಥ ಗ್ಲಾಮರ್ ವಸ್ತ ಇನ್ನೊಂದು ಇರಲಾರದು. ಆದರೂ ಅದು ಸಭ್ಯವೆನಿಸಲು ಕಾರಣ ನೋಡುವವರ ಮನೋಭಾವನೆ ಮಾತ್ರ ಎಂಬುದರಲ್ಲಿ ಎರಡು ಮಾತಿಲ್ಲ. ಸಭ್ಯ, ಅಸಭ್ಯಗಳು ಮನೋವೈಜ್ಞಾನಿಕ ಕ್ರಿಯೆಗಳೆ ಹೊರತು ವಸ್ತಗಳಲ್ಲ. ಮಹಾನಗರಗಳಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಈಗ ಅಸಂಖ್ಯ ಮಹಿಳೆಯರು ಹಗಲು, ರಾತ್ರಿ ಎನ್ನದೆ ದುಡಿಯುತ್ತಿದ್ದು ಎಂತೆಂಥ ಧಾವಂತದಲ್ಲಿ ಕೆಲಸಗಳನ್ನು ಮಾಡುತ್ತಿದ್ದಾರೆ. ಕೆಲಸ ಮಾಡುವ ಭರದಲ್ಲಿ ಅವರಿಗೆ ಸೀರೆಯ ಸೆರಗು, ವೇಲ್‌ನ ಚುಂಗು ಸಂಭಾಳಿಸಿಕೊಳ್ಳುವುದೆಂದರೆ ಅದೆಷ್ಟು ರೇಜಿಗೆ ಎಂಬುದು ಪ್ಯಾಂಟ, ಷರ್ಟ್ ಧರಿಸಿದ ಗಂಡಸರಿಗೆ ಮತ್ತು ಮಹಿಳೆಯರನ್ನು ಗಂಡುದೃಷ್ಟಿಕೋನದಿಂದ ನೋಡುವ ಸ್ತ್ರೀಯರಿಗೂ ಗೊತ್ತಾಗಲಾರದು.

ಯಾರು ಏನು ತೊಡಬೇಕು ಎಂಬುದನ್ನು ಕುರಿತು ಫರಮಾನು ಹೊರಡಿಸುವ ಬದಲು ಪ್ರಾಮಾಣಿಕವಾಗಿಯೂ, ಚಾಕಚಕ್ಯತೆಯಿಂದ ಕೆಲಸ ಮಾಡುವಂತೆ ನೌಕರರನ್ನು ಹುರಿದುಂಬಿಸಬೇಕು. ಕೆಲಸ ಮಾಡುವ ಸ್ಥಳದಲ್ಲಿ ಮಹಿಳೆಯರಿಗೆ ಇನ್ನಷ್ಟು ಆರೋಗ್ಯಪೂರ್ಣ ಸೌಲಭ್ಯಗಳನ್ನು ನೀಡಿ ಸಿವಿಲ್ ನ್ಯಾಯಾಲಯಗಳು ತಮ್ಮ ಘನತೆ ಮೆರೆಯಬೇಕು ಎಂದು ಆಗ್ರಹಿಸುತ್ತೇವೆ. ಈ ಆದೇಶವನ್ನು ಹಿಂತೆಗೆದುಕೊಳ್ಳಬೇಕೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸಿದೆ.

(ಪತ್ರಿಕಾ ಹೇಳಿಕೆ 13 ನವೆಂಬರ್ 2019)

ಬಾಬ್ರಿ ಮಸೀದಿ ಧ್ವಂಸ ಪ್ರಕರಣ ಹಿಂಪಡೆಯುವುದು ಸರಿಯಲ್ಲ

1992 ರಲ್ಲಿ ಬಾಬ್ರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಬಿಜೆಪಿ ಮುಖಂಡರಾದ ಎಲ್.ಕೆ. ಅಡ್ವಾಣಿ, ಮುರಳಿ ಮನೋಹರ ಜೋಶಿ ಮೊದಲಾದವರ ಮೇಲೆ ಪ್ರಕರಣ ದಾಖಲಾಗಿದ್ದು, ಅದನ್ನು ಹಿಂಪಡೆಯಬೇಕೆಂದು ಪೇಜಾವರ ಶ್ರೀಗಳು ಆಗ್ರಹಪಡಿಸಿರುವುದು ಕಾನೂನಿಗೆ ವಿರೋಧ ಎಂದು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಅಭಿಪ್ರಾಯಪಟ್ಟಿದೆ.

ಅಯೋಧ್ಯೆ ವಿವಾದ ಕುರಿತು ನವಂಬರ್ 9 ರಂದು ಸುಪ್ರೀಂಕೋರ್ಟು ನೀಡಿದ ತೀರ್ಪಿನಲ್ಲಿ 1992 ರಲ್ಲಿ ಬಾಬ್ರಿ ಮಸೀದಿಯನ್ನು ನೆಲಸಮ ಮಾಡಿರುವುದು ಕಾನೂನಿಗೆ ವಿರೋಧ ಎಂದು ಸ್ಪಷ್ಟಪಡಿಸಿದೆ. ಆದ್ದರಿಂದ ಪ್ರಕರಣವನ್ನು ಹಿಂತೆಗೆದುಕೊಳ್ಳುವ ಪ್ರಸಂಗ ಉದ್ಭವಿಸುವುದಿಲ್ಲ. ಬದಲಾಗಿ ಕ್ರಿಮಿನಲ್ ಕೃತ್ಯವಾಗಿರುವ ಬಾಬ್ರಿ ಮಸೀದಿ ಧ್ವಂಸ ಪ್ರಕರಣದ ಕೇಸನ್ನು ತ್ವರಿತವಾಗಿ ಇತ್ಯರ್ಥಪಡಿಸಬೇಕು ಹಾಗೂ ಆಪಾದಿತರಿಗೆ ಶಿಕ್ಷೆ ವಿಧಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸುತ್ತದೆ.

ಬಾಲಕೃಷ್ಣ ಶೆಟ್ಟಿ
ಕಾರ್ಯದರ್ಶಿ

ಮರಳುಗಾರಿಕೆ ಆರಂಭಿಸುವಂತೆ ಆಗ್ರಹಿಸಿ ಕುಂದಾಪುರದಲ್ಲಿ ಕಾರ್ಮಿಕರಿಂದ ಪಾದಯಾತ್ರೆ

ಕುಂದಾಪುರ ಹಾಗೂ ಬೈಂದೂರಿನ ಎಲ್ಲ ನದಿಗಳಲ್ಲಿ ಮರಳುಗಾರಿಕೆ ಆರಂಭಿಸಬೇಕು ಮತ್ತು ಈ ವಿಚಾರದಲ್ಲಿ ಸರಕಾರ ಕೂಡಲೇ ಮಧ್ಯ ಪ್ರವೇಶಿಸಬೇಕೆಂದು ಆಗ್ರಹಿಸಿ ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ (ಸಿಐಟಿಯು) ನೇತೃತ್ವದಲ್ಲಿ ನವಂಬರ್ 4 ರಂದು ಕುಂದಾಪುರದಿಂದ ಹಾಲಾಡಿಯಲ್ಲಿರುವ ಕುಂದಾಪುರ ಶಾಸಕರ ಮನೆಯವರೆಗೆ ಪಾದಯಾತ್ರೆಯನ್ನು ಹಮ್ಮಿಕೊಳ್ಳಲಾಗಿತ್ತು.

ಬೆಳಗ್ಗೆ ಕುಂದಾಪುರದ ವಿನಾಯಕ ಥಿಯೇಟರ್ ಎದುರಿನಿಂದ ಪಾದಯಾತ್ರೆ ಆರಂಭಗೊಂಡಿದ್ದು, ದಾರಿಯುದ್ದಕ್ಕೂ ವಿವಿಧ ಗ್ರಾಮ ಘಟಕಗಳ ಕಾರ್ಯಕರ್ತರು ಪಾದಯಾತ್ರೆಯನ್ನು ಸೇರಿಕೊಂಡರು. ಸಂಜೆ ವೇಳೆ ಸಾವಿರಾರು ಸಂಖ್ಯೆಯಲ್ಲಿದ್ದ ಕಾರ್ಮಿಕರ ಪಾದಯಾತ್ರೆ 30 ಕಿ.ಮೀ. ದೂರದಲ್ಲಿರುವ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ ಅವರ ಮನೆ ತಲುಪಿತು.

ಪಾದಯಾತ್ರೆಯ ಮೂಲಕ ಸಾಗಿ ಬಂದ ಕಾರ್ಮಿಕರನ್ನು ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ ಬರಮಾಡಿಕೊಂಡರು. ಅವರಿಗೆ ಬೆಲ್ಲ, ನೀರು ಹಾಗೂ ಲಘು ಉಪಾಹಾರವನ್ನು ನೀಡಿದ್ದಲ್ಲದೆ ಆಸನದ ವ್ಯವಸ್ಥೆಯನ್ನೂ ಮಾಡಿದ್ದರು.

ವರದಿ: ವಾ.ಉ.

ಈ ಸಂದರ್ಭದಲ್ಲಿ ಮಾತನಾಡಿದ ಕಾರ್ಮಿಕ ಮುಖಂಡರು ಈ ಹಿಂದೆ ಜಿಲ್ಲಾಧಿಕಾರಿ ಕಚೇರಿ ಎದುರು ಕಾರ್ಮಿಕರು ಧರಣಿ ನಡೆಸಿದಾಗ ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ಬೊಮ್ಮಾಯಿ ಅ.15 ರೊಳಗೆ ಎಲ್ಲಾ ಕಡೆಗಳಲ್ಲೂ ಮರಳು ತೆಗೆಯುವ ಪ್ರಕ್ರಿಯೆಗೆ ಚಾಲನೆ ನೀಡುವುದಾಗಿ ಭರವಸೆ ನೀಡಿದ್ದರು. ಆದರೆ ನಮ್ಮಲ್ಲಿ ಈವರೆಗೆ ಮರಳನ್ನು ತೆಗೆಯುವ ಪ್ರಕ್ರಿಯೆ ಆರಂಭವಾಗಿಲ್ಲ. ಇದರಿಂದ ಕೆಲಸವಿಲ್ಲದೆ ಕಾರ್ಮಿಕ ಕುಟುಂಬಗಳು ಬೀದಿ ಪಾಲಾಗಿದೆ ಎಂದು ಆರೋಪಿಸಿದರು.

ಬಳಿಕ ಮಾತನಾಡಿದ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ ಮರಳಿನ ಪ್ರಮಾಣವನ್ನು ಹೆಚ್ಚಿಸಿ ಅರ್ಧದಲ್ಲಿ ನಿಂತಿರುವ ಕಾಮಗಾರಿಗಳಿಗೆ ಕೂಡಲೇ ಮರಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗುವುದು ಎಂದು ಭರವಸೆಯನ್ನು ನೀಡಿದರು.

ಸಂಘದ ತಾಲೂಕು ಅಧ್ಯಕ್ಷ ಯು. ದಾಸ್ ಭಂಡಾರಿ, ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ಜಿಲ್ಲಾ ಮುಖಂಡರಾದ ಬಾಲಕೃಷ್ಣ ಶೆಟ್ಟಿ, ಕೆ.ಶಂಕರ್, ಎಚ್.ನರಸಿಂಹ, ಮಹಾಬಲ ವಡೇರಹೋಬಳಿ, ರಾಜು ಪಡುಕೋಣೆ, ತಾಲೂಕು ಮುಖಂಡರಾದ ಜಗದೀಶ ಆಚಾರ್ಯ, ಸಂತೋಷ ಹೆಮ್ಮಾಡಿ, ರಮೇಶ್ ಗುಲ್ವಾಡಿ, ಅರುಣ್ ಕುಮಾರ್ ಗಂಗೊಳ್ಳಿ, ವಿಜಯೇಂದ್ರ ಕೋಣಿ, ಚಿಕ್ಕ ಮೊಗವೀರ, ಸುಧಾಕರ ಕುಂಭಾಶಿ, ಪ್ರಶಾಂತ್ ಸಳ್ವಾಡಿ, ಶ್ರೀನಿವಾಸ ಪೂಜಾರಿ, ರಾಮಚಂದ್ರ ನಾವಡ ಮೊದಲಾದವರು ಉಪಸ್ಥಿತರಿದ್ದರು.

ಗೋಪಾಲ ಪೂಜಾರಿ ಇನ್ನಿಲ್ಲ



ಗೋಪಾಲ ಪೂಜಾರಿ (73 ವರ್ಷ) ಇವರು 8 ನವೆಂಬರ್ 19 ರಂದು ತಮ್ಮ ಸ್ವಗೃಹದಲ್ಲಿ ನಿಧನರಾಗಿದ್ದಾರೆ. ಹೆಂಚು ಕಾರ್ಖನೆಯ ಕಾರ್ಮಿಕನಾಗಿ ಕಾರ್ಮಿಕ ಚಳುವಳಿಯಲ್ಲಿ ತನ್ನನ್ನು ತಾನು ತೊಡಗಿಸಿ ಕೊಂಡವರು. ಆರಂಭದ ದಿನಗಳಲ್ಲಿ ಗುರುಪುರ ವಲಯ ಮಟ್ಟದ ಕಾರ್ಮಿಕ ಚಳುವಳಿ ಮತ್ತು ರೈತ ಚಳುವಳಿಗಳಲ್ಲಿ ಭಾಗಿಗಳಾಗಿ ಕಾರ್ಮಿಕ ಚಳುವಳಿಗಳಿಗೆ ನಾಯಕತ್ವವನ್ನು ನೀಡುತ್ತಾ ಭೂಸುಧಾರಣಾ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವರು ವಾಮಂಜೂರು, ಇರುವೈಲು ಮೊದಲಾದ ಭಾಗಗಳಲ್ಲಿ ಸಿಪಿಐಎಂ ಪಕ್ಷ ಸಂಘಟನೆಯನ್ನು ಕಟ್ಟುವಲ್ಲಿ ಸಕ್ರೀಯರಾಗಿ ದುಡಿದವರು. ಊರಿನ ಯುವಜನರನ್ನು ಸಂಘಟಿತರನ್ನಾಗಿಸಲು ಕಟ್ಟಿದ ಜೈ ಶಂಕರ್ ಮಿತ್ರ ಮಂಡಳಿಯ ಸ್ಥಾಪಕರಲ್ಲಿ ಇವರೂ ಒಬ್ಬರು.... ಯಕ್ಷಗಾನ ಕಲಾವಿದ, ಮುತ್ಸದ್ಧಿ, ಕಲಾವಿದ, ಗೋಪಾಲ ಪೂಜಾರಿಯನ್ನು ಕಳೆದುಕೊಂಡಿರುವುದು ಅತೀವ ನೋವು ತಂದಿದೆ.

ನಾವುಂದ: ನಿವೇಶನ ರಹಿತರಿಗೆ ಸರಕಾರಿ ಜಾಗ ಗುರುತಿಸಲು ಒತ್ತಾಯ

ನಾವುಂದ ಗ್ರಾಮ ಪಂಚಾಯತ್ ವ್ಯಾಪ್ತಿಯ ಮನೆ, ನಿವೇಶನ ರಹಿತರ ಸಮಾವೇಶ ಸ್ಥಳೀಯ ಗ್ರಾಮ ಪಂಚಾಯತ್ ಕಚೇರಿ ವಠಾರದಲ್ಲಿ ಇಂದು ಯಶಸ್ವಿಯಾಗಿ ಜರುಗಿತು. ನಾವುಂದ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಈಗಾಗಲೇ ಗುರುತಿಸಿರುವ ಸರಕಾರಿ ಜಾಗವನ್ನು ನಿವೇಶನ ರಹಿತ ಅರ್ಹ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಿಸಲು ಸರಕಾರ ಮುಂದಾಗಬೇಕು ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಸರಕಾರವನ್ನು ಆಗ್ರಹಿಸಿದರು ಹಾಗೂ ಡೀಮ್ಡ್ ಫಾರೆಸ್ಟ್ ಕಾನೂನು ತೊಡಕನ್ನು ತೆಗೆದು ಹಾಕಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ನಾವುಂದ ಗ್ರಾಮ ಪಂಚಾಯತ್ ಅಧ್ಯಕ್ಷ ನರಸಿಂಹ ದೇವಾಡಿಗ, ಪಂಚಾಯತ್ ನಿವೇಶನ ರಹಿತ ಅರ್ಜಿದಾರರನ್ನು ಉದ್ದೇಶಿಸಿ ಮಾತನಾಡುತ್ತಾ ಗ್ರಾಮ ಪಂಚಾಯತ್ ವತಿಯಿಂದ ನಿವೇಶನ ರಹಿತರಿಗೆ ನಿವೇಶನ ಸ್ಥಳ ಖಾದಿರಿಸಲಾಗಿದ್ದು ಅತೀ ಶೀಘ್ರವಾಗಿ ಹಕ್ಕು ಪತ್ರ ವಿತರಣೆಯನ್ನು ಮಾಡಲಾಗುವುದೆಂದು ಭರವಸೆ ನೀಡಿದರು. ಮುಖಂಡರಾದ ನಾಗರತ್ನ ನಾಡ, ಸಿಂಗಾರಿ ನಾವುಂದ, ರಾಘವೇಂದ್ರ ಉಪ್ಪುಂದ ಉಪಸ್ಥಿತರಿದ್ದರು. ನಾವುಂದ ಗ್ರಾಮ ಪಂಚಾಯತ್ ವ್ಯಾಪ್ತಿಯ ಮನೆ, ನಿವೇಶನ ರಹಿತರ ಹೋರಾಟ ಸಮಿತಿಯನ್ನು ಸಿಂಗಾರಿ ನಾವುಂದ ರವರ ಸಂಚಾಲಕತ್ವದಲ್ಲಿ ಆಯ್ಕೆ ಮಾಡಲಾಯಿತು. ಸಭೆಯಲ್ಲಿ ಶೀಲಾವತಿ ಉಪಸ್ಥಿತರಿದ್ದರು.

ನಿವೇಶನ ರಹಿತರಿಂದ ಭೂಮಿ ಹಕ್ಕು ಪತ್ರಕ್ಕಾಗಿ ಅನಿರ್ಧಿಷ್ಟಾವಧಿ ಧರಣಿ

ಉಡುಪಿ ಜಿಲ್ಲೆಯಾದ್ಯಂತ ನಿವೇಶನ ರಹಿತರಿಗೆ ಭೂಮಿ ಹಕ್ಕು ಪತ್ರ ಕೊಡಬೇಕೆಂದು ಒತ್ತಾಯಿಸಿ ನವಂಬರ್ 18 ರಿಂದ ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಅನಿರ್ಧಿಷ್ಟಾವಧಿ ಧರಣಿ ಮುಷ್ಕರ ಹೋರಾಟ ಕಾರ್ಯಕ್ರಮ ಯಶಸ್ವಿಯಾಗಿಸಲು ಪೂರ್ವಭಾವಿ ಸಿದ್ಧತಾ ಸಭೆಯನ್ನು ದಿನಾಂಕ 9 ನವೆಂಬರ್ 2019 ರಂದು ಕುಂದಾಪುರ ಕಾರ್ಮಿಕ ಭವನದಲ್ಲಿ ನಿವೇಶನ ರಹಿತರ ಹೋರಾಟ ಸಮಿತಿಯ ಆಶ್ರಯದಲ್ಲಿ ಜಿಲ್ಲೆಯಾದ್ಯಂತ ಸುಮಾರು 60 ಕ್ಕೂ ಹೆಚ್ಚಿನ ಗ್ರಾಮಗಳಲ್ಲಿ ನಿವೇಶನ ರಹಿತರ ಗ್ರಾಮ ಸಮಾವೇಶ ಆಯೋಜಿಸಿ, ಸ್ಥಳೀಯ ಗ್ರಾಮ ಸಮಿತಿ ಆಯ್ಕೆಯಾದ ಮುಖಂಡರ ಸಭೆಯನ್ನು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷ ಪುಟ್ಟಮಾದು ರವರು ಉದ್ಘಾಟಿಸಿ ಮಾತನಾಡುತ್ತಾ, ಸಮಾಜದ ನಿರ್ಲಕ್ಷಕ್ಕೊಳಪಟ್ಟ ಕಟ್ಟಕಡೆಯ, ರಟ್ಟೆಯ ಶಕ್ತಿಯಕ್ತಿಯಲ್ಲದೆ ಬೇರೇನನ್ನೂ ಹೊಂದಿರದ ಬಡ ಕೂಲಿ ಕಾರ್ಮಿಕರನ್ನು ಅವರ ಹಕ್ಕುಗಳಿಗಾಗಿ





ಸಂಘಟಿಸಿ ಹೋರಾಡುತ್ತಿರುವ ದೇಶ ಮಟ್ಟದ ಏಕೈಕ, ಬಲಿಷ್ಟ ಸಮರಶೀಲ ಸಂಘಟನೆಯಾಗಿರುವ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆಯಲ್ಲಿ, ಸದಸ್ಯರಾಗಿ ನಿವೇಶನ ಹಕ್ಕು ಪತ್ರಕ್ಕಾಗಿ ಈ ಹೋರಾಟದಲ್ಲಿ ಸಕ್ರೀಯವಾಗಿ ಬಾಗವಹಿಸಲು ಕರೆ ಕೊಟ್ಟರು. ಮುಖಂಡರಾದ ವೆಂಕಟೇಶ ಕೋಣಿ, ನಾಗರತ್ನ ನಾಡ, ಸತೀಶ ಖಾರ್ವಿ, ಪದ್ಮಾವತಿ ಶೆಟ್ಟಿ, ಕಾಂಚನಮಾಲ ಉಪಸ್ಥಿತರಿದ್ದರು.

ಹಂಗಳೂರು

ಪ್ರತಿನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಶ್ರೀಮಂತರು ಅತಿಕ್ರಮಣ ಮಾಡಿಕೊಂಡಿರುವ ಸರಕಾರಿ ಭೂಮಿಯನ್ನು ತೆರವುಗೊಳಿಸಿ ಅದನ್ನು ಸ್ವಂತ ನಿವೇಶನ ಹೊಂದಿರದ ದಲಿತ, ಹಿಂದುಳಿದ ಅಲ್ಪಸಂಖ್ಯಾತ ಹಾಗೂ ಇತರ ಬಡ ಜನರಿಗೆ ನೀಡಲು ಸರಕಾರ ಮುಂದಾಗಬೇಕು ಎಂದು ಕೃಷಿಕೂಲಿಕಾರರ ರಾಜ್ಯ ಮುಖಂಡರಾದ ಪದ್ಮಾವತಿ ಶೆಟ್ಟಿ ಅಭಿಪ್ರಾಯ ಪಟ್ಟರು. 6 ನವಂಬರ್ 2019 ರಂದು ಹಂಗಳೂರು ಗ್ರಾಮ ಪಂಚಾಯತ್ ಕಚೇರಿ ಬಳಿ ಜರಗಿದ ನಿವೇಶನ ರಹಿತ ಅರ್ಹ ಫಲಾನುಭವಿಗಳ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು. ಕೃಷಿಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಮಾತನಾಡುತ್ತಾ, ನಿವೇವನರಹಿತರ ಭೂಮಿ ಹಕ್ಕಿನ ಬೃಹತ್ ಹೋರಾಟಕ್ಕೆ ನಿವೇಶನ ರಹಿತ ಫಲಾನುಭವಿಗಳು ಹೋರಾಟದ ಕಣಕ್ಕೆ ದುಮುಕಬೇಕು ಎಂದು ಹೇಳಿದರು. ಮುಖಂಡರಾದ ಅಮ್ಮಯ್ಯ ಪೂಜಾರಿ, ಕಾಂಚನ ಮಾವ, ನಾಗರತ್ನ ನಾಡ ಮೊದಲಾದವರು ಉಪಸ್ಥಿತರಿದ್ದರು.

ವರದಿ: ವೆಂಕಟೇಶ ಕೋಣಿ

ಗ್ರಾಮ ಪಂಚಾಯತ ಹಾಗೂ ಅಂಗನವಾಡಿ ನೌಕರರ ಬಿ.ಪಿ.ಎಲ್. ಕಾರ್ಡು ರದ್ದತಿ ವಿರೋಧಿಸಿ “ಬೆಳಗಾವಿ ಚಲೋ”



ಅಂಗನವಾಡಿ ನೌಕರರು, ಪಂಚಾಯತ ನೌಕರರು ರಾಜ್ಯ ಸರಕಾರ ನಿಗದಿ ಪಡಿಸಿದ ಆದಾಯ 1 ಲಕ್ಷ 20 ಸಾವಿರ ಮೀರಿದ್ದಾರೆಂದು ತಿಳಿದು ಸರಕಾರ ಇವರು ಪಡೆದುಕೊಂಡಿರುವ ಬಿ.ಪಿ.ಎಲ್ ಕಾರ್ಡುಗಳನ್ನುರದ್ದು ಪಡಿಸಲು ಆದೇಶಿಸಿದ ಜಿಲ್ಲಾಧಿಕಾರಿಗಳ ಕ್ರಮವನ್ನು ಖಂಡಿಸಿ ಸಾವಿರಾರು ಗ್ರಾಮ ಪಂಚಾಯತ ನೌಕರರು, ಅಂಗನವಾಡಿ ನೌಕರರು ಬೃಹತ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ- ಜಿ.ಪಂ ಸಿಇಓ ರವರಿಗೆ ಮನವಿ ಅರ್ಪಿಸಿ ಬಿ.ಪಿ.ಎಲ್ ರೇಶನ್ ಕಾರ್ಡು ರದ್ದತಿಯನ್ನು ನಿಲ್ಲಿಸಲು ಮನವಿ ಸಲ್ಲಿಸಿದರು.

ಸರಕಾರ ನಿಗದಿ ಪಡಿಸಿದ ವೇತನದಲ್ಲಿ ಹಾಗೂ ಇವತ್ತಿನ ಬೆಲೆ ಏರಿಕೆ ದಿನಗಳಲ್ಲಿ ಸಿಗುತ್ತಿರುವ ವೇತನದಲ್ಲಿ ಅಂಗನವಾಡಿ ನೌಕರರು, ಪಂಚಾಯತ ನೌಕರರು ಬದುಕುವದು ತುಂಬಾ ಕಷ್ಟಕರವಾಗಿದೆ. ಇಂತಹ ಗಂಭೀರ ಸಮಯದಲ್ಲಿ ರೇಶನ್ ಕಾರ್ಡು ರದ್ದು ಪಡಿಸುವದು ದುರದೃಷ್ಟಕರ. ಈಗಾಗಲೇ ರಾಯಬಾಗ ತಾಲೂಕಿನ ತಹಶೀಲ್ದಾರರು ಗ್ರಾಮ ಪಂಚಾಯತ ನೌಕರರಿಗೆ, ಅಂಗನವಾಡಿ ನೌಕರರಿಗೆ ನೋಟೀಸು ನೀಡಿ ಯಾವಾಗಿನಿಂದ ರೇಶನ್ ಕಾರ್ಡ ಪಡೆಯಲಾಗಿದೆ ಅವತ್ತಿನಿಂದ ಇಲ್ಲಿಯವರೆಗೆ ರೂ.28.50 ಕೆ.ಜಿ ಗೆ ಒಟ್ಟು 70 ರಿಂದ 80 ಸಾವಿರ ದಂಡ ತುಂಬಲು ಹೇಳಿದ್ದರಿಂದ ನೌಕರರು ಅಘಾತಗೊಂಡಿದ್ದಾರೆ ಎಂದು ಕಾರ್ಮಿಕ ಮುಖಂಡ ಕಾ॥ ವ್ಹಿ.ಪಿ. ಕುಲಕರ್ಣಿ ಹೇಳಿದರು.

ರಾಯಬಾಗ ತಾಲೂಕಿನ ತಹಶೀಲ್ದಾರರ ನೀತಿ ವಿರೋಧಿಸಿ ಅವರ ಕಚೇರಿ ಮುಂದೆ ಹೋರಾಟ ನಡೆಸಲು ರಾಯಬಾಗ ತಾಲೂಕಿನ ನೌಕರರಿಗೆ ಕರೆ ಕೊಟ್ಟರು. ಈಗಿರುವ 1 ಲಕ್ಷ 20 ಸಾವಿರ ಮಿತಿಯನ್ನು 2 ಲಕ್ಷ 50 ಸಾವಿರಕ್ಕೆ ಹೆಚ್ಚಿಸಬೇಕೆಂದು ಸರಕಾರಕ್ಕೆ ಒತ್ತಾಯಿಸಿದರು.

ಅಂಗನವಾಡಿ ನೌಕರರು ಕೇವಲ ಗೌರವಧನದ ಆಧಾರದಲ್ಲಿ ದುಡಿಯುತ್ತಿದ್ದಾರೆ. ರಾಜ್ಯ ಸರಕಾರ ರೂ. 5 ಸಾವಿರ, ಕೇಂದ್ರ ಸರಕಾರ ರೂ.3 ಸಾವಿರ ಒಟ್ಟು 8 ಸಾವಿರ ವೇತನದಲ್ಲಿ ಇವರು ದಿನಗಳನ್ನು ಕಳೆಯುತ್ತಿದ್ದಾರೆ. ಇವರಿಗೆ ಕನಿಷ್ಠ ವೇತನ ವ್ಯಾಪ್ತಿಯಲ್ಲಿಯೂ ಸರಕಾರ ತಂದಿಲ್ಲ. ಗ್ರಾಮ ಪಂಚಾಯತ ನೌಕರರಿಗೆ ಕನಿಷ್ಠ ವೇತನ ರೂ.10 ಸಾವಿರದಿಂದ 13 ಸಾವಿರದ ವರೆಗೆ ನಿಗದಿ ಪಡಿಸಿದ್ದರೂ ಬಹುತೇಕ ಕಡೆಗಳಲ್ಲಿ ಇವರಿಗೆ ಕನಿಷ್ಠ ವೇತನ ಜಾರಿಯಾಗಿಲ್ಲ. ಕೇವಲ ರೂ. 4000-5000 ನೀಡಲಾಗುತ್ತಿದೆ. ಇದು ಸಹ ಕಳೆದ 10-12 ತಿಂಗಳಿಂದ ವೇತನ ಪಾವತಿಯಾಗಿಲ್ಲ. ಬಿ.ಪಿ.ಎಲ್. ಕಾರ್ಡ ಇದೆ ಎಂದು ಬದುಕುತ್ತಿರುವಾಗ ಧೀಡಿರಾಗಿ ಜಿಲ್ಲಾಡಳಿತವು ಇವರ ಕಾರ್ಡು ರದ್ದು ಪಡಿಸುತ್ತಿರುವದು ನಿಜವಾಗಿ ಊಟ ಕಸಿದುಕೊಳ್ಳುವ ನೀತಿ ಎಂದು ಸಿಐಟಿಯು ನ ಜಿಲ್ಲಾ ಸಂಚಾಲಕರಾದ ಗೈಬು ಜೈನೆಖಾನ ಸರಕಾರದ ಕ್ರಮವನ್ನು ಖಂಡಿಸಿದರು.

ಸರಕಾರ ಹೇಳಿದ ಪ್ರಕಾರ ಒಬ್ಬ ಮನುಷ್ಯನಿಗೆ 2700 ಕ್ಯಾಲರಿ ಊಟ ಬೇಕು. ಆದರೆ 2700 ಕ್ಯಾಲರಿ ಊಟ ಸಿಗುತ್ತಿಲ್ಲ. ಆದ್ದರಿಂದ ಬಿ.ಪಿ.ಎಲ್ ಕಾರ್ಡ ರದ್ದತಿ ನಿಲ್ಲಿಸಬೇಕೆಂದು ಜೈನೆಖಾನ್ ಒತ್ತಾಯಿಸಿದರು. ಸಂಚಾಲಕ ಸಮಿತಿ ಸದಸ್ಯರಾದ ಎಲ್.ಎಸ್. ನಾಯಕ್, ಜಿ.ವ್ಹಿ. ಕುಲಕರ್ಣಿ, ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತನ ಸಿಇಓ ಪ್ರತಿಭಟನಾ ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿ ಸರಿಯಾಗಿ ಪರಿಶೀಲಿಸಿ ಮುಂದಿನ ಕ್ರಮ ವಹಿಸಲು ಜಿಲ್ಲೆಯ ಎಲ್ಲ ತಾಲೂಕಿನ ತಹಶೀಲ್ದಾರರಿಗೆ ಸೂಚಿಸುತ್ತೇವೆ ಎಂದು ಹೇಳಿದರು.

ಪಂಚಾಯತ ನೌಕರರ ಸಂಘದ ಮುಖಂಡರಾದ ವೀರಭದ್ರ ಕಂಪ್ಲಿ, ಸಂಗಮೇಶ ಸಿದ್ನಾಳ, ಸಂಜು ಹೊಸಮನಿ, ಕಲ್ಲಪ್ಪ ಮಾದರ, ಯಲ್ಲಪ್ಪ ನಾಯ್ಕ, ಟಿ.ಎ. ಬಬಗೌಡಾ, ಬಾಬು ಗೇನಾನಿ, ಜಯಾನಂದ ಪಾಟೀಲ, ನಾಗೇಂದ್ರ ನೀಲಜಖರ ಮತ್ತು ತಮ್ಮಣ್ಣ ಇಟಗಿ, ಅಂಗನವಾಡಿ ನೌಕರರ ಸಂಘದ ಮುಖಂಡರಾದ ದೊಡ್ಡವ್ವ ಪೂಜಾರಿ, ಸರಸ್ವತಿ ಮಾಳಶೆಟ್ಟಿ, ಪಾರ್ವತಿ ಸಾಲಿಮಠ, ವಿದ್ಯಾ ಕಮ್ಮಾರ, ಸಿ.ಎಸ್. ಮಗದುಂ, ಶೈಲಜಾ ಮಾಳಿ, ಚೆನ್ನಮ್ಮಾ ಗಡಕರಿ, ಮಂದಾ ನೇವಗಿ ಮುಂತಾದವರು ಭಾಗವಹಿಸಿದ್ದರು.

ಬೆಳಗಾವಿ ಜಿಲ್ಲಾ ಸಿಐಟಿಯು 6 ನೇ ಸಮ್ಮೇಳನ

ದುಡಿಯುವ ವರ್ಗವನ್ನು ಕಡೆಗಣಿಸಿದ ಕೇಂದ್ರ ಸರಕಾರ

ಶ್ರಮವೇ ಜಯತೇ ಎಂದು ಹೇಳಿರುವ ಮೋದಿಯವರು ಶ್ರಮ ಜೀವಿಗಳಿಗೆ ಕಡೆಗಣಿಸಿ, ದೇಶದ ಬಂಡವಾಳ ಶಾಹಿಗಳಿಗೆ ಸಹಾಯ ಹಸ್ತ ನೀಡುತ್ತಿದ್ದಾರೆ. ಒಂದೇ ದೇಶ, ಒಂದೇ ಭಾಷೆ, ಒಂದೇ ತೆರಿಗೆ, ಎನ್ನುವ ಪ್ರಧಾನಮಂತ್ರಿಗಳು ಎಲ್ಲರಿಗೂ ಒಂದೇ ವೇತನ ಎಂದು ಏಕೆ ಹೇಳುತ್ತಿಲ್ಲ ಎಂದು ಸಿಐಟಿಯು ನ ರಾಜ್ಯ ಕಾರ್ಯದರ್ಶಿಗಳಾದ ಕೆ. ಮಹಾಂತೇಶರವರು ರಾಮದುರ್ಗ ಸರಸ್ವತಿ ಕಲ್ಯಾಣ ಮಂಟಪದಲ್ಲಿ ನಡೆದ 6 ನೇ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ, ಕೇಂದ್ರ ಸರಕಾರದ ಬಣ್ಣ ಬಯಲು ಮಾಡಿದರು.

ಕಾಶ್ಮೀರದಂತಹ ಸಮಸ್ಯೆಗಳನ್ನು, ಅಯೋಧ್ಯಾ ಸಮಸ್ಯೆಯನ್ನು ಹೀಗೆ ಬೇರೆ ಬೇರೆ ಸಮಸ್ಯೆಗಳನ್ನು ತಂದು ಜನರ ಗಮನವನ್ನು ಬೇರೆ ಕಡೆ ಸೆಳೆಯುವ ಕುತಂತ್ರವನ್ನು ಮಾಡಿ ದೇಶದಲ್ಲಿ ಅಶಾಂತಿ ಹುಟ್ಟಿಸುತ್ತಿದ್ದಾರೆ. ಅದಕ್ಕೆ ನಾವೆಲ್ಲರೂ ಒಗ್ಗಟ್ಟಾಗಿ ಸರಕಾರದ ಬಣ್ಣ ಬಯಲು ಮಾಡಲು ನಿರಂತರವಾಗಿ ಹೋರಾಟ ಮಾಡುವ ಅವಶ್ಯಕತೆ ಇದೆ ಎಂದು ಮಹಾಂತೇಶರವರು ಮಾತನಾಡಿದರು.

ಕಳೆದ 30 ವರ್ಷಗಳಿಂದ ಬೆಳಗಾವಿ ಜಿಲ್ಲೆಯಲ್ಲಿ ಧ್ವನಿ ಇಲ್ಲದ ಜನರಿಗೆ ಧ್ವನಿ ನೀಡುವ ಕೆಲಸವನ್ನು ಸಿಐಟಿಯು ಮಾಡಿದೆ. ಕಾರ್ಮಿಕರನ್ನು ಸಂಘಟಿಸಿ ಅವರ ಸಮಸ್ಯೆಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸಿ ಹಲವಾರು ಸೌಲಭ್ಯಗಳನ್ನು ಕೊಡಿಸಲಾಗಿದೆ. ಮುಂದಿನ ದಿನಗಳಲ್ಲಿ ತಲುಪದೇ ಇರುವ ಕಾರ್ಮಿಕರನ್ನು ತಲುಪಿ ನಮ್ಮ ಸಂಘಟನೆಯನ್ನು ವಿಶಾಲವಾಗಿ ವಿಸ್ತರಿಸಿ ದುಡಿಯುವ ಜನರಿಗೆ ಅವರ ಹಕ್ಕನ್ನು ಕೊಡಿಸುವ ಕೆಲಸ ಮಾಡಬೇಕಾಗಿದೆ ಎಂದು ಅಧ್ಯಕ್ಷತೆಯನ್ನು ವಹಿಸಿದ ಹಿರಿಯರಾದ ಕಾ॥ ವ್ಹಿ.ಪಿ. ಕುಲಕರ್ಣಿ ಮಾತನಾಡಿದರು.

ಕೊನೆಯಲ್ಲಿ ಜಿಲ್ಲಾ ಸಂಚಾಲಕ ಸಮಿತಿ ಆಯ್ಕೆ ಮಾಡಲಾಯಿತು. ಜಿಲ್ಲಾ ಸಂಚಾಲಕರಾಗಿ ಗೈಬು ಜೈನೆಖಾನ್ ಸರ್ವಾನುಮತದಿಂದ ಆಯ್ಕೆಯಾದರು. 10 ಜನರು ಸಹ ಸಂಚಾಲಕರು, 22 ಜನ ಸಂಚಾಲನಾ ಸಮಿತಿಗೆ ಒಟ್ಟು 33 ಜನರ ಸಂಚಾಲಕ ಸಮಿತಿ ರಚಿಸಲಾಯಿತು. ಸಮ್ಮೇಳನದಲ್ಲಿ 6 ನಿರ್ಣಯಗಳನ್ನು ಮಂಡಿಸಲಾಯಿತು. ಕೊನೆಯಲ್ಲಿ ನೂತನವಾಗಿ ಆಯ್ಕೆಯಾದ ಜಿಲ್ಲಾ ಸಂಚಾಲಕರಾದ ಗೈಬು ಜೈನೆಖಾನ್ ರವರು 2020 ಜನವರಿ 8 ರ ಅಖಿಲ ಭಾರತ ಮುಷ್ಕರದ ತಯಾರಿ ನಡೆಸಿ ಎಲ್ಲಾ ತಾಲೂಕುಗಳಲ್ಲಿ ಮುಷ್ಕರ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.





ಶಿಕ್ಷಣ ಸಚಿವರ ರಾಜಿನಾಮೆಗೆ ಎಸ್‌ಎಫ್‌ಐ ಒತ್ತಾಯ

ವಿದ್ಯಾರ್ಥಿಗಳಲ್ಲಿ ಸಂವಿಧಾನದ ಬಗ್ಗೆ ಅರಿವು ಮೂಡಿಸುವುದಕ್ಕಾಗಿ ನವಂಬರ್ 26 ರಂದು ಸಂವಿಧಾನ ದಿನದ ಅಭಿಯಾನವನ್ನು ನಡೆಸಲು ಶಿಕ್ಷಣ ಇಲಾಖೆ ಮುಂದಾಗಿದೆ. ಈ ಕುರಿತು ಸಿಎಂಸಿಎ ಸಿದ್ಧಪಡಿಸಿದ ಕೈಪಿಡಿಯನ್ನು ಬಳಸಿಕೊಂಡು ಕಾರ್ಯಕ್ರಮ ರೂಪಿಸಬೇಕು ಎಂದು ಶಿಕ್ಷಣ ಇಲಾಖೆ 28/10/2019 ರಂದು ಆದೇಶ ಹೊರಡಿಸಿ, ಕೈಪಿಡಿ ಸಮೇತ ವೆಬ್ಸೈಟ್ ಗೆ ಅಪ್ಲೋಡ ಮಾಡಿತ್ತು.

ಅಂಬೇಡ್ಕರ್ ಅವರೊಬ್ಬರೇ ಸಂವಿಧಾನ ರಚಿಸಿಲ್ಲ ಎಂಬ ವಿವಾದಾತ್ಮಕ ಹೇಳಿಕೆ ಆ ಕೈಪಿಡಿಯಲ್ಲಿ ಇತ್ತು. ಅನೇಕರು ವಿರೋಧಿಸಿದ್ದರಿಂದ ಶಿಕ್ಷಣ ಇಲಾಖೆ ಕೈಪಿಡಿಯನ್ನು ವಾಪಸ್ ಪಡೆದುಕೊಂಡಿದೆ.


ಹಿನ್ನಲೆ : ವಿದ್ಯಾರ್ಥಿಗಳಲ್ಲಿ ಸಂವಿಧಾನದ ಕುರಿತು ಅರಿವು ಮೂಡಿಸುವ ಅಭಿಯಾನಕ್ಕಾಗಿ ರಾಜ್ಯ ಸರ್ಕಾರವು ಸರಕಾರೇತರ ಸಂಸ್ಥೆಯಾದ ಸಿಎಂಸಿಎ ಗೆ ಕೈಪಿಡಿ ರಚಿಸಿಕೊಡುವಂತೆ ಕೇಳಿದೆ. ಅದಕ್ಕಾಗಿ ಸಿಎಂಸಿಎ ಸಂಸ್ಥೆಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯು 01/10/2019 ರಂದು ಕೈಪಿಡಿಯನ್ನು ಸಿದ್ಧಪಡಿಸಿ ಸರಕಾರಕ್ಕೆ ಸಲ್ಲಿಸಿದ್ದಾರೆ.

ಕೈಪಿಡಿಯ ಪುಟ ಸಂಖ್ಯೆ 05 ರಲ್ಲಿ ಪ್ರಶ್ನೆ ಎರಡು ಈ ರೀತಿ ಇದೆ. ಸಂವಿಧಾನವನ್ನು ಯಾರು ಬರೆದರು? ಎಂಬ ಪ್ರಶ್ನೆಗೆ ಉತ್ತರ ಎನ್ನುವ ರೀತಿಯಲ್ಲಿ "ಡಾ.ಬಿ.ಆರ್ ಅಂಬೇಡ್ಕರ್ ಸಂವಿಧಾನದ ಪಿತಾಮಹ ಆಗಿರುತ್ತಾರೆ, ಜೊತೆಗೆ ಅವರೊಬ್ಬರೆ ಸಂವಿಧಾನ ಬರೆದಿಲ್ಲ" ಎಂದು ಉಲ್ಲೇಖಿಸಿದ್ದಾರೆ. ಇದು ವಿವಾದಾತ್ಮಕವಾಗಿದ್ದು ಸಿಎಂಸಿಎ ಸಂಸ್ಥೆಗೆ ಸಂವಿಧಾನ ರಚನೆಯ ಮಹತ್ವ ಹಾಗೂ ಸಂವಿಧಾನದ ಬಗ್ಗೆ ಗೌರವ ಇಲ್ಲ ಎನ್ನುವುದನ್ನು ತೋರಿಸುತ್ತದೆ. ಕರಡು ರಚನಾ ಸಮಿತಿಯಲ್ಲಿದ್ದ ಏಳು ಜನರಲ್ಲಿ ಬಹುತೇಕರು ಅಂಬೇಡ್ಕರ್ ರವರಿಗೆ ಸಹಾಯ ಮಾಡಲಿಲ್ಲ. ಅವರೊಬ್ಬರ ಶ್ರಮದಿಂದಾಗಿ ಸಂವಿಧಾನ ರಚಿತವಾಗಿದೆ ಎಂದು ಸಂವಿಧಾನ ರಚನಾ ಸಮಿತಿಯ ಸದಸ್ಯರಾಗಿದ್ದ ಟಿ.ಟಿ. ಕೃಷ್ಣಮಾಚಾರಿಯವರು ಉಲ್ಲೇಖಿಸಿರುವುದು ರಾಜ್ಯ ಸರಕಾರಕ್ಕೆ ನೆನಪಿಲ್ಲದಂತೆ ಕಾಣುತ್ತದೆ.

ಅಂಬೇಡ್ಕರ್ ಅವರೊಬ್ಬರೇ ಸಂವಿಧಾನ ಬರೆದಿಲ್ಲ ಎಂದು ಕೈಪಿಡಿಯಲ್ಲಿ ಬರೆಯುವ ಅಗತ್ಯವಾದರೂ ಏನಿತ್ತು? ಈ ರೀತಿ ಪ್ರಸ್ತಾಪಿಸುವುದರ ಉದ್ದೇಶ ಸಂವಿಧಾನ ರಚನೆಯಲ್ಲಿ ಅಂಬೇಡ್ಕರ್ ಅವರ ಪಾತ್ರವನ್ನು ಗೌಣವಾಗಿಸುವುದಲ್ಲದೆ ಮತ್ತೇನು ಅಲ್ಲ. ರಾಜ್ಯ ಸರ್ಕಾರವು ಶಿಕ್ಷಣದಲ್ಲಿ ತನ್ನ ಹಿಡೇನ್ ಅಜೆಂಡಾವನ್ನು ಜಾರಿಗೊಳಿಸಲು ಹೊರಟಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಣ ಸಚಿವ ಸುರೇಶ್ ಕುಮಾರ್ ಹಾಗೂ ಇಲಾಖೆಯವರ ನಾಟಕವನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ.

ಪುಟ 14 ಕ್ಕೆ

ಅತ್ಯುನ್ನತ ನ್ಯಾಯಪೀಠದ ಅಯೋಧ್ಯಾ ತೀರ್ಪು



ಚಿತ್ರಕೃಪೆ: ಹಿಂದು ಪತ್ರಿಕೆ

ಅಂತಿಮ ಪರಿಹಾರವೂ, ತೊಡಕಿನ ಪ್ರಶ್ನೆಗಳೂ



ಈ ತೀರ್ಪು ನ್ಯಾಯವನ್ನು ಒದಗಿಸುವುದಕ್ಕಿಂತ ಶಾಂತಿ ಮತ್ತು ನೆಮ್ಮದಿಯನ್ನು ಕಾಯ್ದುಕೊಳ್ಳುವುದಕ್ಕೆ ಆದ್ಯತೆಯನ್ನು ಕೊಟ್ಟಂತೆ ಕಾಣುತ್ತದೆ. ಅಲಹಾಬಾದ್ ಹೈಕೋರ್ಟ್ ತೀರ್ಪು "ಒಂದು ಶಾಶ್ವತ ಶಾಂತಿ ಮತ್ತು ನೆಮ್ಮದಿಯ ಭಾವನೆಯನ್ನು ಮತ್ತೆ ನೆಲೆಗೊಳಿಸುವುದಿಲ್ಲ" ಎಂಬುದು ಆ ತೀರ್ಪನ್ನು ಬದಲಿಸಲು ಕೊಟ್ಟ ಕಾರಣಗಳಲ್ಲಿ ಒಂದು. ಇಲ್ಲಿಯೇ ರಾಜಕೀಯ ಪರಿಗಣನೆಗಳು ಬಂದಿರುವಂತೆ ಕಾಣುತ್ತದೆ. ನಾಡಿನ ಅತ್ಯುನ್ನತ ನ್ಯಾಯಪೀಠದ ತೀರ್ಪಿಗೆ ಸ್ವೀಕಾರವನ್ನು ವ್ಯಕ್ತಮಾಡುವುದು ಸರಿಯೇ.



ಆದರೆ ಇದು ಬಹುಸಂಖ್ಯಾತವಾದದೊಂದಿಗೆ ರಾಜಿಗೆ ಮತ್ತು ಅದರ ಹಾನಿಕಾರಕ ಪರಿಣಾಮಗಳ ಬಗ್ಗೆ ನಮ್ಮನ್ನು ಕುರುಡಾಗಿಸಬಾರದು.

ಪ್ರಕಾಶ ಕಾರಟ್

ಸುಪ್ರಿಂ ಕೋರ್ಟ್ ತೀರ್ಪು ಅಯೋಧ್ಯಾ ವಿವಾದಕ್ಕೆ ಒಂದು ಅಂತಿಮ ಪರಿಹಾರ ಒದಗಿಸಿದೆ. ಮಾತುಕತೆಗಳ ಮೂಲಕ ಒಂದು ಇತ್ಯರ್ಥದ ಸಾಧ್ಯತೆ ಇಲ್ಲವಾಗಿದ್ದುದರಿಂದ, ಈ ನ್ಯಾಯಾಂಗದ ದಾರಿಯೇ ಕಾನೂನಿನ ಆಳ್ವಿಕೆಯ ಆಡಳಿತವಿರುವ ಒಂದು ಜಾತ್ಯತೀತ ಗಣರಾಜ್ಯದಲ್ಲಿ ಈ ವಿಷಯವನ್ನು ಇತ್ಯರ್ಥ ಮಾಡುವ ಏಕೈಕ ದಾರಿಯಾಗಿತ್ತು. ಆದ್ದರಿಂದಲೇ ಈ ತೀರ್ಪಿನ ಬಗ್ಗೆ ಗಂಭೀರ ಭಿನ್ನಾಭಿಪ್ರಾಯವಿದ್ದರೂ, ಅಥವ ಆಕ್ಷೇಪಗಳಿದ್ದರೂ, ಅದನ್ನು ಸಾರ್ವತ್ರಿಕವಾಗಿ ಒಪ್ಪಿಕೊಳ್ಳಲಾಗಿದೆ.

ಸ್ವಾತಂತ್ರ್ಯದ ನಂತರ ಈ ವಿವಾದ ಹಾದು ಬಂದಿರುವ ನ್ಯಾಯಾಂಗ ಪ್ರಕ್ರಿಯೆಯ ಫಲಿತಾಂಶವಾಗಿ ಸಪ್ಟಂಬರ್ 30, 2010ರಂದು ಅಲಹಾಬಾದ್ ಹೈಕೋರ್ಟಿನ ಲಕ್ನೌ ಪೀಠದಿಂದ ಒಂದು ತೀರ್ಪು ಬಂತು. ಆ ವೇಳೆಯಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯುರೋ ಆ ತೀರ್ಪನ್ನು ವಿಮರ್ಶಿಸುತ್ತ "ಭೂಮಿಯ ತ್ರಿವಿಧ ವಿಭಜನೆಯ ತೀರ್ಪು 'ನಂಬಿಕೆ ಮತ್ತು ವಿಶ್ವಾಸ'ವನ್ನು ಆಧರಿಸಿದೆ. ಈ ತೀರ್ಪುಗಳ ಈ ಅಂಶ ಕಳವಳಕಾರಿ. ಏಕೆಂದರೆ, ಅದು ತಥ್ಯಗಳು ಮತ್ತು ಸಾಕ್ಷಿಯ ದಾಖಲೆಗಳಿಗಿಂತ ಧಾರ್ಮಿಕ ನಂಬಿಕೆಗಳಿಗೆ ಮತ್ತು ವಿಶ್ವಾಸಕ್ಕೆ ಅಗ್ರಮಾನ್ಯತೆ ಕೊಡುತ್ತದೆ" ಎಂದು ಹೇಳಿತ್ತು.

ಸುಪ್ರಿಂ ಕೋರ್ಟ್ ತೀರ್ಪು ವಿವಾದವನ್ನು ಬಗೆಹರಿಸಲು ಜಾತ್ಯತೀತ ನೀತಿಯೇ ಒಂದು ಸುಭದ್ರ ತಳಪಾಯ ಎಂದು ಸಾರುತ್ತದೆ. "ನಮ್ಮ ಸಂವಿಧಾನದ ಅಡಿಯಲ್ಲಿ ದೈವೀ ಮೂಲವನ್ನು ಅರಸುವ ಎಲ್ಲ ನಂಬಿಕೆಗಳ, ಮತ್ತು ವಿಶ್ವಾಸಗಳ, ಪಂಥಗಳ ನಾಗರಿಕರು ಕಾನೂನಿಗೂ ಒಳಪಡುತ್ತಾರೆ ಮತ್ತು ಕಾನೂನಿನ ಸಮ್ಮುಖ ಸಮಾನರೂ ಆಗಿರುತ್ತಾರೆ. ಸಂವಿಧಾನ ಒಂದು ಧರ್ಮದ ನಂಬಿಕೆ ಮತ್ತು ವಿಶ್ವಾಸವನ್ನು ಇನ್ನೊಂದು ಧರ್ಮದ ನಂಬಿಕೆ ಮತ್ತು ವಿಶ್ವಾಸಕ್ಕಿಂತ ಭಿನ್ನವಾಗಿ ಕಾಣುವುದಿಲ್ಲ. ಎಲ್ಲ ವಿಧಗಳ ನಂಬಿಕೆ, ಪೂಜೆ ಮತ್ತು ಪ್ರಾರ್ಥನೆ ಸಮಾನವಾಗಿವೆ" ಎಂದು ಅದು ಹೇಳುತ್ತದೆ.


ಮುಂದುವರೆದು "ಸಂವಿಧಾನಿಕ ಮೌಲ್ಯಗಳಿಗೆ ಬದ್ಧತೆಯನ್ನು ಎತ್ತಿ ಹಿಡಿಯಬೇಕಾದರೆ, ಖಾಸಗಿ ಆಸ್ತಿಯ ಮೇಲೆ ನಾಗರಿಕ ದಾವೆಗಳ ನ್ಯಾಯನಿರ್ಣಯವು ಜಾತ್ಯತೀತ ಪರಿಧಿಯೊಳಗೇ ಉಳಿಯಬೇಕಾಗುತ್ತದೆ" ಮತ್ತು "ಹಕ್ಕುದಾರಿಕೆಯನ್ನು ಈ ನಂಬಿಕೆ ಮತ್ತು ವಿಶ್ವಾಸದ ಆಧಾರದಲ್ಲಿ ಸ್ಥಾಪಿಸಲು ಸಾಧ್ಯವಿಲ್ಲ" ಎಂದು ತೀರ್ಪು ಹೇಳುತ್ತದೆ.

ಆದರೆ ಈ ತೀರ್ಪಿನ ಕೇಂದ್ರದಲ್ಲೇ ಒಂದು ವಿರೋಧಾಭಾಸ ಇದೆ. ವಿವಾದವನ್ನು ನಂಬಿಕೆಯ ಆಧಾರದಲ್ಲಿ ಅಲ್ಲ, ಸಾಕ್ಷ್ಯ ಮತ್ತು ತಥ್ಯಗಳ ಆಧಾರದಲ್ಲಿ ಇತ್ಯರ್ಥ ಮಾಡುವ ಅಗತ್ಯವಿದೆ ಎಂಬ ಹಲವಾರು ಘೋಷಣೆಗಳು ಈ ತೀರ್ಪಿನಲ್ಲಿ ತುಂಬಿದ್ದರೂ, ಜಾತ್ಯತಿತವಾಗಿರಬೇಕಾದರೆ ಎಲ್ಲ ಧರ್ಮಗಳನ್ನು, ನಂಬಿಕೆಗಳನ್ನು ಸಮಾನವಾಗಿ ಕಾಣಬೇಕು ಎಂದು ಹೇಳಿದರೂ ಕೂಡ, ಅಂತಿಮ ಫಲಿತಾಂಶದಲ್ಲಿ ಮಾತ್ರ ನಂಬಿಕೆಗೆ ಹೆಚ್ಚಿನ ತೂಕ ಒದಗಿದೆ, ಮತ್ತು ಇನ್ನೂ ಕಳವಳಕಾರಿಯೆಂದರೆ, ಒಂದು ಸಮುದಾಯದ ನಂಬಿಕೆಗಳಿಗೆ ಅಗ್ರಪಟ್ಟ ನೀಡಲಾಗಿದೆ.

ಬಾಬ್ರಿ ಮಸೀದಿಯನ್ನು ಅಲ್ಲಿದ್ದ ಒಂದು ಮಂದಿರವನ್ನು ಕೆಡವಿ ಕಟ್ಟಲಾಗಿದೆ ಎಂಬ ದಾವೆಯನ್ನು ತೀರ್ಪು ತಳ್ಳಿ ಹಾಕಿರುವುದು ಸರಿಯಾಗಿಯೇ ಇದೆ. ಭಾರತದ ಪುರಾತತ್ವ ಸರ್ವೆ(ಎಎಸ್‌ಐ)ಇಂತಹ ಒಂದು ಘಟನೆ ನಡೆದಿದೆ ಎಂಬುದಕ್ಕೆ ಯಾವುದೇ ಪುರಾವೆಯನ್ನು ಒದಗಿಸುವುದಿಲ್ಲ, ಪುರಾತತ್ವ ಸಾಕ್ಷ್ಯ ಆ ಜಾಗದಲ್ಲಿ ಒಂದು ರಾಮ ಮಂದಿರ ಇತ್ತು ಎಂದು ಸಾಬೀತು ಕೂಡ ಮಾಡುವುದಿಲ್ಲ ಎಂದು ತೀರ್ಪು ಹೇಳುತ್ತದೆ. ಅಲ್ಲದೆ, ಯಾವುದೇ ಚಾರಿತ್ರಿಕ ತಪ್ಪನ್ನು ಒಂದು ನ್ಯಾಯಾಂಗ ನಿರ್ಧಾರದ ಮೂಲಕ ಸರಿಪಡಿಸಲಾಗುತ್ತಿದೆ ಎಂಬುದನ್ನೂ ನ್ಯಾಯಾಲಯ ಇಲ್ಲಗಳೆದಿದೆ.

ವಿರೋಧಾಭಾಸವು ವಿವಾದಿತ ಸ್ಥಳದ ಸುಪರ್ದಿ ಮತ್ತು ಬಳಕೆಯ ಕುರಿತ ಸಾಕ್ಷ್ಯದ ಮೌಲ್ಯಮಾಪನ ಮಾಡುವ ರೀತಿ ಮತ್ತು ಅದರಿಂದ ತೀರ್ಮಾನಕ್ಕೆ ಬರುವಲ್ಲಿಯೂ ವ್ಯಕ್ತಗೊಂಡಿದೆ. "ಸಾಧ್ಯತೆಗಳ ಒಂದು ಸಮತೋಲನದಲ್ಲಿ, ಸಂಯುಕ್ತ ಸಮಸ್ತ ವಿವಾದಿತ ಆಸ್ತಿಯ ಮೇಲೆ ಹಿಂದೂಗಳ ಸುಪರ್ದಿಯ ದಾವೆ ಮುಸ್ಲಿಮರು ಮಂಡಿಸಿರುವ ಸಾಕ್ಷ್ಯಕ್ಕಿಂತ ಉತ್ತಮವಮಟ್ಟದಲ್ಲಿದೆ" ಎಂಬ

⇨⇨⇨



ವ್ಯಂಗ್ಯಚಿತ್ರ: ಮಂಜುಲ್, ಮಿಡ್ ಡೇ

.......ಆದರೆ ಈ ತೀರ್ಪಿನ ಕೇಂದ್ರದಲ್ಲೇ ಒಂದು ವಿರೋಧಾಭಾಸ ಇದೆ. ವಿವಾದವನ್ನು ನಂಬಿಕೆಯ ಆಧಾರದಲ್ಲಿ ಅಲ್ಲ, ಸಾಕ್ಷ್ಯ ಮತ್ತು ತಥ್ಯಗಳ ಆಧಾ'ರದಲ್ಲಿ ಇತ್ಯರ್ಥ ಮಾಡುವ ಅಗತ್ಯವಿದೆ ಎಂಬ ಹಲವಾರು ಘೋಷಣೆಗಳು ಈ ತೀರ್ಪಿನಲ್ಲಿ ತುಂಬಿದ್ದರೂ, ಜಾತ್ಯತಿತವಾಗಿರಬೇಕಾದರೆ ಎಲ್ಲ ಧರ್ಮಗಳನ್ನು, ನಂಬಿಕೆಗಳನ್ನು ಸಮಾನವಾಗಿ ಕಾಣಬೇಕು ಎಂದು ಹೇಳಿದರೂ ಕೂಡ, ಅಂತಿಮ ಫಲಿತಾಂಶದಲ್ಲಿ ಮಾತ್ರ ನಂಬಿಕೆಗೆ ಹೆಚ್ಚಿನ ತೂಕ ಒದಗಿದೆ, ಮತ್ತು ಇನ್ನೂ ಕಳವಳಕಾರಿಯೆಂದರೆ, ಒಂದು ಸಮುದಾಯದ ನಂಬಿಕೆಗಳಿಗೆ ಆಗ್ರಪಟ್ಟ ನೀಡಲಾಗಿದೆ......

..... ವಿರೋಧಾಭಾಸವು ವಿವಾದಿತ ಸ್ಥಳದ ಸುಪರ್ದಿ ಮತ್ತು ಬಳಕೆಯ ಕುರಿತ ಸಾಕ್ಷ್ಯದ ಮೌಲ್ಯಮಾಪನ ಮಾಡುವ ರೀತಿ ಮತ್ತು ಅದರಿಂದ ತೀರ್ಮಾನಕ್ಕೆ ಬರುವಲ್ಲಿಯೂ ವ್ಯಕ್ತಗೊಂಡಿದೆ....

......ವಿರೋಧಾಭಾಸ ಇನ್ನೂ ಮುಂದುವರೆಯುತ್ತದೆ. ಡಿಸೆಂಬರ್ 1949ರಲ್ಲಿ ಕಾನೂನುಬಾಹಿರವಾಗಿ ಮೂರ್ತಿಗಳನ್ನಿಟ್ಟು ಮಸೀದಿಯನ್ನು ಅಪವಿತ್ರಗೊಳಿಸಿದ್ದು ಮತ್ತು ಡಿಸೆಂಬರ್ 1992ರಲ್ಲಿ ಮಸೀದಿಯನ್ನು ಕೆಡವಿದ್ದು "ಕಾನೂನಿನ ಗಂಭೀರ ಉಲ್ಲಂಘನೆ" ಎಂದು ಹೇಳುವ ತೀರ್ಪು ಕೊನೆಗೆ ಮಾತ್ರ ಈ ಕ್ರಿಮಿನಲ್ ದಾಳಿಗಳಿಗೆ ಹೊಣೆಗಾರರಾದ ಶಕ್ತಿಗಳಿಗೇ ಆ ಸ್ಥಳವನ್ನು ವಹಿಸಿ ಕೊಡುತ್ತದೆ.

⇨⇨⇨

ತೀರ್ಮಾನಕ್ಕೆ ತೀರ್ಪು ಬಂದಿದೆ. ಕುತೂಹಲಕಾರಿ ಸಂಗತಿಯೆಂದರೆ ನ್ಯಾಯಾಲಯ ಒಳಾಂಗಣ ಮತ್ತು ಹೊರಾಂಗಣ ಎರಡನ್ನೂ ಒಂದು ಸಂಯುಕ್ತ ಸಮಸ್ತ ಎಂದು ಕಾಣುತ್ತದೆ, ಆದರೆ, ಸಾಕ್ಷ್ಯಗಳು ಮತ್ತು ಹೇಳಿಕೆಗಳಿಂದ ಆರಿಸಿಕೊಳ್ಳುವಾಗ ಒಳಾಂಗಣ ಮತ್ತು ಹೊರಾಂಗಣಗಳನ್ನು ಪ್ರತ್ಯೇಕವಾಗಿಯೇ ಪರಿಶೀಲಿಸುತ್ತದೆ.

ಹಿಂದೂಗಳಿಗೆ ತಾವು ಹೊರಾಂಗಣದ ಸಂಪೂರ್ಣ ಮತ್ತು ಅಬಾಧಿತ ಸುಪರ್ದಿಯನ್ನು ಹೊಂದಿದ್ದೇವೆ ಎಂದು ಸಾಬೀತು ಮಾಡಲು ಸಾಧ್ಯವಾಗಿದೆ ಎಂಬ ತೀರ್ಮಾನಕ್ಕೆ ತೀರ್ಪು ಬಂದಿದೆ. 1857ರಲ್ಲಿ ವಸಾಹತುಶಾಹೀ ಆಡಳಿತ ಹೊರಾಂಗಣ ಮತ್ತು ಒಳಾಂಗಣದ ನಡುವೆ ಒಂದು ಇಟ್ಟಿಗೆಯ ಗೋಡೆಯನ್ನು ಕಟ್ಟಿತು. ಅದಾದ ನಂತರವೂ, ಈ ತೀರ್ಪಿನ ಪ್ರಕಾರ, ಮಸೀದಿಯ ಪ್ರಾಂಗಣದಲ್ಲಿ ಪೂಜೆ ನಡೆಸುವ ಹಿಂದೂಗಳ ಪ್ರಯತ್ನಗಳು ಮುಂದುವರೆದವು. ಹಿಂದೂ ದಾವೆಗಳನ್ನು ಪರಿಶೀಲಿಸುವಾಗ ನ್ಯಾಯಾಲಯ ಕಟ್ಟುನಿಟ್ಟಾಗಿ ತಥ್ಯಗಳ ಪ್ರಕಾರ ಹೋಗದೆ, ನಂಬಿಕೆ ಮತ್ತು ವಿಶ್ವಾಸದ ಪ್ರದರ್ಶನವನ್ನು ಗಮನಕ್ಕೆ ತಗೊಂಡಿರುವಂತೆ ಕಾಣುತ್ತದೆ: "ಅಡ್ಡಕಂಬಿಗಳನ್ನು ಹಾಕಿದ ಮೇಲೂ, ಅವರು ಗರ್ಭಗೃಹದಲ್ಲಿ ಪೂಜೆ ಸಲ್ಲಿಸಲು ಒಳಾಂಗಣ ಮತ್ತು ಹೊರಾಂಗಣಗಳ ವಿಭಜನೆಯ ನಡುವೆ ನಿಲ್ಲುತ್ತಿದ್ದರು" ಎಂದು ಅದು ಹೇಳಿದೆ. ಹಿಂದೂಗಳು ಈ ರೀತಿ ತಮ್ಮ ಪೂಜೆಯ ಹಕ್ಕನ್ನು ಎತ್ತಿ ಹಿಡಿಯುವುದನ್ನು ಮುಸ್ಲಿಮರು ಒಳಾಂಗಣ ಕೇವಲ ತಮ್ಮ ಸುಪರ್ದಿಯಲ್ಲಿತ್ತು ಎಂದು ಸಾಬೀತು ಮಾಡುವಲ್ಲಿ ವಿಫಲವಾಗಿದ್ದಾರೆ ಎಂದು ಅರ್ಥೈಸಲಾಗಿದೆ.

1528ರಲ್ಲಿ ಮಸೀದಿಯನ್ನು ಕಟ್ಟಿದಾಗ ಮತ್ತು 1856ರಲ್ಲಿ ಅಯೋಧ್ಯೆ ಇರುವ ಪ್ರದೇಶವನ್ನು ಬ್ರಿಟಿಶರು ವಶಪಡಿಸಿಕೊಳ್ಳುವ ನಡುವಿನ ಅವಧಿಯಲ್ಲಿ "ಮುಸ್ಲಿಮರು 1857ರ ಮೊದಲು, ಹದಿನಾರನೇ ಶತಮಾನದಲ್ಲಿ ಅದನ್ನು ಕಟ್ಟಿದಂದಿನಿಂದ ಒಳಾಂಗಣದ ಸುಪರ್ದಿಯನ್ನು ತಾವು ಮಾತ್ರ ಹೊಂದಿದ್ದೆವು ಎಂಬುದನ್ನು ಸೂಚಿಸುವ ಯಾವುದೇ ಸಾಕ್ಷ್ಯವನ್ನು ಒದಗಿಸಿಲ್ಲ" ಎಂದು ತೀರ್ಪು ಹೇಳಿಕೊಂಡಿದೆ. ಇದು ಬಹಳ ಪ್ರಯಾಸಕರ ಅಂದಾಜು. ಏಕೆಂದರೆ, 1528ರಿಂದ ಮೂರು ಶತಮಾನಗಳಿಗೂ ಹೆಚ್ಚು ಕಾಲ, ಈ ಇಡೀ ಪ್ರದೇಶ ಮುಸ್ಲಿಂ ಆಳ್ವಿಕೆಯಲ್ಲಿತ್ತು, ಮೊದಲಿಗೆ ಮೊಗಲರ ಅಡಿಯಲ್ಲಿ, ನಂತರ ಅವಧ್‌ನ ನವಾಬರುಗಳ ಅಡಿಯಲ್ಲಿ.

ಮೊಗಲ್ ಆಳ್ವಿಕೆಯ ಆರಂಭದಲ್ಲಿ ಕಟ್ಟಿದ ಮಸೀದಿಯನ್ನು ಅಬಾಧಿತವಾಗಿ ನಮಾಜುಗಳನ್ನು ಸಲ್ಲಿಸಲು ಬಳಸಲಾಗುತ್ತಿರಬಹುದು ಎಂಬುದು ಸ್ವಯಂವೇದ್ಯ. ಆಗ ಯಾವುದೇ ವಿವಾದ ಇರಲಿಲ್ಲವೆಂಬುದು ಇದನ್ನು ಅಲ್ಲಗಳೆಯುವ ಪುರಾವೆಯಾಗಲು ಸಾಧ್ಯವಿಲ್ಲ. ಹೊರಗಿನ ಮತ್ತು ಒಳಗಿನ ಅಂಗಣಗಳಲ್ಲಿ ಪ್ರಾರ್ಥನೆ ಅಬಾಧಿತವಾಗಿ ಮುಂದುವರೆದಿರುವ ಬಗ್ಗೆ ಪುರಾವೆಯ ಪರಿಶೀಲನೆಯಲ್ಲಿ ವಿಭಿನ್ನ ಮಾನದಂಡಗಳಿರುವಂತೆ ಕಾಣುತ್ತದೆ, ಅದು ರಾಮಜನ್ಮಸ್ಥಾನವೆಂಬ ಹಿಂದೂಗಳ ನಂಬಿಕೆ ಮತ್ತು ವಿಶ್ವಾಸದ ಪ್ರದರ್ಶನವೇ ಹೆಚ್ಚು ನಂಬಲರ್ಹ ಎಂದು ಬಗೆದಂತೆ ಕಾಣುತ್ತದೆ.

ವಿರೋಧಾಭಾಸ ಇನ್ನೂ ಮುಂದುವರೆಯುತ್ತದೆ. ಡಿಸೆಂಬರ್ 1949ರಲ್ಲಿ ಕಾನೂನುಬಾಹಿರವಾಗಿ ಮೂರ್ತಿಗಳನ್ನಿಟ್ಟು ಮಸೀದಿಯನ್ನು ಅಪವಿತ್ರಗೊಳಿಸಿದ್ದು ಮತ್ತು ಡಿಸೆಂಬರ್ 1992ರಲ್ಲಿ ಮಸೀದಿಯನ್ನು ಕೆಡವಿದ್ದು "ಕಾನೂನಿನ ಗಂಭೀರ ಉಲ್ಲಂಘನೆ" ಎಂದು ಹೇಳುವ ತೀರ್ಪು ಕೊನೆಗೆ ಮಾತ್ರ ಈ ಕ್ರಿಮಿನಲ್ ದಾಳಿಗಳಿಗೆ ಹೊಣೆಗಾರರಾದ ಶಕ್ತಿಗಳಿಗೇ ಆ ಸ್ಥಳವನ್ನು ವಹಿಸಿ ಕೊಡುತ್ತದೆ. ಯಾರ ಪರವಾಗಿ 1989ರಲ್ಲಿ ಮೊಕದ್ದಮೆಯನ್ನು ಸಲ್ಲಿಸಲಾಯಿತೋ ಆ 'ರಾಮ ಲಲ್ಲಾ'ನ ಪ್ರತಿನಿಧಿ–ದೈವದ "ನಿಕಟ ಮಿತ್ರ" ವಿಶ್ವ 'ಹಿಂದೂ ಪರಿಷತ್‌ನ ಒಬ್ಬ ಮುಖಂಡರು, ಮತ್ತು ಈ ಸಂಘಟನೆಯೇ ಮಸೀದಿಯ ಧ್ವಂಸಕ್ಕೆ ಕಾರಣವಾದ ಚಳುವಳಿಯ ನೇತೃತ್ವ ವಹಿಸಿತ್ತು ಎಂಬುದನ್ನು ಇಲ್ಲಿ ಗಮನಿಸಬೇಕು.

ಮಸೀದಿ ಕೆಡವಿದ್ದಕ್ಕೆ ಹೊಣೆಗಾರರಾದವರ ವಿರುದ್ಧ ಮೊಕದ್ದಮೆ ಇನ್ನೂ ಲಕ್ನೌನ ವಿಶೇಷ ನ್ಯಾಯಾಲಯದಲ್ಲಿ ನೆನೆಗುದಿಗೆ ಬಿದ್ದಿದೆ. ಅದು ಮುಂದಿನ ವರ್ಷ, ಅಂದರೆ ಆ ಕೃತ್ಯ ನಡೆದ 28 ವರ್ಷಗಳ ನಂತರವಷ್ಟೇ ನಿರ್ಧಾರವಾಗುವ ನಿರೀಕ್ಷೆಯಿದೆ. ಧ್ವಂಸ ಕಾರ್ಯದ ಪಿತೂರಿಗಾರರನ್ನು ಪುರಸ್ಕರಿಸಿರುವ ಸುಪ್ರಿಂ ಕೋರ್ಟ್ ತೀರ್ಪಿನ ಪ್ರಭಾವ ಅದರ ಮೇಲೆ ಏನಿರಬಹುದು ಎಂಬುದನ್ನು ಊಹಿಸಿಕೊಳ್ಳಬಹುದು.



ಬಾಬ್ರಿ ಮಸೀದಿ ಧ್ವಂಸಕ್ಕೆ ವೇದಿಕೆ ಸಿದ್ಧಗೊಳಿಸಿದ 'ರಥಯಾತ್ರೆ'ಯಲ್ಲಿ

ಮಸೀದಿ ಕೆಡವಿದ್ದಕ್ಕೆ ಹೊಣೆಗಾರರಾದವರ ವಿರುದ್ಧ ಮೊಕದ್ದಮೆ ಇನ್ನೂ ಲಕ್ನೌನ ವಿಶೇಷ ನ್ಯಾಯಾಲಯದಲ್ಲಿ ನೆನೆಗುದಿಗೆ ಬಿದ್ದಿದೆ. ಅದು ಮುಂದಿನ ವರ್ಷ, ಅಂದರೆ ಆ ಕೃತ್ಯ ನಡೆದ 28 ವರ್ಷಗಳ ನಂತರವಷ್ಟೇ ನಿರ್ಧಾರವಾಗುವ ನಿರೀಕ್ಷೆಯಿದೆ. ಧ್ವಂಸ ಕಾರ್ಯದ ಪಿತೂರಿಗಾರರನ್ನು ಪುರಸ್ಕರಿಸಿರುವ ಸುಪ್ರಿಂ ಕೋರ್ಟ್ ತೀರ್ಪಿನ ಪ್ರಭಾವ ಅದರ ಮೇಲೆ ಏನಿರಬಹುದು ಎಂಬುದನ್ನು ಊಹಿಸಿಕೊಳ್ಳಬಹುದು.

ಸುಪ್ರಿಂ ಕೋರ್ಟ್ 'ಆರಾಧನಾ ಸ್ಥಳಗಳ ಕಾಯ್ದೆ, 1991'ನ್ನು ಎಲ್ಲ ಧರ್ಮಗಳು ಸಮಾನ ಎಂಬುದನ್ನು ಮತ್ತು ಜಾತ್ಯತೀತತೆಯನ್ನು ಎತ್ತಿ ಹಿಡಿಯುವ ಸಂವಿಧಾನದ ಬದ್ಧತೆಯನ್ನು ಜಾರಿಗೊಳಿಸುವ ಒಂದು ಕಾನೂನು ಎಂದು ಉದ್ಧರಿಸಿದೆ. ಆದರೆ ಅದು ಸಂವಿಧಾನದ 142ನೇ ಕಲಮನ್ನು, ಬೇರೆ ಯಾವುದೇ ಧಾರ್ಮಿಕ ಸ್ಥಳವನ್ನು ವಿವಾದಕ್ಕೆ ಮತ್ತು ಬದಲಾವಣೆಗೆ ಗುರಿಪಡಿಸಬಾರದು ಎಂದು ಆದೇಶಿಸಲು ಬಳಸಿದ್ದರೆ ಉತ್ತಮವಿತ್ತು. ಇದು ಇನ್ನಷ್ಟು ಮಹತ್ವದ್ದು, ಏಕೆಂದರೆ ಅಯೋಧ್ಯಾ ತೀರ್ಪು ಕಾಶಿ, ಮಥುರಾ ಮತ್ತಿತರ ಧಾರ್ಮಿಕ ಸ್ಥಳಗಳನ್ನು ಕುರಿತಂತೆ ವಿವಾದಗಳನ್ನು ಎಬ್ಬಿಸಲು ಒಂದು ಮಾದರಿಯಾಗಬಾರದು. ಆರೆಸ್ಸೆಸ್ ಮುಖ್ಯಸ್ಥರಾದ ಮೋಹನ್ ಭಾಗ್ವತ್ ಕಾಶಿ ಮತ್ತು ಮಥುರಾ ಕುರಿತ ದಾವೆಗಳು ತಮ್ಮ ಅಜೆಂಡಾದಲ್ಲಿ "ಸದ್ಯಕ್ಕೆ" ಇಲ್ಲ ಎಂದಿದ್ದಾರೆ.

ಈ ತೀರ್ಪು ನ್ಯಾಯವನ್ನು ಒದಗಿಸುವುದಕ್ಕಿಂತ ಶಾಂತಿ ಮತ್ತು ನೆಮ್ಮದಿಯನ್ನು ಕಾಯ್ದುಕೊಳ್ಳುವುದಕ್ಕೆ ಆದ್ಯತೆಯನ್ನು ಕೊಟ್ಟಂತೆ ಕಾಣುತ್ತದೆ. ಅಲಹಾಬಾದ್ ಹೈಕೋರ್ಟ್ ತೀರ್ಪು "ಒಂದು ಶಾಶ್ವತ ಶಾಂತಿ ಮತ್ತು ನೆಮ್ಮದಿಯ ಭಾವನೆಯನ್ನು ಮತ್ತೆ ನೆಲೆಗೊಳಿಸುವುದಿಲ್ಲ" ಎಂಬುದು ಆ ತೀರ್ಪನ್ನು ಬದಲಿಸಲು ಕೊಟ್ಟ ಕಾರಣಗಳಲ್ಲಿ ಒಂದು. ಇಲ್ಲಿಯೇ ರಾಜಕೀಯ ಪರಿಗಣನೆಗಳು ಬಂದಿರುವಂತೆ ಕಾಣುತ್ತದೆ. ಹಿಂದುತ್ವ ಆಳ್ವಿಕೆಯ ಪ್ರಾಬಲ್ಯವಿರುವುದು, ನ್ಯಾಯಾಂಗದ ತೀರ್ಪು ಬಹಸಂಖ್ಯಾತರ ಭಾವನೆಗಳಿಗೆ ವಿರುದ್ಧವಾದರೆ ಉಂಟಾಗಬಹುದಾದ ಭೀತಿಕಾರಕ ಪರಿಣಾಮಗಳು ಇವೆಲ್ಲವೂ ಸಮಸ್ತ 2.77 ಎಕ್ರೆ ವಿವಾದಿತ ಸ್ಥಳವನ್ನು ರಾಮಲಲ್ಲಾ ಎಂಬ ನ್ಯಾಯಿಕ ವ್ಯಕ್ತಿಗೆ ವಹಿಸಿಕೊಡುವ ನಿರ್ಧಾರಕ್ಕೆ ತೂಕ ಸೇರಿಸಿದಂತೆ ಕಾಣುತ್ತದೆ.

ಹೇಗಾದರೂ ಈ ವಿವಾದವನ್ನು ಬಗೆಹರಿಸಬೇಕು ಮತ್ತು ಇದೀಗ ಇದನ್ನು ಇಲ್ಲಿಗೇ ಮುಗಿಸಿ ಮುಂದೆ ಸಾಗಬೇಕು ಎಂಬ ಭಾವನೆ ಈಗ ವ್ಯಾಪಕವಾಗಿರುವುದರ ಪ್ರಭಾವದಿಂದಾಗಿ ಈ ತೀರ್ಪನ್ನು ಹೆಚ್ಚಿನ ಜಾತ್ಯತೀತ ಪಕ್ಷಗಳು ಮತ್ತು ಸಂಘಟನೆಗಳು ಸ್ವಾಗತಿಸಿರುವಂತೆ ಕಾಣುತ್ತದೆ. ನಾಡಿನ ಅತ್ಯುನ್ನತ ನ್ಯಾಯಪೀಠದ ತೀರ್ಪಿಗೆ ಸ್ವೀಕಾರವನ್ನು ವ್ಯಕ್ತಮಾಡುವುದು ಸರಿಯೇ. ಆದರೆ ಇದು ಬಹುಸಂಖ್ಯಾತವಾದದೊಂದಿಗೆ ರಾಜಿಗೆ ಮತ್ತು ಅದರ ಹಾನಿಕಾರಕ ಪರಿಣಾಮಗಳ ಬಗ್ಗೆ ನಮ್ಮನ್ನು ಕುರುಡಾಗಿಸಬಾರದು.

ಇಸ್ರೇಲಿ ಬೇಹುಗಾರಿಕೆ ಸಾಧನವನ್ನು ಬಳಸಿದವರು ಯಾರು?



ವಿವಿಧ ಕಾರ್ಯಕರ್ತರು, ಪತ್ರಕರ್ತರು ಮತ್ತು ರಾಜಕಾರಣಿಗಳ ವಾಟ್ಸ್ ಆಪ್ ಖಾತೆಗಳನ್ನು ಇಸ್ರೇಲಿ ಕಂಪನಿ ಪೆಗಸಸ್ ನ ಬೇಹುಗಾರಿಕೆ ಸಾಧನವನ್ನು ಬಳಸಿ ಸೀಳಿರುವ(ಹ್ಯಾಕ್ ಮಾಡಿರುವ) ಸುದ್ದಿ ಕಳವಳಕಾರಿ ಮತ್ತು ಖಂಡನೀಯ. ಇದು ಹೇಗಾಯಿತು, ಖಾಸಗಿತ್ವದ ಉಲ್ಲಂಘನೆ ಹೇಗೆ ಸಂಭವಿಸಿತು, ಇದಕ್ಕೆ ಯಾರು ಹೊಣೆ ಎಂಬುದಕ್ಕೆ ವಿವರಣೆ ನೀಡಬೇಕಾಗಿದೆ. ಸರಕಾರ ಯಾವುದೇ ವಿವರಣೆಯನ್ನು ಕೊಟ್ಟಿಲ್ಲವಾದರೂ, ಇದರಲ್ಲಿ, ಈ ಬೇಹುಗಾರಿಕೆಯಲ್ಲಿ ಸರಕಾರದ ಶಾಮೀಲಿನತ್ತ ಬೊಟ್ಟು ಮಾಡುವ ಹೆಚ್ಚಿನ ತಥ್ಯಗಳು ಸಾರ್ವಜನಿಕಗೊಂಡಿವೆ.

ಸರಕಾರ, ಈ ಸುದ್ದಿ ಹೊರಬಂದಾಗ, ಹಲವಾರು ಭಾರತೀಯರ ಖಾಸಗಿತ್ವದ ಉಲ್ಲಂಘನೆಯ ಬಗ್ಗೆ ವಾಟ್ಸ್ ಆಪ್ ಯಾವುದೇ ಸರಕಾರೀ ಸಂಸ್ಥೆಗೆ ಯಾವುದೇ ಮಾಹಿತಿ ನೀಡಿರಲಿಲ್ಲ ಎಂದು ಹೇಳಿತು. ಆದರೆ ತಾವು ದಸ್ತಾವೇಜುಗಳೊಂದಿಗೆ ಈ ಮಾಹಿತಿಯನ್ನು ನೀಡಿ, ವಾಸ್ತವವಾಗಿ, ಖಾಸಗಿತ್ವದ ಉಲ್ಲಂಘನೆಯಾಗಬಹುದು ಎಂದು ಭಾರತ ಸರಕಾರವನ್ನು ಎಚ್ಚರಿಸಿದ್ದೆವು ಎಂದು ವಾಟ್ಸ್ ಆಪ್ ನವರು ಪ್ರತ್ಯುತ್ತರ ನೀಡಿದರು. ಮೇ ತಿಂಗಳಲ್ಲಿ ಮತ್ತು ನಂತರ ಮತ್ತೆ ಸಪ್ಟಂಬರಿನಲ್ಲಿ ಈ ಎಚ್ಚರಿಕೆಯನ್ನು ನೀಡಿರುವುದಾಗಿ ಅವರು ಹೇಳಿದ್ದಾರೆ. ಸರಕಾರದ ಹೇಳಿಕೆಗೆ ಉತ್ತರವಾಗಿ ವಾಟ್ಸ್ ಆಪ್ ಮೇ ತಿಂಗಳಲ್ಲಿ ಕಳಿಸಿದ ಟಿಪ್ಪಣಿ ಮತ್ತು ಸಪ್ಟಂಬರ್‌ನಲ್ಲಿ ಕಳಿಸಿದ ಪತ್ರವನ್ನು ಲಗತ್ತಿಸಿತ್ತು.

ನಂತರ, ಸರಕಾರ ಇದನ್ನು ದೃಢ ಪಡಿಸಿತು, 121 ಭಾರತೀಯರನ್ನು ಪೆಗಸಸ್ ಬೇಹುಗಾರಿಕೆ ಸಾಧನ ಗುರಿ ಮಾಡಿರುವ ಮಾಹಿತಿಯನ್ನು ಸಪ್ಟಂಬರ್ ನಲ್ಲಿ ಪಡೆದಿರುವುದಾಗಿ ಹೇಳಿತು, ಆದರೆ ಮಾಹಿತಿ ತಂತ್ರಜ್ಞಾನ ಮಂತ್ರಾಲಯದ ಪ್ರಕಾರ ಈ ಪತ್ರ 'ಬಹಳ ಅಸ್ಪಷ್ಟ'ವಾಗಿತ್ತು.

ವಾಟ್ಸ್ ಆಪ್ ಸರಕಾರದೊಂದಿಗೆ ಹಂಚಿಕೊಂಡ ಮಾಹಿತಿಯ ವಿವರಗಳನ್ನು ನೀಡಿರುವುದು, ಈ ಬೇಹುಗಾರಿಕೆಗೆ ಗುರಿಯಾದ ಜನಗಳ ಹೆಸರುಗಳೆಲ್ಲ ಸರಕಾರ ಮತ್ತು ಅದರ ಧೋರಣೆಗಳ ಟೀಕಾಕಾರರಾಗಿರುವ ಸುಪರಿಚಿತ ಕಾರ್ಯಕರ್ತರು ಮತ್ತು ಪತ್ರಕರ್ತರದ್ದಾಗಿರುವುದು, ಈ ಬಗ್ಗೆ ತಮಗೆ ಗೊತ್ತಿರಲಿಲ್ಲ ಎಂದು ನಟಿಸುವ ಸರಕಾರದ ಅಸಮರ್ಪಕ ಮತ್ತು ಕುಂಟು ನೆವವೊಡ್ಡುವ ಪ್ರಯತ್ನಗಳು–ಇವೆಲ್ಲವೂ ಸರಕಾರವೇ ತನ್ನನ್ನು ಟೀಕಿಸುವವರ ಖಾತೆಗಳನ್ನು ಸೀಳಲು ಇಸ್ರೇಲೀ ಬೇಹುಗಾರಿಕೆ ಸಾಧನವನ್ನು ಬಳಸುವಲ್ಲಿ ಶಾಮೀಲಾಗಿದೆ ಎಂಬ ಸಂದೇಹಗಳನ್ನು ದೃಢಪಡಿಸುತ್ತವೆ. ವಾಟ್ಸ್ ಆಪ್ ಸರಕಾರಕ್ಕೆ ನೀಡಿರುವ ಹೆಸರುಗಳಲ್ಲಿ ಭೀಮ–ಕೋರೆಗಾಂವ್ ವಿಷಯದಲ್ಲಿ ಆಪಾದಿತರಾಗಿರುವವರು ಮತ್ತು ಅವರ ರಕ್ಷಣೆಗೆ ನಿಂತಿರುವ ವಕೀಲರಲ್ಲಿ ಹಲವರ ಹೆಸರುಗಳು ಇವೆ. ಆದ್ದರಿಂದ ಇವೆರಡರ ನಡುವಿನ ಸಂಬಂಧ ಸಾಕಷ್ಟು ಸ್ಪಷ್ಟವಾಗಿದೆ.

ತನ್ನ ಬೇಹುಗಾರಿಕೆ ತಂತ್ರಜ್ಞಾನವನ್ನು ಸರಕಾರಗಳಿಗೆ ಮತ್ತು ಸರಕಾರೀ ಏಜೆನ್ಸಿಗಳಿಗೆ ಮಾತ್ರ ನೀಡುವುದು ಎಂದು ಅದನ್ನು ಉತ್ಪಾದಿಸಿದ ಎನ್ ಎಸ್ ಒ ಕಂಪನಿ ಹೇಳಿಕೆ ನೀಡಿದೆ. ಈ ಬೇಹುಗಾರಿಕೆ ತಂತ್ರಜ್ಞಾನ ವಿಪರೀತ ವೆಚ್ಚದಾಯಕವಾಗಿದ್ದು ಯಾವುದೇ ಖಾಸಗಿ ಸಂಸ್ಥೆಗೆ ಇದರ ವೆಚ್ಚ ಭರಿಸುವುದು ಸಾಧ್ಯವಿಲ್ಲ ಎಂಬುದನ್ನೂ ಇಲ್ಲಿ ಗಮನಿಸಬಹುದು.

ಈ ಇಡೀ ಕೊಳಕು ವ್ಯವಹಾರದ ಆಮೂಲಾಗ್ರ ತನಿಖೆ ನಡೆಯಬೇಕು. ಸರಕಾರೀ ಏಜೆನ್ಸಿಗಳು ಯಾವುದಾದರೂ ಈ ಕಾನೂನುಬಾಹಿರ ಕೃತ್ಯಕ್ಕೆ ಕಾರಣರಾಗಿದ್ದರೆ, ಅದಕ್ಕೆ ಹೊಣೆಗಾರರಾದವರನ್ನು ಶಿಕ್ಷಿಸಬೇಕು. ಈ ಪ್ರಕರಣ ಸಾಮಾನ್ಯ ನಾಗರಿಕರ ಹಕ್ಕುಗಳು ಮತ್ತು ಖಾಸಗಿತ್ವವನ್ನು ಕಾಪಾಡಿಕೊಳುವ್ವ ಒಂದು ಸಮಗ್ರ ಮಾಹಿತಿ ರಕ್ಷಣಾ ಕಾಯ್ದೆಯನ್ನು ತರಬೇಕಾದ ತುರ್ತನ್ನು ಎತ್ತಿತೋರಿದೆ.


ವಾಟ್ಸ್ ಆಪ್ ಸರಕಾರಕ್ಕೆ ನೀಡಿರುವ ತನ್ನ ಖಾತೆಗಳ ಹ್ಯಾಕ್ ಆಗಿರುವ ಹೆಸರುಗಳಲ್ಲಿ ಭೀಮ–ಕೋರೆಗಾಂವ್ ವಿಷಯದಲ್ಲಿ ಆಪಾದಿತರಾಗಿರುವವರು ಮತ್ತು ಅವರ ರಕ್ಷಣೆಗೆ ನಿಂತಿರುವ ವಕೀಲರಲ್ಲಿ ಹಲವರ ಹೆಸರುಗಳು ಇವೆ. ಆದ್ದರಿಂದ ಇವೆರಡರ ನಡುವಿನ ಸಂಬಂಧ ಸಾಕಷ್ಟು ಸ್ಪಷ್ಟವಾಗಿದೆ.. ಇವೆಲ್ಲವೂ ಸರಕಾರವೇ ತನ್ನನ್ನು ಟೀಕಿಸುವವರ ಖಾತೆಗಳನ್ನು ಸೀಳಲು ಇಸ್ರೇಲೀ ಬೇಹುಗಾರಿಕೆ ಸಾಧನವನ್ನು ಬಳಸುವಲ್ಲಿ ಶಾಮೀಲಾಗಿದೆ ಎಂಬ ಸಂದೇಹಗಳನ್ನು ದೃಢಪಡಿಸುತ್ತವೆ. ಈ ಇಡೀ ಕೊಳಕು ವ್ಯವಹಾರದ ಆಮೂಲಾಗ್ರ ತನಿಖೆ ನಡೆಯಬೇಕು.

(ಪೀಪಲ್ಸ್ ಡೆಮಾಕ್ರಸಿ ಸಂಪಾದಕೀಯ, ನವಂಬರ್ 10)





ಸಮಗ್ರ, ಸಮೃದ್ಧ ಮತ್ತು ಸೌಹಾರ್ದ ಕರ್ನಾಟಕಕ್ಕಾಗಿ 'ಬಲಿಷ್ಟ ಕಾರ್ಮಿಕ ಚಳವಳಿ ಕಟ್ಟುವ ಪಣ'..



ಸಿಐಟಿಯು 14 ನೇ ರಾಜ್ಯ ಸಮ್ಮೇಳನದ ನಿರ್ಧಾರ

ಕೆ. ಮಹಾಂತೇಶ್
ಸಿಐಟಿಯು ರಾಜ್ಯ ಕಾರ್ಯದರ್ಶಿ

ಸಮಗ್ರ, ಸಮೃದ್ಧ ಮತ್ತು ಸೌಹಾರ್ದಕ್ಕಾಗಿ ಎನ್ನುವ ಘೋಷಣೆಯೊಂದಿಗೆ ಸಿಐಟಿಯುನ 14ನೇ ಸಮ್ಮೇಳನವು ನವೆಂಬರ್ 8, 9 ಮತ್ತು 10 ರಂದು ಮೂರು ದಿನಗಳ ಕಾಲ ಯಶಸ್ವಿಯಾಗಿ ಜರುಗಿತು. ನವೆಂಬರ್ 8ರಂದು ತುಮಕೂರು ನಗರದಲ್ಲಿ ಐದು ಸಾವಿರಕ್ಕೂ ಹೆಚ್ಚು ಕಾರ್ಮಿಕರ ಬೃಹತ್ ರ‍್ಯಾಲಿ ಹಾಗೂ ಬಹಿರಂಗ ಸಭೆಯನ್ನು ಆಯೋಜಿಸುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಲಾಯಿತು.

ನಗರದ ಟೌನ್ ಹಾಲ್ ವೃತ್ತದಿಂದ 14 ಕೆಂಪು ಸಮವಸ್ತ್ರಧಾರಿ ಸ್ವಯಂ ಸೇವಕರು ಕೆಂಬಾವುಟಗಳನ್ನು ಹಿಡಿದು ಶಿಸ್ತುಬದ್ಧ ಮೆರವಣಿಗೆ ಆರಂಭಿಸಿದರು. ಅವರ ಹಿಂಭಾಗ ಸಿಐಟಿಯು ರಾಜ್ಯ ಪದಾಧಿಕಾರಿಗಳು ಬಳಿಕಾ ಅಂಗನವಾಡಿ, ಅಕ್ಷರದಾಸೋಹ, ಆಶಾ ಹಾಗು ಘನಕೈಗಾರಿಕೆಗಳು ಮತ್ತು ಪಂಚಾಯತ್ ನೌಕರರು, ಕಟ್ಟಡ ಕಾರ್ಮಿಕರು, ಸಾರಿಗೆ ವಲಯವಾದ ಆಟೋ, ರಸ್ತೆ ಸಾರಿಗೆ, ಖಾಸಗಿ ಬಸ್ ಚಾಲಕರು, ಹಮಾಲಿ, ಬೀಡಿ, ಪೌರಕಾರ್ಮಿಕರು, ಬೀದಿಬದಿ ವ್ಯಾಪಾರಿಗಳು, ಮನೆಗೆಲಸಗಾರರು, ಟೈಲರ್‌ಗಳು, ಹೀಗೆ ತುಮಕೂರಿನ 10 ತಾಲೂಕುಗಳು ಹಾಗೂ ಅದರ ಸುತ್ತಮುತ್ತಲಿನ ಜಿಲ್ಲೆಗಳಿಂದ ಆಗಮಿಸಿದ್ದ ಕಾರ್ಮಿಕರು ಅವರೊಂದಿಗೆ ರೈತ, ಕೂಲಿಕಾರ, ವಿದ್ಯಾರ್ಥಿ ಯುವ ಜನ ಮಹಿಳಾ ಕಾರ್ಯಕರ್ತರು ಪ್ರಮುಖ ಬೀದಿಗಳಲ್ಲಿ ಘೋಷಣೆಗಳನ್ನು ಕೂಗುತ್ತಾ ಅಮಾನಿಕೆರೆಯಲ್ಲಿ ನಿರ್ಮಿಸಲಾದ ಗಾಜಿನ



ಮನೆವರೆಗೂ ಮೆರವಣಿಗೆ ನಡೆಸಿದರು.

ನನ್ನೊಳಗೊಬ್ಬ ಭಗತ್ ಸಿಂಗ್ ನಾಟಕ ಪ್ರದರ್ಶನ :

ಮೆರವಣಿಗೆ ಗಾಜಿನ ಮನೆ ಪ್ರವೇಶಿಸುತ್ತಿದ್ದಂತೆ ಬೆಂಗಳೂರಿನ ಕ್ಯಾಂಪಸ್ ಥಿಯೇಟರ್ ತಂಡದ ಯುವಜನರು 'ಜಲಿಯನ್ ವಾಲಬಾಗ್ ಹತ್ಯಾಕಾಂಡ'ದ ನೆನಪಿಗಾಗಿ ತಯಾರಿಸಿರುವ ಮತ್ತು ಈಗಾಗಲೇ ರಾಜ್ಯಾದ್ಯಂತ ಸಾಕಷ್ಟು ಯಶಸ್ವಿ ಪ್ರದರ್ಶನ ಕಂಡಿರುವ 'ನನ್ನೊಳಗೊಬ್ಬ ಭಗತ್‌ಸಿಂಗ್' ಕಿರು ನಾಟಕವನ್ನು ಬಹಿರಂಗ ಸಭೆಯ ವೇದಿಕೆಯಲ್ಲಿ ಪ್ರದರ್ಶಿಸಿ ಸೇರಿದ್ದ ಸಾವಿರಾರು ಕಾರ್ಮಿಕರಲ್ಲಿ ಸ್ಫೂರ್ತಿ ಹಾಗೂ ಜಾಗೃತಿ ಮೂಡಿಸಿದರು. ಇದಾದ ಬಳಿಕಾ ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಬಿ. ಉಮೇಶ್ ಅಖಿಲ ಭಾರತ ಮುಖಂಡರನ್ನು ಹಾಗೂ ರಾಜ್ಯ ಪದಾಧಿಕಾರಿಗಳು ಹಾಗೂ ಇತರೆ ಗಣ್ಯರನ್ನು ವೇದಿಕೆಗೆ ಆಹ್ವಾನಿಸಿ ಬಹಿರಂಗ ಅಧಿವೇಶನಕ್ಕೆ ಚಾಲನೆ ನೀಡಿದರು. ಸಮ್ಮೇಳನದ ಬಹಿರಂಗ ಸಭೆಯ ವೇದಿಕೆಗೆ ತುಮಕೂರು ಜಿಲ್ಲೆಯಲ್ಲಿ ಕಾರ್ಮಿಕ ಚಳವಳಿಯನ್ನು ಕಟ್ಟಲು ಶ್ರಮಿಸಿದ ಮತ್ತು ಇತ್ತೀಚಿಗಷ್ಟೇ ನಮ್ಮನ್ನು ಆಗಲಿದ ನೌಷಾದ್ ಸೆಹಗನ್ ಮತ್ತು ವಿ.ಕೋದಂಡರಾಮು ವೇದಿಕೆ ಎಂದು ಹೆಸರಿಡಲಾಗಿತ್ತು.

ಆರ್ಥಿಕತೆ ಕುಸಿತದಿಂದ ದುಡಿಯುವ ವರ್ಗ ತತ್ತರ –ತಪನ್ ಸೇನ್ ಆತಂಕ

ಸಮ್ಮೇಳನದ ಬಹಿರಂಗ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡಿದ ಸಿಐಟಿಯು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ರಾಜ್ಯಸಭಾ ಸದಸ್ಯರ ಆದ ತಪನ್ ಸೇನ್ ದೇಶದಲ್ಲಿ ಆರ್ಥಿಕ ಕುಸಿತದಿಂದ ಉದ್ದಿಮೆಗಳು, ಕೈಗಾರಿಕೆಗಳು ಬಾಗಿಲು ಮುಚ್ಚಿದ್ದು ದುಡಿಯುವ ವರ್ಗ ತತ್ತರಿಸಿ ಹೋಗಿದೆ. ಸ್ಕೀಂ ನೌಕರರು, ಸಂಘಟಿತ ಮತ್ತು ಅಸಂಘಟಿತ ನೌಕರರು ಇನ್ನಿಲ್ಲದ ಸಂಕಷ್ಟ ಅನುಭವಿಸುವಂತಾಗಿದೆ ಎಂದು ಆದ ಆತಂಕ ವ್ಯಕ್ತಪಡಿಸಿದರು. ಕೇಂದ್ರ ಸರ್ಕಾರ ದೇಶವನ್ನು ಮಾರಾಟ ಮಾಡಲು ಹೊರಟಿದೆ. ಬಂಡವಾಳಶಾಹಿಗಳು ಕಿರುಪಾಲುದಾರರಾಗುತ್ತಿದ್ದಾರೆ. ಕೈಗಾರಿಕೆಗಳು ಮುಚ್ಚುತ್ತಿದ್ದು ಕಾರ್ಮಿಕರು ಬೀದಿಪಾಲಾಗುತ್ತಿದ್ದಾರೆ ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಲು ಹೊರಟಿದೆ. ಕಾನೂನುಗಳನ್ನು ಸಂಹಿತೆಗಳನ್ನಾಗಿ ಮಾಡುತ್ತ ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳುವ ಪ್ರಯತ್ನ ಮಾಡುತ್ತಿದೆ. ಬಂಡವಾಳ ಶಕ್ತಿಗಳು ಮತ್ತು ರಾಜಕೀಯ ಪಕ್ಷಗಳು ಒಂದಾಗುತ್ತಿವೆ. ಸರ್ಕಾರದ ಲೋಪದೋಷಗಳನ್ನು ಪ್ರಶ್ನಿಸುವವರನ್ನು ಭಯೋತ್ಪಾದಕ ರಂತೆ ಬಿಂಬಿಸಲಾಗುತ್ತಿದೆ. ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆಯಡಿ ಬಂಧಿಸಿ ಜೈಲಿಗೆ ಕಳಿಸುವ ಕೆಲಸ ವ್ಯವಸ್ಥಿತವಾಗಿ ನಡೆಯುತ್ತಿದೆ. ಒಕ್ಕೂಟ ವ್ಯವಸ್ಥೆಯನ್ನು ಯುನಿಯನ್ ಟೆರಿಟೋರಿಗಳನ್ನಾಗಿ ಮಾಡುತ್ತಿದೆ. ➡









ಇವರ ವಿರುದ್ಧ ಸಮರಧೀರ ಹೋರಾಟ ನಡೆಸಲು ಎಲ್ಲಾ ವರ್ಗದ ಕಾರ್ಮಿಕರು ಒಂದಾಗಬೇಕೆಂದರು.

ಆರ್.ಎಸ್ಎಸ್ ಮತ್ತು ಬಿಜೆಪಿ ಸಮಾಜವನ್ನು ಒಡೆಯುವ ಕೆಲಸ ಮಾಡುತ್ತಿದೆ. ದೇಶಭಕ್ತಿ ಹೆಸರಿನಲ್ಲಿ ದೇಶದ ಸಂಪತ್ತು ಲೂಟಿ ಮಾಡಲು ಬಂಡವಾಳಗಾರರಿಗೆ ಅವಕಾಶ ಕಲ್ಪಿಸಲಾಗಿದೆ. ದೇಶಭಕ್ತರು ಮಾತ್ರ ಮೌನವಹಿಸಿದ್ದಾರೆ. ದುಡಿಯುವ ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿರುವ ಶಕ್ತಿಗಳ ವಿರುದ್ಧ ಐಕ್ಯ ಹೋರಾ ಮಾಡಬೇಕು. ಇಂತಹ ಹೋರಾಟಗಳಿಂದಲೇ ಕೋಮುವಾದಿ ಶಕ್ತಿಗಳನ್ನು ಹತ್ತಿಕ್ಕಲು ಸಾಧ್ಯ ಎಂದರು.

ಮುಖ್ಯ ಅತಿಥಿಗಳಾಗಿದ್ದ ಸಿಐಟಿಯು ರಾಷ್ಟ್ರೀಯ ಅಧ್ಯಕ್ಷೆ ಡಾ.ಕೆ.ಹೇಮಲತಾ ಮಾತನಾಡಿ, ಮಹಿಳೆಯರಿಗೆ ಸಮಾನ ವೇತನ ಸಿಗುತ್ತಿಲ್ಲ. ಹಲವು ಹೋರಾಟ ಮಾಡಿದರೂ ಮಹಿಳೆಯರು ಇನ್ನೂ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸ್ಕೀಂ ನೌಕರರಿಗೆ ಕೆಲವೊಂದು ಸೌಲಭ್ಯ ಸಿಗುತ್ತದೆಯಾದರೂ ಬಿಸಿಯೂಟ ಮಹಿಳಾ ಕಾರ್ಮಿಕರಿಗೆ ತಿಂಗಳ ರಜೆ, ಹೆರಿಗೆ ರಜೆ ಸೇರಿದಂತೆ ಯಾವುದೇ ರಜೆಗಳು ಸಿಗುತ್ತಿಲ್ಲ. ಇದರ ವಿರುದ್ಧ ಬೃಹತ್ ಹೋರಾಟ ರೂಪಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಬಿಜೆಪಿ ಪ್ರಭುತ್ವ ಮಹಿಳಾ ಹಕ್ಕುಗಳನ್ನು ದಮನ ಮಾಡುವ ಕಾರ್ಯದಲ್ಲಿ ನಿರತವಾಗಿದೆ. ಬಿಸಿಯೂಟ ತಯಾರಿಕೆಗೆ ಬೃಹತ್ ಎನ್.ಜಿ.ಓ ಗಳಿಗೆ ವಹಿಸುವ ಕೆಲಸ ನಡೆಯುತ್ತಿದೆ. ಬಿಜೆಪಿ ನಡೆಸುತ್ತಿರುವ ಜನವಿರೋಧಿ, ಮಹಿಳಾ ವಿರೋಧಿ ಮತ್ತು ರೈತ ವಿರೋಧಿ ನೀತಿಗಳನ್ನು ಪ್ರತಿಯೊಬ್ಬ ಪ್ರಜೆಗೂ ತಿಳಿಸಬೇಕು. ಮನವರಿಕೆ ಮಾಡಿ ಕೇಂದ್ರದ ದಮನಕಾರಿ ನೀತಿಗಳು ವಿರುದ್ದ ಸಂಘಟಿತ ಹೋರಾಟ ರೂಪಿಸಬೇಕು ಎಂದು ಕರೆ ನೀಡಿದರು.

ಸಿಐಟಿಯು ರಾಜ್ಯ ಪ್ರಧಾನಕಾರ್ಯದರ್ಶಿ ಮೀನಾಕ್ಷಿ ಸುಂದರಂ ಮಾತನಾಡಿ, ಕೇಂದ್ರದ ನೀತಿಗಳಿಂದ ರೈತರು ಬೀದಿಗೆ ಬಿದ್ದಿದ್ದಾರೆ. ಗ್ರಾಮೀಣ ಜನತೆ ನಗರಗಳತ್ತ ವಲಸೆ ಬರುತ್ತಿದೆ. ಎಲ್ಲರಿಗೂ ಉದ್ಯೋಗದ ಹಸಿವು ಇದೆ. ದುಡಿಯುವರಿಗೆ ಉದ್ಯೋಗ ಇಲ್ಲವಾಗಿವೆ. ಉಳ್ಳವರಿಗೆ ಶಿಕ್ಷಣ ಮತ್ತು ಆರೋಗ್ಯ ಎಂಬಂತಹ ಸ್ಥಿತಿ ನಿರ್ಮಾಣವಾಗಿದೆ. ಬಡವರ್ಗ ಸಂಕಷ್ಟಗಳ ಸರಮಾಲೆ ಎದುರಿಸುತ್ತಿದೆ. ಕೇಂದ್ರದ ಜನವಿರೋಧಿ ಆರ್ಥಿಕ ನೀತಿಗಳನ್ನು ಹಿಮ್ಮೆಟ್ಟಿಸಲು ಮತ್ತು ಜನಪರ ನೀತಿಗಳನ್ನು ಜಾರಿಗೆ ತರಲು ಹೋರಾಟ ನಡೆಸುವುದು ಅನಿವಾರ್ಯವಾಗಿದೆ ಎಂದರು.

ದೇಶದಲ್ಲಿ ಜನರ ಐಕ್ಯತೆ ಮುರಿಯುವ ಕೃತ್ಯಗಳು ನಡೆಯುತ್ತಿವೆ. ಇದಕ್ಕೆ ಕಾರ್ಮಿಕರು ಅವಕಾಶ ನೀಡಬಾರದು ಎಂದರು. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಯಾವುದೇ ಕೆಲಸ ಮಾಡುತ್ತಿಲ್ಲ. ನೆರೆ ಬಂದು ಬದುಕು ಕೊಚ್ಚಿ ಹೋಗಿದ್ದರೂ ಪರಿಹಾರ ಕೊಡಲು ಸಾಧ್ಯವಾಗಿಲ್ಲ. ನೋವಿನಿಂದ ಬಳಲುತ್ತಿರುವ ಜನರ ನೆರವಿಗೆ ಸರ್ಕಾರ ಬರುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು.

ಜನಪರ ಚಿಂತಕ ಕೆ.ದೊರೈರಾಜ್ ಮಾತನಾಡಿ, ದೇಶದ ಆರ್ಥಿಕ ಸ್ಥಿತಿ ಜನರ ಬದುಕನ್ನು ಬೀದಿಪಾಲು ಮಾಡಿದೆ. ಆರ್ಥಿಕ ಸಂಕಷ್ಟಗಳ ನಿವಾರಣೆಗೆ ಸರ್ಕಾರ ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಶೋಷಣೆ ಹೆಚ್ಚುತ್ತಿದೆ. ಸಾಮಾಜಿಕ ಭದ್ರತೆಗೆ ಧಕ್ಕೆ ಬಂದಿದೆ. ಸರ್ಕಾರವೇ ಜನರ ಹಕ್ಕುಗಳನ್ನು ದಮನ ಮಾಡುತ್ತಿದೆ. ಜಾತಿ, ಧರ್ಮದ ಹೆಸರಿನಲ್ಲಿ ದಲಿತರು, ಮಹಿಳೆಯರು, ಕಾರ್ಮಿಕರು ಮತ್ತು ಅಲ್ಪಸಂಖ್ಯಾತರು ಭಯಭೀತರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಐಕ್ಯ ಹೋರಾಟಕ್ಕೆ ಸಿದ್ದರಾಗಬೇಕು. ಜಾತಿ ಧರ್ಮ ಮೀರಿದ ಶ್ರಮಿಕ ವರ್ಗದ ಐಕ್ಯತೆ

ಪುಟ 10 ಕ್ಕೆ



ಸಮ್ಮೇಳನದ ಸಮಾರೋಪ

ದೇಶದ ಶತ್ರುವಿನ ವಿರುದ್ಧ ಐಕ್ಯ ಹೋರಾಟ ಅಗತ್ಯ – ತಪನ್ ಸೇನ್

ಸಮ್ಮೇಳನದ ಸಮಾರೋಪ ಭಾಷಣ ಮಾಡಿದ ಸಿಐಟಿಯು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ರೈತರು, ಕಾರ್ಮಿಕರು, ಮಹಿಳೆಯರು ಮತ್ತು ಜನಸಾಮಾನ್ಯರ ಶತ್ರು ಯಾರೆಂಬುದನ್ನು ಮೊದಲು ದೇಶದ ತಳಮಟ್ಟಕ್ಕೆ ಕೊಂಡೊಯ್ದು ದೇಶದ ಶತ್ರುವಿನ ವಿರುದ್ಧ ಐಕ್ಯ ಹೋರಾಟ ಮಾಡಬೇಕಾದುದು ಅನಿವಾರ್ಯವಾಗಿದ್ದು ಎಲ್ಲಾ ವರ್ಗದ ಜನ ಇದಕ್ಕೆ ಸಜ್ಜಾಗಬೇಕು ಎಂದು ಕರೆ ನೀಡಿದರು.

ಅಧಿಕಾರ ನಡೆಸುತ್ತಿರುವ ಶಕ್ತಿಗಳು ಜನರ ನಡುವೆ ಘರ್ಷಣೆ ನಡೆಯುವಂತೆ ಮಾಡುತ್ತಿವೆ. ಸಮಾಜದಲ್ಲಿ ಸಮುದಾಯ ಸಮುದಾಯಗಳ ನಡುವೆ ತಿಕ್ಕಾಟಗಳು ನಡೆಯುವಂತೆ ನೋಡಿಕೊಂಡರೆ ಅಧಿಕಾರ ನಡೆಸುವುದು ಸುಲಭ ಎಂದು ತಿಳಿದಿವೆ. ಹೀಗಾಗಿಯೇ ಜಾತಿ, ಧರ್ಮ, ಮತ–ಪಂಥದ ಆಧಾರದ ಮೇಲೆ ಸಮಾಜವನ್ನು ವಿಭಜಿಸುವ ಕೆಲಸದಲ್ಲಿ ತೊಡಗಿವೆ ಎಂದು ಟೀಕಾಪ್ರಹಾರ ನಡೆಸಿದರು.

ಕಳೆದ ಮೂರು ವರ್ಷಗಳಲ್ಲಿ ದೇಶದಲ್ಲಿ ಏನೆಲ್ಲಾ ಬೆಳವಣಿಗೆಗಳು ನಡೆದಿವೆ. ಜನ ವಿರೋಧಿ, ಕಾರ್ಮಿಕ ವಿರೋಧಿ, ಪ್ರಜಾ ತಾಂತ್ರಿಕ ವಿರೋಧಿ ನೀತಿಗಳು ಕಾರ್ಮಿಕರನ್ನು ಬೀದಿ ಪಾಲು ಮಾಡಿವೆ. ರೈತರು ದಿವಾಳಿಯಾಗುವಂತೆ ಮಾಡಿವೆ. ಇಂತಹ ನೀತಿಗಳೇ ದೇಶ ಹಿಂದಕ್ಕೆ ಹೋಗಲು ಕಾರಣವಾಗಿದೆ. ಇದೇ ಶಕ್ತಿಗಳೇ ನಮ್ಮ ವಿರೋಧಿಗಳೆಂಬುದನ್ನು ಮನಗಾಣಬೇಕು. ಜನರನ್ನು ಕಾರ್ಮಿಕರನ್ನು ಶೋಷಿಸುತ್ತಿರುವ ಶಕ್ತಿಗಳನ್ನು ಬಗ್ಗುಬಡಿಯಬೇಕಾಗಿದೆ ಎಂದು ಸಲಹೆ ನೀಡಿದರು.

ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದಲೂ ದೇಶಾದ್ಯಂತ ಹೋರಾಟ ನಡೆಯುತ್ತಲೇ ಇವೆ. ಕೇವಲ ಕಾರ್ಮಿಕರಷ್ಟೇ ಅಲ್ಲ ಬೇರೆ ಜನವರ್ಗವೂ ಹೋರಾಟದಲ್ಲಿ ಭಾಗವಹಿಸಿದೆ. ಒಂದಲ್ಲ ಒಂದು ರೀತಿ ಹೋರಾಟಗಳು ಮುಂದುವರಿದಿವೆ. ಹೊಸ ಚಳವಳಿಗಳನ್ನು ನಡೆಸುತ್ತಿರುವುದನ್ನು ನೋಡಿದರೆ ಕಾರ್ಮಿಕ ವರ್ಗ ಮತ್ತು ಜನರು ಎಷ್ಟೊಂದು ಸಮಸ್ಯೆ ಎದುರಿಸುತ್ತಿದ್ದಾರೆ ಎಂಬುದು ತಿಳಿಯುತ್ತದೆ. ಶೋಷಣೆ ಮುಕ್ತ ಸಮಸಮಾಜ ನಿರ್ಮಾಣಕ್ಕೆ ಮತ್ತು ಈಗಿರುವ ಸಮಸ್ಯೆಗಳ ನಿವಾರಣೆಗೆ ಸಿಐಟಿಯು ಹೋರಾಟ ನಡೆಸುತ್ತಲೇ ಬರುತ್ತಿದೆ ಎಂದರು.

ದೇಶೀಯ ಬಂಡವಾಳಗಾರರು, ವಿದೇಶಿಯ ಬಹುರಾಷ್ಟ್ರೀಯ ಕಂಪನಿಗಳು ಭಾರತ ಸರ್ಕಾರವನ್ನು ನಿಯಂತ್ರಿಸುತ್ತಿವೆ. ಇದರ ವಿರುದ್ಧ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಜನವರಿ 8ರ ಹೋರಾಟಕ್ಕೆ ಸಜ್ಜಾಗುತ್ತಿವೆ. ಇದರ ಜೊತೆಗೆ ಸಮಾಜದಲ್ಲಿ ಬದಲಾವಣೆಯನ್ನು ತರುವುದೇ ಸಿಐಟಿಯುನ ಪ್ರಮುಖ ಉದ್ದೇಶವಾಗಿದೆ. ಸಿಐಟಿಯು ನಾಯಕತ್ವವು, ಜಾತಿ, ಧರ್ಮವನ್ನು ಮೀರಿದ ವರ್ಗವನ್ನು ಕಟ್ಟುತ್ತಿದೆ. ಆದರೆ ಹೋರಾಟಕ್ಕೆ ಬರುವಾಗ ವರ್ಗಪ್ರಜ್ಞೆಯಿಂದ ಬರುವ ಕಾರ್ಮಿಕರು ಅಲ್ಲಿಂದ ಊರುಗಳಿಗೆ ತೆರಳಿದ ನಂತರ ಅವರಲ್ಲಿ ಹಿಂದೂ, ಮುಸ್ಲೀಂ ಮೊದಲಾದ ಧಾರ್ಮಿಕ ಭಾವನೆ ಮೂಡುತ್ತಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ ಎಂದು ಹೇಳಿದರು.

ಕೇಂದ್ರ ಕಾರ್ಮಿಕ ಸಂಘಟನೆಗಳ ಹೊರತಂದಿರುವ ಪುಸ್ತಕಗಳನ್ನು ಜನಸಾಮಾನ್ಯರಿಗೂ ತಲುಪಿಸುವ ವ್ಯವಸ್ಥೆ ಆಗಬೇಕು. ತಲುಪದೇ ಇರುವ ಜನರನ್ನು ತಲುಪುವುದು ಹೇಗೆ ಎಂಬ ಬಗ್ಗೆ ಚಿಂತನೆ ನಡೆಸಬೇಕು. ತಲುಪದೇ ಇರುವ ಜನವರ್ಗವನ್ನು ಭೇಟಿ ಮಾಡಿ ನಮ್ಮ ನಿಜವಾದ ಶತ್ರು ಯಾರೆಂಬುದನ್ನು ಮನವರಿಕೆ ಮಾಡಬೇಕು. ಆಗ ತಳಮಟ್ಟದಿಂದ ಹೋರಾಟ ರೂಪಿಸಲು ಸಾಧ್ಯವಾಗುತ್ತದೆ. ಮುಖಂಡರು ಜನರ ಬಳಿಗೆ ಹೋಗಬೇಕು. ಅವರಲ್ಲಿ ಜಾಗೃತಿ ಮೂಡಿಸುವಂತಹ ಕೆಲಸ ಮಾಡಬೇಕು. ಆರ್ಥಿಕ ಸಾರ್ವಭೌಮತ್ವಕ್ಕೆ ಹಾಘೂ ಆರ್ಥಿಕ ಸ್ವಾಯತ್ತತೆ ಹಾಳುಮಾಡುತ್ತಿರುವ ಶಕ್ತಿಗಳನ್ನು ಅಧಿಕಾರದಿಂದ ಕೆಳಗಿಳಿಸಬೇಕು ಎಂದು ತಿಳಿಸಿದರು.

ಕಾರ್ಮಿಕ ಸಂಘಟನೆಗಳು ಕೇವಲ ಕಾರ್ಮಿಕರನ್ನು ಮಾತ್ರ ಒಳಗೊಳ್ಳದೆ, ವಿದ್ಯಾರ್ಥಿಗಳು, ಯುವಜನರನ್ನು ಸೇರಿಸಿಕೊಂಡು ಹೋರಾಟಕ್ಕೆ ಅಣಿನೆರೆಸಿದಾಗ ಮಾತ್ರವೇ ಕಾರ್ಮಿಕರಲ್ಲಿ ಪ್ರಜ್ಞೆ ಹೆಚ್ಚಲು ಸಾಧ್ಯವಾಗುತ್ತದೆ. ಜಿಲ್ಲಾ ಮಟ್ಟದ ಸಂಘಗಳು ಮತ್ತು ಸಮಿತಿಗಳನ್ನು ಬಲಗೊಳಿಸಬೇಕು. ಬರೀ ದೂರುತ್ತಾ ಕೂತರೆ ನಮ್ಮ ಗುರಿಯನ್ನು ಮುಟ್ಟಲು ಆಗುವುದಿಲ್ಲ ಎಂದು ವಿವರಿಸಿದರು.

ಸಮ್ಮೇಳನಕ್ಕೆ ದುಡಿದವರಿಗೆ ಕೃತಜ್ಞತೆಗಳು:

ಮೂರು ದಿನಗ ಈ ಸಮ್ಮೇಳನ ಯಶಸ್ವಿಗೆ ನೂರಾರು ಸಂಗಾತಿಗಳು ಕೆಳದ ಎರಡು ತಿಂಗಳಿಂದ ಶ್ರಮಿಸಿದ್ದರು. ಅವರ ಪರವಾಗಿ ವಿವಿಧ ಕಾರ್ಮಿಕ ಸಂಘಗಳ ಮುಖಂಡರನ್ನು ಸಮ್ಮೇಳನದಲ್ಲಿ ನೆನಪಿನ ಕಾಣಿಕೆ ನೀಡಿ ಅಖಿಲ ಭಾರತ ಮುಖಂಡರು ಗೌರವಿಸಿದರು. ಸ್ವಾಗತ ಸಮಿತಿ ಪರವಾಗಿ ಸೈಯದ್ ಮುಜೀಬ್, ಜಿ. ಕಮಲ ಸಮ್ಮೇಳನಕ್ಕೆ ಶ್ರಮಿಸಿದ ಮುಖಂಡರಿಗೆ ಸ್ವಾಗತ ಸಮಿತಿ ಪರವಾಗಿ ಕೃತಜ್ಞತೆ ಸಲ್ಲಿಸಿದರು. ಕೊನೆಯಲ್ಲಿ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಮೀ ಯವರು ಕೆಂಪು ಧ್ವಜ ಆವರೋಹಣದ ಮೂಲಕ ಸಮ್ಮೇಳನಕ್ಕೆ ವಿದ್ಯುಕ್ತವಾಗಿ ತೆರೆ ಎಳೆದರು ಬಳಿಕಾ ಸಾಮೂಹಿಕವಾಗಿ ಗೆಲುವು ನಮ್ಮದು ಹಾಡಿನ ಭವಿಷ್ಯದಲ್ಲಿ ಬಲಿಷ್ಟ ಕಾರ್ಮಿಕ ಚಳವಳಿ ಕಟ್ಟುವ ಪಣದೊಂದಿಗೆ ಮೂಲಕ 14 ನೆ ಸಮ್ಮೇಳನ ಕೊನೆಗೊಂಡಿತು.

ನೂತನ ರಾಜ್ಯ ಪದಾಧಿಕಾರಿಗಳು :

ಮೂರು ದಿನಗಳ ಕಾಲ ನಡೆದ 14 ನೇ ರಾಜ್ಯ ಸಮ್ಮೇಳನವು 35 ಜನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಅಯ್ಕೆ ಮಾಡಿತು. ಎಸ್. ವರಲಕ್ಷ್ಮಿ ಅಧ್ಯಕ್ಷರಾಗಿ, ಮೀನಾಕ್ಷಿ ಸುಂದರಂ ಪ್ರಧಾನ ಕಾರ್ಯದರ್ಶಿಯಾಗಿ, ಕೆ.ಪಿ. ಪರಮೇಶ್ವರ್ ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ವಿ.ಜೆ.ಕೆ. ನಾಯರ್, ಕೆ. ಶಂಕರ್, ಜೆ. ಬಾಲಕೃಷ್ಣ ಶೆಟ್ಟಿ, ಎನ್. ವೀರಸ್ವಾಮಿ, ಹೆಚ್. ಎನ್. ಗೋಪಾಲ ಗೌಡ, ವಸಂತ ಆಚಾರಿ, ಜಿ. ಜಯರಾಮ್, ಕೆ. ಪ್ರಕಾಶ್, ಟಿ. ಲೀಲಾವತಿ, ಶಾಂತಾ ಎನ್ ಘಂಟೆ, ಹರೀಶ್ ನಾಯ್ಕ್, ಆರ್.ಎಸ್. ಬಸವರಾಜ್. ಗೈಬು ಜೈನೇ ಖಾನ್ ಆಯ್ಕೆಯಾದರು.

ಕಾರ್ಯದರ್ಶಿಗಳಾಗಿ ಕೆ.ಎನ್. ಉಮೇಶ್, ಸೈಯದ್ ಮುಜೀಬ್, ಕೆ. ಮಹಂತೇಶ್, ಬಾಲಕೃಷ್ಣ ಶೆಟ್ಟಿ, ಎನ್. ಪ್ರತಾಪ್ ಸಿಂಹ, ಯಮುನಾ ಗಾಂವ್ಕರ್, ಹೆಚ್.ಎಸ್. ಸುನಂದ. ಮಹೇಶ್ ಪತ್ತಾರ್, ಎಂ.ಬಿ. ನಾಡಗೌಡ, ಮಾಲಿನಿ ಮೇಸ್ತ, ಸುನೀಲ್ ಕುಮಾರ್ ಬಜಾಲ್, ಧರ್ಮೇಶ್, ಬಿ. ಉಮೇಶ್, ಸಿ.ಆರ್. ಶಾನಭಾಗ್, ಪದ್ಮಾವತಿ ಶೆಟ್ಟಿ, ನಿರುಪಾದಿ ಬೆನಕಲ್, ಬಿ.ವಿ. ರಾಘವೇಂದ್ರ, ಜಿ. ರಾಮಕೃಷ್ಣ, ಬಿ.ಎನ್. ಮುಂಜುನಾಥ್ ಆಯ್ಕೆ ಮಾಡಲಾಯಿತು.

ಸಮಗ್ರ, ಸಮೃದ್ಧ ಮತ್ತು ಸೌಹಾರ್ದ ಕರ್ನಾಟಕಕ್ಕಾಗಿ....

ಪುಟ 9 ರಿಂದ

ಮತ್ತು ಮಾನವೀಯ ಸಮಾಜ ನಿರ್ಮಾಣಕ್ಕಾಗಿ ಎಲ್ಲರೂ ದುಡಿಯುಬೇಕು ಎಂದರು.

ಸಿಐಟಿಯು ಜಿಲ್ಲಾಧ್ಯಕ್ಷ ಸೈಯದ್ ಮುಜೀಬ್ ಮಾತನಾಡಿ, ಎಲ್ಲಾ ಕಾರ್ಮಿಕರು ಸಮ್ಮೇಳನದ ಯಶಸ್ವಿಗೆ ದುಡಿದಿದ್ದೀರಿ. ಇಂದು ಸಮ್ಮೇಳನ ಯಶಸ್ವಿಯಾಗಿದೆ. ಅದಕ್ಕೆ ಎಲ್ಲರಿಗೂ ಕೃತಜ್ಞತೆ ಸಲ್ಲಿಸುವುದಾಗಿ ಹೇಳಿದರು.

ಸಿಐಟಿಯು ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮೀ ಮಾತನಾಡಿ, ಬಿಜೆಪಿ ಸರ್ಕಾರ ಜನರ ದಿಕ್ಕು ತಪ್ಪಿಸುತ್ತಿದೆ. ಟಿಪ್ಪು ವಿಷಯವನ್ನು ಮುಂದಿಟ್ಟು ರಾಜಕೀಯ ಮಾಡುತ್ತಿದೆ. ಚುನಾವಣೆಗಳು ಬರುತ್ತಿದ್ದಂತೆಯೇ ಇಂತಹ ಕೆಲಸವನ್ನು ವ್ಯವಸ್ಥಿತವಾಗಿ ಮಾಡಲಾಗುತ್ತಿದೆ. ಇದರ ಬಗ್ಗೆ ಎಲ್ಲಾ ಕಾರ್ಮಿಕರು ಎಚ್ಚರದಿಂದ ಇರಬೇಕು ಎಂದು ತಿಳಿಸಿದರು.

ವೇದಿಕೆಯಲ್ಲಿ ಸಿಐಟಿಯು ಮುಖಂಡರಾದ ವಿಜೆಕೆ ನಾಯರ್, ಕೆಎನ್. ಉಮೇಶ್, ಕೆ. ಮಹಾಂತೇಶ್ ಸೇರಿ ಇತರೆ ಪದಾಧಿಕಾರಿಗಳು ಹಾಗೂ ಸ್ವಾಗತ ಸಮಿತಿಯ ಗುಲ್ಜಾರ್ ಬಾನು, ಶಂಕರ್, ಬಿ. ಷಣ್ಮುಖಪ್ಪ, ಎ. ಲೋಕೇಶ್, ಹೆಚ್.ಡಿ. ನಾಗೇಶ್ ಮೊದಲಾದವರು ಉಪಸ್ಥಿತರಿದ್ದರು. ಸಿಐಟಿಯು ಖಜಾಂಚಿ ಜಿ.ಕಮಲ ವಂದಿಸಿದರು.

ಸಾರ್ವತ್ರಿಕ ಮುಷ್ಕರ ಯಶಸ್ವಿಗೆ ನಿರ್ಣಯ :

ಇದೇ ವೇಳೆ ಜನವರಿ 8 ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ ಯಶಸ್ವಿಗೊಳಿಸಲು ಕರೆ ನೀಡುವ ನಿರ್ಣಯವನ್ನು ಸಿಐಟಿಯು ಕಾರ್ಯದರ್ಶಿ ಹೆಚ್. ಎಸ್. ಸುನಂದ ಮಂಡಿಸಿದರು. ಮತ್ತೊರ್ವ ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ್ ಅನುಮೋದಿಸಿದರು. ಅಯೋಧ್ಯಾ ಪ್ರಕರಣ ಸುಪ್ರೀಂ ಕೋರ್ಟ್ ನೀಡಲಿರುವ ತೀರ್ಪಿನ ಹಿನ್ನೆಲೆಯಲ್ಲಿ ಶಾಂತಿ, ಸೌಹಾರ್ದತೆ ಮತ್ತು ದುಡಿಯುವ ಜನರ ಐಕ್ಯತೆ ಕಾಪಾಡಲು ಸಿಐಟಿಯು ಕರೆ ವರದಿಯನ್ನು ರಾಜ್ಯ ಉಪಾಧ್ಯಕ್ಷ ಕೆ. ಪ್ರಕಾಶ್ ಮಂಡಿಸಿದರು. ಜಿಲ್ಲಾ ಕಾರ್ಯದರ್ಶಿ ಎನ್.ಕೆ. ಸುಬ್ರಮಣ್ಯ ಅನುಮೋದಿಸಿದರು.

ಪ್ಯಾಸಿಂಸಂ ವಿರುದ್ದ ಕಾರ್ಮಿಕ ವರ್ಗ ಪುಸ್ತಕ ಬಿಡುಗಡೆ

ಸಿಐಟಿಯು ರಾಷ್ಟ್ರೀಯ ಉಪಾಧ್ಯಕ್ಷರಾದ ಎ.ಕೆ. ಪದ್ಮನಾಭನ್ ಅವರು ಸಿಐಟಿಯು ತುಮಕೂರು ಜಿಲಲಾ ಸಮಿತಿ ಪ್ರಕಟಿಸಿದ 'ಪ್ಯಾಸಿಸಂ ಹಾಗೂ ಕಾರ್ಮಿಕ ವರ್ಗ' ಕುರಿತಾದ ಕಿರು ಪುಸ್ತಕವನ್ನು ಬಹಿರಂಗ ವೇದಿಕೆಯಲ್ಲಿ ಬಿಡುಗಡೆ ಮಾಡಿದರು. ಎರಡನೇ ಮಹಾಯುದ್ದದ ಸಮಯದಲ್ಲಿ ಇಡೀ ಜಗತ್ತಿಗೆ ಅಪಾಯವಗಿದ್ದ ಪ್ಯಾಸಿಸಂ ಇವ್ವು ಭಾರತದ ನೆಲದಲ್ಲಿ ವಿವಿಧ ಸ್ವರೂಪದಲ್ಲಿ ಪ್ರಕಟಗೊಳ್ಳುತ್ತಾ ಜನರ ಐಕ್ಯತೆಯನ್ನು ಸಮಾಜದ ಶಾಂತಿಯನ್ನು ಕದಡುತ್ತಿದೆ ಅಂತಿಮವಾಗಿ ಕಾರ್ಮಿಕ ವರ್ಗದ ಐಕ್ಯತೆಯನ್ನೇ ವಿಭಜನೆಗೊಳಿಸಲಿದೆ. ಈ ದಿಸೆಯಲ್ಲಿ ಕಾರ್ಮಿಕ ವರ್ಗದ ಚಳವಳಿಗೆ ಅತ್ಯಂತ ಅಪಾಯಕಾರಿಯಾದ ಈ ಪ್ಯಾಸಿಂಸಂ ಕುರಿತಾಗಿ ಜಾಗೃತಿ ಮೂಡಿಸಲು ಹಿರಿಯ ತಲೆಮಾರಿನ ಕಾರ್ಮಿಕ ಮುಖಂಡರಾದ ಸುನೀಲ್ ಮೈತ್ರಾ, ಬಿ. ಮಾಧವ ಮೊದಲಾದವರು ಬರೆದಿರುವ ಲೇಖನಗಳನ್ನು ಒಟ್ಟುಗೂಡಿಸಿ ಪ್ರಕಟಿಸಲಾದ ಈ ಕಿರು ಹೊತ್ತಿಗೆಯನ್ನು ಸಾಮಾನ್ಯ ಕಾರ್ಮಿಕರ ನಡುವೆ ಹೆಚ್ಚು ಪ್ರಚಾರ ಮಾಡಲು ಈ ಕಿರು ಹೊತ್ತಿಗೆಯನ್ನು ಮುದ್ರಿಸಿಲಾಗಿದೆ.

ಪ್ರತಿನಿಧಿ ಅಧಿವೇಶನಕ್ಕೆ ಚಾಲನೆ :

ಸಮ್ಮೇಳನದ ಧ್ವಜಾರೋಹಣವನ್ನು ನವೆಂಬರ್ 8ರಂದ ಸಂಜೆ 4 ಗಂಟೆಗೆ ಸುಭಾಷ್ ಕುಪ್ಪಿಕರ್ ಸಭಾಂಗಣದಲ್ಲಿ ಸಿಐಟಿಯು ರಾಜ್ಯಧ್ಯಕ್ಷರಾದ ಎಸ್. ವರಲಕ್ಷ್ಮಿ ಅವರು ನೆರವೇರಿಸುವ ಮೂಲಕ ಅಧಿಕೃತ ಚಾಲನೆ ನೀಡಿದರು. ನಂತರ ಬಿ. ಮಾಧವ, ಆರ್. ಶ್ರೀನಿವಾಸ್ ಅವರ ವೇದಿಕೆಯಲ್ಲಿ ಸಮ್ಮೇಳನದ ಪ್ರತಿನಿಧಿ ಅಧಿವೇಶನವನ್ನು ಸಿಐಟಿಯು ರಾಷ್ಟ್ರೀಯ ಅಧ್ಯಕ್ಷರಾದ ಡಾ ಹೇಮಲತಾ ಉದ್ಘಾಟಿಸಿ ಮಾತನಾಡಿ ಸರ್ಕಾರ ವೇ ಮುಂದೆ ನಿಂತು ದೌರ್ಜನ್ಯವನ್ನು ಯಥೇಚ್ಚವಾಗಿ ಹೆಚ್ಚಿಸಿದ್ದರಿಂದ ಮಾಲಿಕರಿಗೂ ಇದರಿಂದ ಶೋಷಣೆಗೆ ಪರವಾನಗಿ ಕೊಟ್ಟಂತಾಗಿದೆ. ಆಳುವವರು ಯಾರೇ ಬಂದರೂ ಎಷ್ಟೋ ಹೋರಾಟಗಳನ್ನು ಮಾಡಿದರೂ ಕಾರ್ಮಿಕರ ಸೌಲಭ್ಯಗಳನ್ನು ನಿರ್ದಯವಾಗಿ ಕಿತ್ತುಕೊಳ್ಳಲಾಗುತ್ತಿದೆ. ಏಕೆಂದರೆ ಆಳುವವರ ನೀತಿ ಬದಲಾಗದಿರುವುದೇ ಕಾರಣ. ಅಸಂಘಟಿತ ಸಂಘಟಿತರೆಲ್ಲ ಸೇರಿ ಸಂಪತ್ತು ಹೆಚ್ಚಿಸುವವರು ಆದರೆ ಈ ಸಂಪತ್ತು ಸೃಷ್ಟಿಸುವವರನ್ನೇ ಶೋಷಿಸುವುದೇ ವ್ಯವಸ್ಥೆಯ ಮಾಮೂಲಿ ಕ್ರಿಯೆ ಎಂಬಂತಾಗಿದೆ. ವಿದೇಶಗಳಲ್ಲೂ ಮಹಾಮುಷ್ಕರಗಳು ಮುಗಿಲು ಮುಟ್ಟಿವೆ. ಬಾಯಲ್ಲಿ ದೇಶ ಪ್ರೇಮ ರಾಷ್ಟೀಯತೆ ಹೇಳುವವರು ಈಗ ದೇಶದ ಅತ್ಯಮೂಲ್ಯ ರಂಗಗಳನ್ನು ಬಹು ರಾಷ್ಟೀಯ ಕಂಪನಿಗಳಿಗೆ ಮಾರಾಟ ಮಾಡುತ್ತಿವೆ. ದೇಶದಲ್ಲಿ ಹಿಂದೆಂದೂ ಕಂಡರಿಯದಷ್ಟು ನಿರುದ್ಯೋಗ ಹೆಚ್ಚಿದೆ ಇರುವ ಉದ್ಯೋಗಗಳು ನಾಶವಾಗಿವೆ ಎಂದು ಆತಂಕ ವ್ಯಕ್ತಪಡಿಸಿದರು. ಜನವರಿ ಮುಷ್ಕರ ಯಶಶ್ವಿಗೊಳಿಸುವುದು ಈ ಕ್ಷಣದ ಅಗತ್ಯವೆಂದರು.

ಕೇಂದ್ರ ಕಾರ್ಮಿಕ ಸಂಘಟನೆಗಳಿಂದ ಶುಭಕೋರಿಕೆ :

ಕೇಂದ್ರ ಕಾರ್ಮಿಕ ಸಂಘಗಳಾದ AITUC, HMS, AIUTUC, AICCTU, TUCC ಸಿಐಟಿಯು ಸಮ್ಮೇಳನದ ಮೊದಲ ದಿನ ಪ್ರತಿನಿಧಿ ಅಧಿವೇಶನದ ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದು ಸಮ್ಮೇಳನಕ್ಕೆ ಶುಭಕೋರಿದರು. ಮಾನವೀಯತೆ ಇಲ್ಲದ ಸರ್ಕಾರದ ಎದುರು ದಣಿವರಿಯದೇ ಐಕ್ಯತೆಯ ಹೋರಾಟ ಇಂದಿನ ಅಗತ್ಯವೆಂದರು. ಚರಿತ್ರೆಯಲ್ಲಿ ಕೇಳಿದ್ದ ಫ್ಯಾಸಿಸಮ್ ಈಗ ನಮ್ಮೆದುರೇ ತನ್ನ ಭಯಾನಕ ಕ್ರೂರ ಮುಖದೊಂದಿಗೆ ಬಂದು ನಿಂತಿದೆ. ದೇಶದ ಸಾರ್ವಭೌಮತೆಯನ್ನೇ ವಿದೇಶಿ ಪ್ರಬಲ ಶಕ್ತಿಗಳಿಗೆ ಒತ್ತೆ ಇಡುವ ಆದರೆ ಬಾಯಲ್ಲಿ ಮಾತ್ರ ಸ್ವದೇಶಿ ಎನ್ನುವ ಬಿಜೆಪಿ ಕೇಂದ್ರ ಸರ್ಕಾರವನ್ನು ಅದರ ಧೋರಣೆಗಳನ್ನು ಹಿಮ್ಮೆಟ್ಟಲು, ಕಾರ್ಮಿಕರ ಹಿತದೃಷ್ಟಿಯಿಂದ ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳೂ 2020 ಜನವರಿ 8 ರಂದು ಅಖಿಲ ಭಾರತ ಮುಷ್ಕರಕ್ಕೆ ಕರೆ ಕೊಟ್ಟಿವೆ. ಇದು 1991 ರ ನಂತರದಲ್ಲಿ ನಡೆಯುವ 19 ನೇ ಜಂಟಿ ಮುಷ್ಕರವೆಂದು ಇತಿಹಾಸದಲ್ಲಿ ದಾಖಲಾಗಲಿದೆ. ಜಾಗೃತ ಕಾರ್ಮಿಕರ ಒಗ್ಗಟ್ಟಿನ ಪ್ರದರ್ಶನ ಮಾಡೋಣವೆಂದರು. ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾ. ವಿಜಯ ಭಾಸ್ಕರ್, ಹೆಚ್. ಎಂ.ಎಸ್. ರಾಜ್ಯ ಪ್ರಧಾನ ಕಾರ್ಯದರ್ಶಿ ಕಾ. ನಾಗನಾಥ, ಯುಟಿಯುಸಿ ರಾಜ್ಯ ಅಧ್ಯಕ್ಷರಾದ ಕಾ. ಶಿವಶಂಕರ್, ಎಐಯುಟಿಯುಸಿ ರಾಜ್ಯ ಉಪಾಧ್ಯಕ್ಷ ಕೆ.ವಿ. ಭಟ್ ಹಾಗೂ ಎಐಸಿಸಿಟಿಯುನ ರಾಜ್ಯ ಅಧ್ಯಕ್ಷ ಕಾ.ಪುಟ್ಟೇಗೌಡ ಮಾತನಾಡಿದರು. ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್, ಎ.ಕೆ. ಪದ್ಮನಾಭನ್ ಉಪಸ್ಥಿತರಿದ್ದರು.

ಪ್ರತಿನಿಧಿ ಕಲಾಪಗಳು :

ಅಗಲಿದ ಸಂಗಾತಿಗಳು ಹಾಗೂ ಗಣ್ಯರಿಗೆ ರಾಜ್ಯ ಉಪಾಧ್ಯಕ್ಷರಾದ ಕೆ. ಶಂಕರ್ ಶ್ರದ್ಧಾಂಜಲಿ ನಿರ್ಣಯ ಸಲ್ಲಿಸುವ ಮೂಲಕ ಪ್ರತಿನಿಧಿಗಳ ಕಲಾಪಕ್ಕೆ ಚಾಲನೆ ನೀಡಲಾಯಿತು. ರಾಜ್ಯ ಅಧ್ಯಕ್ಷೆ ಎಸ್. ವರಲಕ್ಷ್ಮೀ ಹಾಗೂ ಉಪಾಧ್ಯಕ್ಷರನ್ನೊಳಗೊಂಡ ಅಧ್ಯಕ್ಷೀಯ ಮಂಡಳಿಯನ್ನು, ಕೆ. ಪ್ರಕಾಶ, ಮಾಲಿನಿ ಮೇಸ್ತಾ, ರಾಘವೇಂದ್ರ, ಬಾಲಕೃಷ್ಣ ಶೆಟ್ಟಿ ಸಂಚಾಲಕರುಗಳಾದ ಕ್ರಮವಾಗಿ ನಿರ್ಣಯ ಮಂಡಳಿ, ಪರಿಚಯಪತ್ರ ಮಂಡಳಿ, ಸಂಚಾಲಕತ್ವದ ದಾಖಲಾತಿ ಸಮಿತಿ, ಅನುವಾದ ಸಮಿತಿಗಳನ್ನು ಸಮ್ಮೇಳನ ಚುನಾಯಿಸಿತು.



ಪ್ರಧಾನ ಕಾರ್ಯದರ್ಶಿ ವರದಿ

ರಾಜ್ಯದ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಕಾರ್ಮಿಕ ಪರಿಸ್ಥಿತಿ, ನಮ್ಮ ಮಧ್ಯಪ್ರವೇಶಗಳು ಸಂಘಟಿಸಿದ ಹೋರಾಟಗಳು ಮತ್ತು ನಮ್ಮ ಸಂಘಟನಾ ಪರಿಸ್ಥಿತಿ (ಪ್ರಧಾನ ಕಾರ್ಯದರ್ಶಿ ವರದಿ ವಿವರ ಪ್ರತೇಕವಾಗಿ ಮುಂದಿನವಾರ ಪ್ರಕಟಗೊಳ್ಳಲಿದೆ.) ಕುರಿತಾಗಿ ಪ್ರಧಾನ ಕಾರ್ಯದರ್ಶಿ ವರದಿಯನ್ನು ಮೀನಾಕ್ಷಿ ಸುಂದರಂ ಸಮ್ಮೇಳನದ ಮುಂದೆ ಚರ್ಚೆಗಾಗಿ ಮಂಡಿಸಿದರು. ಅಖಿಲ ಭಾರತ ಉಪಾಧ್ಯಕ್ಷರಾದ ಎ.ಕೆ. ಪದ್ಮನಾಭನ್ ವರದಿ ಮೇಲೆ ಪ್ರತಿನಿಧಿಗಳು ನಡೆಸಬೇಕಾದ ಚರ್ಚೆ ಕುರಿತು ಮಾರ್ಗದರ್ಶನ ನೀಡಿದರು. ಬಳಿಕಾ ಜಿಲ್ಲಾವಾರು ಗುಂಪು ಚರ್ಚೆಗಳನ್ನು ಮಾರನೆ ದಿನ ಬೆಳಗ್ಗೆ ರಾಜ್ಯ ಸಂಘಗಳವಾರು ಗುಂಪು ಚರ್ಚೆಗಳು ವರದಿ ಮೇಲೆ ನಡೆದವು. ಇದಾದ ಬಳಿಕಾ ಒಟ್ಟು 66 ಜನ ಪ್ರತಿನಿಧಿಗಳು ಸುಮಾರು 418 ನಿಮಿಷಗಳ (7 ಗಂಟೆಗಳು) ಕಾಲ ಪ್ರಧಾನ ಕಾರ್ಯದರ್ಶಿ ವರದಿ ಮೇಲೆ ಚರ್ಚೆ ನಡೆಸಿದರು. ಚರ್ಚೆಯ ಬಳಿಕಾ ಪದಾಧಿಕಾರಗಳ ಪರವಾಗಿ ಪ್ರಧಾನ ಕಾರ್ಯದರ್ಶಿ ಚರ್ಚೆಗೆ ಉತ್ತರಿಸಿದರು.

ಸೌಹರ್ದ ಬೆಂಬಲ :

ಸಿಐಟಿಯು ರಾಜ್ಯ ಸಮ್ಮೇಳನಕ್ಕೆ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿ, ಕೃಷಿಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಜಿ.ಎನ್. ನಾಗರಾಜ್, ಎಸ್. ಎಫ್.ಐ. ರಾಜ್ಯ ಅಧ್ಯಕ್ಷರಾದ ಅಂಬರೀಶ್, ವಿಮಾ ನೌಕರರ ಸಂಘದ ಮುಖಂಡರಾದ ನಾಗೇಶ್, ಅಖಿಲ ಕರ್ನಾಟಕ ರಾಜ್ಯ ಸರಕಾರಿ ನೌಕರರ ಒಕ್ಕೂಟದ ರಾಜ್ಯ ಕಾರ್ಯದರ್ಶಿ ರಂಗನಾಥ ಹವಲ್ದಾರ್ ಶುಭ ಕೋರಿ ಮಾತನಾಡಿದರು. ಇದಲ್ಲದೆ ಸಮ್ಮೇಳನದ ಬಹಿರಂಗ ಅಧಿವೇಶನಲ್ಲಿ ಬಿಎಸ್‌ಎನ್‌ಎಲ್ ಎಂಪ್ಲಾಯೀಸ್ ಯೂನಿಯನ್ ವಲಯ ಕಾರ್ಯದರ್ಶಿ ಸಿ.ಕೆ. ಗುಂಡಣ್ಣ, ವಲಯ ಅಧ್ಯಕ್ಷರಾದ ಎಂ.ಸಿ. ಬಾಲಕೃಷ್ಣ, ಸಮುದಾಯ ರಾಜ್ಯ ಉಪಾಧ್ಯಕ್ಷ ಟಿ ಸುರೇಂದ್ರರಾವ್, ದಲಿತ ಹಕ್ಕುಗಳ ಸಮಿತಿ ಸಂಚಾಲಕ ಗೋಪಾಲಕೃಷ್ಣ, ಕೇಂದ್ರ ಸರಕಾರಿ ನೌಕರರ ಸಂಘದ ಮುಖಂಡರಾದ ಜೂಲಿಯಾನ್ ವಿನ್ಸಂಟ್ ಹಾಗೂ ಸೀತಾಲಕ್ಮೀ, ವಿಜ್ಞಾನ ಚಳವಳಿಯ ಡಾ ಅನಿಲ್, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಟಿ. ರೇವಣ್ಣ, ಹಿರಿಯ ಸಂಗಾತಿಗಳಾದ ದಾವಣಗೆರೆ ಕೆ.ಎಲ್ ಭಟ್, ನಾಗರಾಜರಾವ್, ಪರಿವರ್ತನ ನಾಟಕ ತಮಡದ ಪ್ರಸಾದ್, ಸೇರಿದಂತೆ ಹಲವಾರು ನಾಯಕರು ಪಲ್ಗೊಂಡು ಕಾರ್ಮಿಕ ಚಳವಳಿಗೆ ತಮ್ಮ ಸೌಹಾರ್ದತೆ ಸಾರಿದರು. ●

ಸಮ್ಮೇಳನ ಅಂಗೀಕರಿಸಿದ ಪ್ರಮುಖ ನಿರ್ಣಯಗಳು:

* ಅಂಗನವಾಡಿ ನೌಕರರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ
* ಹೆಚ್ಚುತ್ತಿರುವ ಕೋಮುವಾದದ ವಿರುದ್ಧ ಮತ್ತು ಎಲ್ಲ ಶ್ರಮಜೀವಿಗಳ ಐಕ್ಯತೆಗಾಗಿ
* ಬೀಡಿ ಕಾರ್ಮಿಕರಿಗೆ ಪರ್ಯಾಯ ಉದ್ಯೋಗ – ಕನಿಷ್ಟ ಕೂಲಿ –ತುಟ್ಟಿಭತ್ಯೆ, ಕಾರ್ಮಿಕ ಕಾನೂನುಗಳ ಜಾರಿಗೆ ಒತ್ತಾಯಿಸಿ
* ಆಶಾ ಕಾರ್ಯಕರ್ತೆಯರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ
* ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರಿಗೆ ಬಾಕಿ ವೇತನ ಪಾವತಿಸಲು ಮತ್ತು ಕೆಲಸದ ಭದ್ರತೆ ಒದಗಿಸಲು ಆಗ್ರಹಿಸಿ
* ಗುತ್ತಿಗೆ ಮತ್ತು ಇತರೆ ಖಾಯಂಯೇತರ ಕಾರ್ಮಿಕರ ಖಾಯಂಗೆ ಶಾಸನಕ್ಕಾಗಿ ಆಗ್ರಹಿಸಿ
* ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಮಿಕ ನ್ಯಾಯಾಲಯಗಳ ಸ್ಥಾಪನೆಗೆ ಒತ್ತಾಯಿಸಿ
* ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕ ಮಂಡಳಿ ಹಾಗೂ ಹಾಗೂ ಕಟ್ಟಡ ನಿರ್ಮಾಣ ವಲಯದ ಕಾರ್ಮಿಕರ ಬದುಕನ್ನು ರಕ್ಷಿಸಲು ಹಾಗೂ ಕಲ್ಯಾಣ ಮಂಡಳಿ ಸೌಲಭ್ಯಗಳ ಜಾರಿಗೆ ಕ್ರಮ ವಹಿಸಲು ಒತ್ತಾಯಿಸಿ
* ಮನೆಗೆಲಸಗಾರ ಕಾರ್ಮಿಕರಿಗೆ ಕನಿಷ್ಟಕೂಲಿಗೆ ಆಗ್ರಹಿಸಿ
* ಆರ್ಥಿಕ ಹಿಂಜರಿಕೆ : ಕಾರ್ಮಿಕರ, ದುಡಿಯುವ ಜನರ ಕೆಲಸ, ಆದಾಯ ಮತ್ತು ಹಕ್ಕುಗಳನ್ನು ರಕ್ಷಿಸಲು ಒತ್ತಾಯಿಸಿ
* ಗುತ್ತಿಗೆ ಮತ್ತು ಇತರೆ ಖಾಯಂಯೇತರ ಕಾರ್ಮಿಕರ ಖಾಯಂಗೆ ಶಾಸನಕ್ಕಾಗಿ
* ಇಎಸ್‌ಐ ವಂತಿಕೆ ಕಡಿತ ಮತ್ತು ಅದರ ನಿರ್ವಹಣೆ ಖಾಸಗಿಯವರಿಗೆ ವಹಿಸುವುದರ ವಿರುದ್ಧ
* ರಾಜ್ಯದ ನೆರೆ ಪೀಡಿತರಿಗೆ ಪರಿಹಾರ, ನಿರಾಶ್ರಿತರಿಗೆ ಪುನರ್ವಸತಿ ಒತ್ತಾಯಿಸಿ ಹಾಗೂ ಕೇಂದ್ರ ಸರ್ಕಾರದ ತಾರತಮ್ಯ ನೀತಿಯನ್ನು ವಿರೋಧಿಸಿ
* ಐಟಿ/ಐಟಿಇಎಸ್ ಉದ್ದಿಮೆಗಳಿಗೆ ವಿಸ್ತರಿಸಿರುವ ವಿನಾಯಿತಿಯನ್ನು ವಿರೋಧಿಸಿ
* ಬಿಸಿಯೂಟ ಯೋಜನೆಯ ಖಾಯಂಗಾಗಿ ಒತ್ತಾಯಿಸಿ
* ಸಮಾನ ಕನಿಷ್ಟ ವೇತನಕ್ಕಾಗಿ
* ಗ್ರಾಮ ಪಂಚಾಯತ್ ನೌಕರರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ
* ಅಸಂಘಟಿತ ಕಾರ್ಮಿಕರಿಗೆ ಭವಿಷ್ಯನಿಧಿ ಯೋಜನೆ ಜಾರಿಮಾಡಲು ಹಾಗೂ ಪ್ರಸ್ತುತ ವರ್ಷದ ಬಜೆಟ್‌ನಲ್ಲಿ ಅಗತ್ಯ ಹಣಕಾಸು ನೀಡಲು ಆಗ್ರಹಿಸಿ
* ಸಾರ್ವಜನಿಕ ಉದ್ದಿಮೆಗಳ ಉಳಿವಿಗಾಗಿ ಆಗ್ರಹಿಸಿ
* ಹಂಚು ಉದ್ಯಮ ಮತ್ತು ಕಾರ್ಮಿಕರನ್ನು ರಕ್ಷಿಸಲು ಒತ್ತಾಯಿಸಿ
* ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ತಡೆಗಾಗಿ ಒತ್ತಾಯಿಸಿ

ಶತಮಾನೋತ್ಸವ ಲೇಖನಮಾಲೆ-3

ತಾಷ್ಕೆಂಟಿನಲ್ಲಿ ಅಕ್ಟೋಬರ್ 17, 1920ರಂದು ಭಾರತ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯೊಂದಿಗೆ ಭಾರತದ ಕಮ್ಯುನಿಸ್ಟ್ ಚಳುವಳಿಯ ಭವ್ಯ ಇತಿಹಾಸವು ಪ್ರಾರಂಭವಾಯಿತು. ಪಕ್ಷದ ಕಳೆದ 100 ವರ್ಷಗಳ ಇತಿಹಾಸದಲ್ಲಿ ಜರುಗಿದ ಯುಗಪ್ರವರ್ತಕ ಘಟನೆಗಳ, ಹೋರಾಟಗಳ, ತ್ಯಾಗಬಲಿದಾನಗಳ ಮತ್ತು ಪ್ರಮುಖ ನೀತಿನಿರೂಪಕ ನಿರ್ಧಾರಗಳ ಗಾಥೆಯನ್ನು ಗುರುತಿಸಲೆಂದು ಸಂಚಿಕೆ 42ರಲ್ಲಿ ಆರಂಭವಾಗಿರುವ ಈ ಲೇಖನಮಾಲೆಯ ಈ ಮೂರನೇ ಲೇಖನ ಭಾರತದ ಕಮ್ಯುನಿಸ್ಟ್ ಚಳುವಳಿಯ ಮೊದಲ ದಿನಗಳಲ್ಲಿನ ಪ್ರಮುಖ ವ್ಯಕ್ತಿ ಎಂ.ಎನ್.ರಾಯ್ ಕುರಿತಾದ್ದು. ಅಕ್ಟೋಬರ್ 1920ರಲ್ಲಿ ತಾಷ್ಕೆಂಟಿನಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷವನ್ನು ಆರಂಭಿಸಿದ ಮೊದಲಿಗರು ರಾಯ್. 1921 ನಂತರ ಭಾರತದಲ್ಲಿ ಹೊರಹೊಮ್ಮುತ್ತಿದ್ದ ಆಗಷ್ಟೇ ಗರಿಗೆದರಿದ್ದ ಕಮ್ಯುನಿಸ್ಟ್ ಗುಂಪುಗಳ ನಡುವೆ ಮಾರ್ಕ್ಸ್‌ವಾದಿ ಚಿಂತನೆಗಳನ್ನು ಮತ್ತು ಕಮ್ಯುನಿಸ್ಟ್ ಪಕ್ಷದ ಪಾತ್ರವನ್ನು ಹರಡುವಲ್ಲಿ ಅವರು ಪ್ರಧಾನ ಪಾತ್ರ ವಹಿಸಿದ್ದರು. ಅವರು ಕೊನೆಗೆ ಮಾರ್ಕ್ಸ್‌ವಾದವನ್ನು ತ್ಯಜಿಸಿದ್ದರೂ 1921ರಿಂದ 1926ರ ವರೆಗೆ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಬೆಳೆಸುವಲ್ಲಿನ ಅವರ ಪಥಪ್ರದರ್ಶಕ ಕೊಡುಗೆಗಳನ್ನು ಮರೆಯಲು ಸಾಧ್ಯವಿಲ್ಲ.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ಎಂ.ಎನ್.ರಾಯ್ ಎಂದು ಚಿರಪರಿಚಿತರಾಗಿದ್ದ ಮನಬೇಂದ್ರ ನಾಥ್ ರಾಯ್, ಭಾರತದ ಕಮ್ಯುನಿಸ್ಟ್ ಚಳುವಳಿಯ ಮೊದಲ ದಿನಗಳಲ್ಲಿನ ಪ್ರಮುಖ ವ್ಯಕ್ತಿ. ಅಕ್ಟೋಬರ್ 1920ರಲ್ಲಿ ತಾಷ್ಕೆಂಟಿನಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷವನ್ನು ಆರಂಭಿಸಿದ ಮೊದಲಿಗರು ರಾಯ್. 1921 ನಂತರ ಭಾರತದಲ್ಲಿ ಹೊರಹೊಮ್ಮುತ್ತಿದ್ದ ಆಗಷ್ಟೇ ಗರಿಗೆದರಿದ್ದ ಕಮ್ಯುನಿಸ್ಟ್ ಗುಂಪುಗಳ ನಡುವೆ ಮಾರ್ಕ್ಸ್‌ವಾದಿ ಚಿಂತನೆಗಳನ್ನು ಮತ್ತು ಕಮ್ಯುನಿಸ್ಟ್ ಪಕ್ಷದ ಪಾತ್ರವನ್ನು ಹರಡುವಲ್ಲಿ ಅವರು ಪ್ರಧಾನ ಪಾತ್ರ ವಹಿಸಿದ್ದರು.

ಎಂ.ಎನ್.ರಾಯ್ ಅವರ ಕ್ರಾಂತಿಕಾರಿ ಬದುಕು ವರ್ಣಮಯವಾಗಿತ್ತು ಮತ್ತು ಕಮ್ಯುನಿಸ್ಟ್ ಅಂತರಾಷ್ಟ್ರೀಯದ ಒಬ್ಬ ಪ್ರಮುಖ ವ್ಯಕ್ತಿಯಾಗುವ ಮುಂಚೆ ಹಲವಾರು ಸಾಹಸಮಯ ಕ್ಷಣಗಳನ್ನು ಹಾದುಬಂದಿತ್ತು..

ರಾಯ್ ಅವರು ಬಂಗಾಳದ 24 ಪರಗಣ ಜಿಲ್ಲೆಯ ಅರ್ಬೆಲಿಯ ಎಂಬ ಹಳ್ಳಿಯಲ್ಲಿ ಹುಟ್ಟಿದರು. ಹದಿಹರೆಯದಲ್ಲೇ ರಾಯ್ ಅವರು ಒಂದು ಕ್ರಾಂತಿಕಾರಿ ಗುಂಪಿನ ಸದಸ್ಯರಾಗಿ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಹೌರಾ ಪಿತೂರಿ ಪ್ರಕರಣದಲ್ಲಿ ಅವರು ಮೊದಲ ಬಾರಿಗೆ ಬಂಧನಕ್ಕೊಳಗಾಗಿದ್ದರು ಮತ್ತು 1911ರಲ್ಲಿ ಬಿಡುಗಡೆಯಾದರು. ಆ ನಂತರ ಅವರು ಜತೀಂದ್ರನಾಥ್ ಮುಖರ್ಜಿ ಅವರ ಯುಗಾಂತರ್ ಗುಂಪಿನ ಸದಸ್ಯರಾದರು. ಬ್ರಿಟಿಷರ ವಿರುದ್ಧ ಹೋರಾಡಲು ಜರ್ಮನರ ಬೆಂಬಲ ಪಡೆಯಲು ಜತಿನ್ ಗುಂಪು ನಿರ್ಧರಿಸಿತು. 1915ರ ಏಪ್ರಿಲ್‌ನಲ್ಲಿ ರಾಯ್ ಅವರನ್ನು ಅಲ್ಲಿಯ ಜರ್ಮನಿ ರಾಯಭಾರಿಯನ್ನು ಸಂಪರ್ಕಿಸಲು ಆಗ ನೆದರ್ಲೆಂಡ್ಸ್ ಇಂಡೀಸ್ ಎಂದು ಕರೆಯಲಾಗುತ್ತಿದ್ದ ಇಂಡೋನೇಶಿಯಾಕ್ಕೆ ಕಳಿಸಲಾಯಿತು. ಕಲ್ಕತ್ತಾಕ್ಕೆ ಶಸ್ತ್ರಾಸ್ತ್ರಗಳನ್ನು ಕಳಿಸುವ ಅವರ ಯತ್ನ ಕೈಗೂಡಲಿಲ್ಲ. ಈ ಮಧ್ಯೆ ಬ್ರಿಟಿಷ್ ಅಧಿಕಾರಿಗಳು ಈ ಪಿತೂರಿಯ ಜಾಡು ಹಿಡಿದರು ಮತ್ತು ಜತೀಂದ್ರನಾಥ್ ಅವರನ್ನು ಒಂದು ಸಶಸ್ತ್ರ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿದರು.

ಈ ಮಧ್ಯೆ, ರಾಯ್ ಜಾವಾಕ್ಕೆ ಹಿಂತಿರುಗಬೇಕಾಯಿತು ಮತ್ತು ಈ ಎಲ್ಲಾ ಘಟನೆಗಳ ನಂತರ ಭಾರತಕ್ಕೆ ಹಿಂತಿರುಗದಿರಲು ನಿರ್ಧರಿಸಿದರು. ಅವರು ಶಾಂಘಾಯ್ ಮೂಲಕ ಜಪಾನಿಗೆ ಹೋದರು ಮತ್ತು ಅಲ್ಲಿಂದ ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೋಗೆ ತೆರಳಿದರು. ಅವರು ಗಧರ್ ಪಕ್ಷದೊಂದಿಗೆ ಸಂಪರ್ಕ ಬೆಳೆಸಿದರು. ಅಲ್ಲಿಂದ ಅವರು ನ್ಯೂಯಾರ್ಕ್‌ಗೆ ಹೋಗಿ ಅಲ್ಲಿನ ಭಾರತೀಯ ಕ್ರಾಂತಿಕಾರಿಗಳನ್ನು ಸಂಪರ್ಕಿಸಿದರು. ನ್ಯೂಯಾರ್ಕ್‌ನ ಸಾರ್ವಜನಿಕ ಗ್ರಂಥಾಲಯದಲ್ಲಿ ರಾಯ್‌ಗೆ ಮೊದಲ ಬಾರಿಗೆ ಕಾರ್ಲ್ ಮಾರ್ಕ್ಸ್ ಅವರ ಕೃತಿಗಳ ಪರಿಚಯವಾಯಿತು. ಅವರು ಸ್ಟಾನ್‌ಫೋರ್ಡ್‌ನಲ್ಲಿ ಭೇಟಿಯಾಗಿದ್ದ ತೀವ್ರಗಾಮಿ ವಿಚಾರಧಾರೆಯ ಅಮೆರಿಕದ ಪದವೀಧರ ವಿದ್ಯಾರ್ಥಿನಿ, ಎವಿಲಿನ್ ಟ್ರೆಂಟ್ ಅವರ ಪ್ರಭಾವಕ್ಕೆ ಒಳಗಾದರು. ನಂತರ ಅವರನ್ನು ಮದುವೆಯಾದರು.

ಕಾನೂನುಬಾಹಿರ ಪ್ರವೇಶದ ಆರೋಪ ಹೊತ್ತು ಬಂಧನದ ವಾರಂಟಿನಿಂದಾಗಿ ರಾಯ್ ಅಮೆರಿಕಾವನ್ನು ಬಿಡಬೇಕಾಯಿತು. ತನ್ನ ಮಡದಿಯೊಂದಿಗೆ ಮೆಕ್ಸಿಕೋಗೆ ಅವರು ತೆರಳಿದರು. ಈ ಹಂತದವರೆಗೆ, ಹೇಗೆ ಹಣ ಎತ್ತಿ ಭಾರತದಲ್ಲಿ ಸಶಸ್ತ್ರ ಬಂಡಾಯವನ್ನು ಸಂಘಟಿಸುವುದು ಎನ್ನುವುದರ ಬಗ್ಗೆಯೇ ರಾಯ್ ತಮ್ಮ ಗಮನ ಕೇಂದ್ರೀಕರಿಸಿದ್ದರು. ಮೆಕ್ಸಿಕೋದಲ್ಲಿ ಆ ಸಮಯದಲ್ಲಿ ಚಿಕ್ಕ ಗುಂಪಾಗಿದ್ದ ಮೆಕ್ಸಿಕನ್ ಸೋಶಿಯಲಿಸ್ಟ್ ಪಕ್ಷದ ಜತೆ ಒಡನಾಡಿದರು. ಅಲ್ಲಿ ಮಿಖೈಲ್ ಬೋರೋಡಿನ್‌ನ ಸಂಪರ್ಕಕ್ಕೆ ಬಂದರು. ಬೋರೋಡಿನ್ ಆ ನಂತರ ಕಮ್ಯುನಿಸ್ಟ್ ಅಂತರಾಷ್ಟ್ರೀಯದ ಪ್ರಮುಖ ಪದಾಧಿಕಾರಿಯಾದರು. ರಾಯ್ ಬಹಳ ಕಡಿಮೆ ಔಪಚಾರಿಕ ಶಿಕ್ಷಣ ಹೊಂದಿದ್ದರು. ಅವರು ಸ್ವಯಂ ಕಲಿಕೆಯಿಂದ ಅಪಾರ ಬುದ್ಧಿಶಕ್ತಿಯನ್ನು ಪಡೆದಿದ್ದರು. ಕೆಲವೇ ತಿಂಗಳುಗಳಲ್ಲಿ ಅವರು ಕರಪತ್ರ ಬರೆಯುವ ಮತ್ತು ಸಾರ್ವಜನಿಕ ಸಭೆಗಳಲ್ಲಿ ಮಾತನಾಡುವಷ್ಟು ಸ್ಪ್ಯಾನಿಷ್ ಭಾಷೆಯ ಮೇಲೆ ಹಿಡಿತ ಸಾಧಿಸಿದರು. ಮೆಕ್ಸಿಕನ್ ಸೋಶಿಯಲಿಸ್ಟ್ ಪಕ್ಷದ ಮುಖಂಡರಾದರು ಮತ್ತು ಬಹಳ ಬೇಗ 1919ರಲ್ಲಿ ಆ ಪಕ್ಷವನ್ನು ಕಮ್ಯುನಿಸ್ಟ್ ಪಾರ್ಟಿ ಆಫ್ ಮೆಕ್ಸಿಕೋ ಆಗಿ ಪರಿವರ್ತಿಸಿದರು. ಜುಲೈ-ಆಗಸ್ಟ್ 1920ರಲ್ಲಿ ಮಾಸ್ಕೋದಲ್ಲಿ ನಡೆದ ಕಮ್ಯುನಿಸ್ಟ್ ಅಂತರಾಷ್ಟ್ರೀಯದಲ್ಲಿ ಮೆಕ್ಸಿಕನ್ ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿಯಾಗಿ ಭಾಗವಹಿಸಿದರು.



ಕಮ್ಯುನಿಸಂಗೆ ಹೊಸಬರಾಗಿದ್ದ ಎಂ.ಎನ್.ರಾಯ್ ಎರಡನೆಯ ಮಹಾಧಿವೇಶನದಲ್ಲಿ 'ರಾಷ್ಟ್ರೀಯ ಹಾಗೂ ವಸಾಹತು ಪ್ರಶ್ನೆ'ಯ ಮೇಲೆ ಪೂರಕ ಪ್ರೌಢ ಪ್ರಬಂಧವನ್ನು ಮಂಡಿಸುವ ಮೂಲಕ ಪ್ರಖ್ಯಾತರಾದರು. 'ರಾಷ್ಟ್ರೀಯ ಹಾಗೂ ವಸಾಹತು ಪ್ರಶ್ನೆ'ಯ ಮೇಲೆ ಲೆನಿನ್ ಒಂದು ಕರಡು ಪ್ರೌಢ ಪ್ರಬಂಧವನ್ನು ಸಿದ್ಧಪಡಿಸಿದ್ದರು ಮತ್ತು ಅದನ್ನು ಪ್ರತಿನಿಧಿಗಳಿಗೆ ವಿತರಿಸಲಾಗಿತ್ತು. ಲೆನಿನ್ ಹಾಗೂ ರಾಯ್ ಇಬ್ಬರ ಪ್ರಬಂಧವನ್ನು ರಾಷ್ಟ್ರೀಯ ಹಾಗೂ ವಸಾಹತು ಆಯೋಗ ವಿಚಾರ ವಿನಿಮಯ ನಡೆಸಿತು. ಬ್ರಿಟಿಷ್ ಸಾಮ್ರಾಜ್ಯವಾದದ ಎದುರು ಭಾರತದ ಬಂಡವಾಳಶಾಹಿಗಳು ಪರಿಣಾಮಕಾರಿಯಾದ ಹೋರಾಟ ಮಾಡಲು ಅಸಮರ್ಥರಾಗಿದ್ದಾರೆ ಮತ್ತು ಶಾಮೀಲಾಗುವ ಗುಣ ಹೊಂದಿದ್ದಾರೆ ಎಂದು ರಾಯ್ ಅವರು ತಮ್ಮ ಪೂರಕ ಪ್ರಬಂಧದಲ್ಲಿ ವಾದಿಸಿದ್ದರು. ಕಮ್ಯುನಿಸ್ಟರು ರಾಷ್ಟ್ರೀಯ ಚಳುವಳಿಗೆ ಬೆಂಬಲ ನೀಡಬೇಕೆಂಬ ಸಂಯುಕ್ತ ರಂಗದ ನೀತಿಗಳ ಕರೆಯು ಭಾರತಕ್ಕೆ ಸರಿಹೊಂದುವುದಿಲ್ಲ ಎಂದು ರಾಯ್ ವಾದಿಸಿದರು. ಮಹಾಧಿವೇಶನವು ಇದನ್ನು ತಿರಸ್ಕರಿಸಿತು ಮತ್ತು ರಾಯ್ ಅವರ ಪೂರಕ ಪ್ರಬಂಧಕ್ಕೆ ಹಲವಾರು ತಿದ್ದುಪಡಿಗಳನ್ನು ಸೂಚಿಸಿತು. ಕೆಲವು ತಿದ್ದುಪಡಿಗಳೊಂದಿಗೆ ಲೆನಿನ್ ಅವರ ಪ್ರಬಂಧವನ್ನು ಅಂಗೀಕರಿಸಲಾಯಿತು.

ಕಾಮಿಂಟರ್ನ್(ಕಮ್ಯುನಿಸ್ಟ್ ಅಂತರಾಷ್ಟ್ರೀಯ) ಮಹಾಧಿವೇಶನವು ಎಂ.ಎನ್.ರಾಯ್ ಅವರನ್ನು ಕಮ್ಯುನಿಸ್ಟ್ ಅಂತರಾಷ್ಟ್ರೀಯದ ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ಆಯ್ಕೆ ಮಾಡಿತು. ತದನಂತರ, ಅವರನ್ನು ಸೆಂಟ್ರಲ್ ಏಶಿಯಾಟಿಕ್ ಬ್ಯೂರೋದ ನಾಯಕರನ್ನಾಗಿ ಮಾಡಲಾಯಿತು ಮತ್ತು ಆ ಹೊಣೆ ಹೊತ್ತೇ ಅವರು ತಾಷ್ಕೆಂಟಿಗೆ ಹೋಗಿದ್ದರು. ಅಲ್ಲಿ ಅವರು ಭಾರತದಿಂದ ಬಂದಿದ್ದ ದೊಡ್ಡ ಸಂಖ್ಯೆಯ ಮುಹಾಜಿರುಗಳ ಸಂಪರ್ಕಕ್ಕೆ ಬಂದರು. ಅವರ ನಡುವೆ ಕೆಲಸ ಮಾಡಿದರು ಮತ್ತು ಬ್ರಿಟಿಷರ ಆಳ್ವಿಕೆಯ ವಿರುದ್ಧ ಹೋರಾಡುವ ಗುರಿ ತಲುಪಲು ಕಮ್ಯುನಿಸ್ಟ್ ಪಕ್ಷವನ್ನು ಸೇರಬೇಕೆಂದು ಅವರಲ್ಲಿ ವಿಶ್ವಾಸ ಉಂಟು ಮಾಡಿದರು. ಈ ಪ್ರಕ್ರಿಯೆಯ ಮೂಲಕ ರಾಯ್ ಅವರು ಅಕ್ಟೋಬರ್ 17, 1920ರಂದು ಮೊದಲ ಭಾರತೀಯ ಕಮ್ಯುನಿಸ್ಟ್ ಗುಂಪನ್ನು ರಚಿಸಲು ಮುಂದಾದರು.

ರಾಯ್ ಮಾಸ್ಕೋಗೆ ಹಿಂತಿರುಗಿದರು ಮತ್ತು ಕಮ್ಯುನಿಸ್ಟ್ ಅಂತರಾಷ್ಟ್ರೀಯದೊಂದಿಗೆ ಮಾತುಕತೆ ಮಾಡಿದ ನಂತರ, ಭಾರತದಲ್ಲಿನ ಎಲ್ಲಾ ಕಮ್ಯುನಿಸ್ಟ್ ಚಟುವಟಿಕೆಗಳು ರಾಯ್ ಅವರ ನೇತೃತ್ವದಲ್ಲಿನ ಗುಂಪಿನೊಡಗೂಡಿ ನಡೆಯಬೇಕೆಂದು ತೀರ್ಮಾನಿಸಲಾಯಿತು. ಕಮ್ಯುನಿಸ್ಟ್ ಅಂತರಾಷ್ಟ್ರೀಯದಲ್ಲಿನ ಅವರ ಇರುವಿಕೆ ಗಮನಾರ್ಹವಾದದ್ದು. 1926ರಲ್ಲಿ ಅವರು ಅಧ್ಯಕ್ಷೀಯ ಮಂಡಳಿಗೆ ಆಯ್ಕೆಯಾದರು ಮತ್ತು ರಾಜಕೀಯ ಕಾರ್ಯಕಾರಿ, ಇಸಿಸಿಐ ಮತ್ತು ಜಾಗತಿಕ ಮಹಾಧಿವೇಶನದಲ್ಲಿ ಪ್ರಮುಖ ಸ್ಥಾನ ಅಲಂಕರಿಸಿದ್ದರು.

1921 ನಂತರ, ಭಾರತದಲ್ಲಿ ಆಗ ತಾನೇ ಗರಿಗೆದರುತ್ತಿದ್ದ ಕಮ್ಯುನಿಸ್ಟರು ಮತ್ತು ಮುಖಂಡರನ್ನು ಉದ್ದೇಶಿಸಿ ರಾಯ್ ಅವರು ನಿರಂತರ ಪತ್ರಗಳು ಮತ್ತು ಪ್ರಕಟಣೆಗಳನ್ನು ಬರೆಯುತ್ತಿದ್ದರು. ಮೇ 1922ರಲ್ಲಿ, 'ವ್ಯಾನ್‌ಗಾರ್ಡ್ ಆಫ್ ಇಂಡಿಯನ್ ಇಂಡಿಪೆಂಡೆನ್ಸ್' ಪತ್ರಿಕೆ ಶುರುಮಾಡಿದರು ಮತ್ತು ಅವು 'ಅಡ್ವಾನ್ಸ್ ಗಾರ್ಡ್', 'ಮಾಸಸ್ ಆಫ್ ಇಂಡಿಯ' ಮುಂತಾದ ಬೇರೆ ಬೇರೆ ಹೆಸರುಗಳಲ್ಲಿ 1925ರವರೆಗೆ ಮುಂದುವರಿದವು. ಭಾರತೀಯರ ಸಮಸ್ಯೆಗಳನ್ನು ಕುರಿತು ಮಾತನಾಡುವ ಭಾರತವನ್ನು ತಲುಪಿದ ಮೊಟ್ಟ ಮೊದಲ ಕಮ್ಯುನಿಸ್ಟ್ ಪತ್ರಿಕೆ ಅದಾಗಿತ್ತು. ಬ್ರಿಟಿಷರು ಜಾಗೃತರಾದರು. ಅವರು ಪತ್ರಿಕೆಯನ್ನು ನಿಷೇಧಿಸಿದರು ಮತ್ತು ಭಾರತವನ್ನು ತಲುಪುತ್ತಿದ್ದ ಬಹುಪಾಲು ಪತ್ರಿಕೆಗಳನ್ನು ಮುಟ್ಟುಗೋಲು ಹಾಕಿಕೊಂಡರು. ಈ ಸಮಯದಲ್ಲೇ ಅವರು ಅವರ ಮೊದಲ ಪುಸ್ತಕ 'ಇಂಡಿಯಾ ಇನ್ ಟ್ರಾನ್ಸಿಷನ್'('ಸಂಕ್ರಮಣದಲ್ಲಿ ಭಾರತ') ಬರೆದರು. ಬ್ರಿಟಿಷರ ಭಾರತದಲ್ಲಿನ ಆರ್ಥಿಕತೆ, ರಾಜ್ಯವ್ಯವಸ್ಥೆ ಮತ್ತು ಸೈದ್ಧಾಂತಿಕತೆಯ ಮಾರ್ಕ್ಸ್‌ವಾದಿ ವಿಮರ್ಶೆಯನ್ನು ಈ ಪುಸ್ತಕದಲ್ಲಿ ಮಾಡಿದರು. ಭಾರತದಲ್ಲಿ ಕಮ್ಯುನಿಸಂನತ್ತ ನೋಡುತ್ತಿದ್ದ ಹಲವರ ಮೇಲೆ ಈ ಪುಸ್ತಕ ದೊಡ್ಡ ಪ್ರಭಾವ ಬೀರಿತು. ಕಾಮಿಂಟರ್ನ್‌ನ ಪತ್ರಿಕೆ 'ಇಂಟರ್‌ನ್ಯಾಷನಲ್ ಪ್ರೆಸ್ ಕರೆಸ್ಪಾಂಡೆನ್ಸ್' ('ಇಂಪ್ರೆಕೊರ್')ನಲ್ಲಿ ಭಾರತದ ಬಗ್ಗೆ ನಿರಂತರವಾಗಿ ಲೇಖನಗಳನ್ನು ರಾಯ್ ಬರೆದರು.

ಪ್ರಣಾಳಿಕೆಗಳನ್ನು ಮತ್ತು ಹೇಳಿಕೆಗಳನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನಗಳಿಗೂ ರಾಯ್ ಕಳಿಸಿದರು. ಮೊದಲನೆಯದನ್ನು 1921ರ ಅಹಮದಾಬಾದ್ ಅಧಿವೇಶನಕ್ಕೆ ಮತ್ತು ನಂತರದಲ್ಲಿ 1922ರ ಗಯಾ ಅಧಿವೇಶನಕ್ಕೆ ಹಾಗೂ 1923 ಮತ್ತು 1924ರ ಅಧಿವೇಶನಗಳಿಗೂ ಕಳಿಸಿದರು.

ಮಧ್ಯ ಏಶಿಯಾದಿಂದ ಉತ್ತರ ಭಾರತವಲ್ಲದೇ ಇತರ ಪ್ರದೇಶಗಳನ್ನು ತಲುಪುವುದು ಕಷ್ಟವಾಗಿತಾದ್ದರಿಂದ ಎಂ.ಎನ್.ರಾಯ್ ಏಪ್ರಿಲ್ 1922ರಲ್ಲಿ ಬರ್ಲಿನ್‌ಗೆ ಸ್ಥಳಾಂತರಗೊಂಡರು. ಬೆಳೆಯುತ್ತಿದ್ದ ಕಮ್ಯುನಿಸ್ಟ್ ಗುಂಪುಗಳನ್ನು ಸಂಪರ್ಕಿಸಲು ನಳಿನಿ ದಾಸ್‌ಗುಪ್ತಾ ಎಂಬ ತನ್ನ ಗುಪ್ತದೂತರೊಬ್ಬರನ್ನು 1921 ಮತ್ತು 1923ರಲ್ಲಿ ಕಳಿಸಿಕೊಟ್ಟರು.

ಭಾರತದಲ್ಲಿ ಕಮ್ಯುನಿಸ್ಟ್ ಚಟುವಟಿಕೆಗಳು ಹೆಚ್ಚಾಗುತ್ತಾ ಬಂದಂತೆ, ಭಾರತ ಕಮ್ಯುನಿಸ್ಟ್ ಪಕ್ಷದ ವಿದೇಶಾಂಗ ಬ್ಯೂರೋ ಒಂದನ್ನು ಕಾಮಿಂಟರ್ನ್ ಸ್ಥಾಪಿಸಿ ಭಾರತದ ವ್ಯವಹಾರಗಳನ್ನು ನೋಡಿಕೊಳ್ಳಲು ಎಂ.ಎನ್.ರಾಯ್, ಸಿಪಾಸ್ಸಿ ಮತ್ತು ಕ್ಲೆಮೆನ್ಸ್ ದತ್‌ರನ್ನು ಮುಖ್ಯಸ್ಥರನ್ನಾಗಿ ನೇಮಿಸಿತು. ಹೊಸದಾಗಿ ಉದಯಿಸಿದ ಕಮ್ಯುನಿಸ್ಟ್ ಗುಂಪುಗಳ ಮೇಲೆ ಬ್ರಿಟಿಷ್ ಸರ್ಕಾರದ ದಮನಕಾರಿ ನೀತಿಗಳು ಹಾಗೂ ಕಮ್ಯುನಿಸ್ಟ್ ಕಾರ್ಯಕರ್ತರ ಮೇಲೆ ಪಿತೂರಿ ಮೊಕದ್ದಮೆಗಳು, ವಿಚಾರಣೆ ಮತ್ತು ಬಂಧನಗಳನ್ನು ನೋಡಿದ ನಂತರ ಕಾಂಗ್ರೆಸ್ಸಿನ ರಾಷ್ಟ್ರೀಯ ಚಳುವಳಿಯ ಜತೆ ಸಹಕರಿಸಲೂ ಸಾಧ್ಯವಾಗುವಂತೆ ವರ್ಕರ್ಸ್ ಅಂಡ್ ಪೆಸಂಟ್ಸ್ ಪಾರ್ಟಿ(ಕಾರ್ಮಿಕರ ಮತ್ತು ರೈತರ ಪಕ್ಷ)ಗಳನ್ನು ರಚಿಸಲು ರಾಯ್ ಬಯಸಿದರು. ಅಂತಹ ಕಾರ್ಮಿಕರ ಮತ್ತು ರೈತರ ಪಕ್ಷಗಳು ಬಂಗಾಳ, ಬೊಂಬಾಯಿ, ಪಂಜಾಬ್ ಮತ್ತು ನಂತರದಲ್ಲಿ ಉತ್ತರ ಪ್ರದೇಶದಲ್ಲಿ ಹುಟ್ಟಿ ಬಂದವು.

ಸ್ವತಃ ರಾಯ್ ಅವರೇ ಆರೋಪ ಕ್ಕೊಳಗಾಗಿದ್ದ 1924ರ ಕಾನ್ಪುರ್ ಪಿತೂರಿ ಮೊಕದ್ದಮೆ ನಂತರ, ಒಂದು "ರೆವಲ್ಯೂಷನರಿ ನ್ಯಾಷನಲಿಸ್ಟ್ ಪಾರ್ಟಿ"(ಕ್ರಾಂತಿಕಾರಿ ರಾಷ್ಟ್ರೀಯ ಪಕ್ಷ)ವನ್ನು ಹುಟ್ಟುಹಾಕಲು ಅವರು ಕರೆ ಕೊಟ್ಟರು; "ರಾಷ್ಟ್ರೀಯ ವಿಮೋಚನೆ, ಪಾಳೇಗಾರಿ ಹಾಗೂ ಭೂಮಾಲಕತ್ವ ರದ್ದತಿ, ಭೂಮಿ, ಗಣಿ ಮತ್ತು ಇತರ ಸಾರ್ವಜನಿಕ ಸೌಲಭ್ಯಗಳ ರಾಷ್ಟ್ರೀಕರಣ ಮತ್ತು ಧರ್ಮ ಹಾಗೂ ಆರಾಧನೆಯ ಸ್ವಾತಂತ್ರ್ಯ" ಆ ಪಕ್ಷದ ಕಾರ್ಯಕ್ರಮವಾಗಿದ್ದವು.

1926ರವರೆಗೆ, ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷ ಮತ್ತು ಕಾರ್ಮಿಕರ ಹಾಗೂ ರೈತರ ಪಕ್ಷಗಳನ್ನು ಬೆಳೆಸುವ ಸಲುವಾಗಿ ರಾಯ್ ಅವರು ಹಲವಾರು ಪ್ರಯತ್ನಗಳನ್ನು ಮಾಡುತ್ತಾ ನಿಕಟವಾಗಿ ಕಾರ್ಯನಿರ್ವಹಿಸಿದರು. 1927ರಲ್ಲಿ, ಕಾಮಿಂಟರ್ನ್ ತನ್ನ ಪ್ರತಿನಿಧಿಗಳಲ್ಲಿ ಒಬ್ಬರಾಗಿ ಎಂ.ಎನ್.ರಾಯ್ ಅವರನ್ನು ಕ್ರಾಂತಿಕಾರಿ ಚಳುವಳಿ ಬೆಳೆಯುತ್ತಿದ್ದ ಚೀನಾಕ್ಕೆ ಕಳಿಸಿತು. ಯಾರ ಜತೆಯಲ್ಲಿ ಸಂಯುಕ್ತ ರಂಗ ಏರ್ಪಟ್ಟಿತ್ತೋ, ಆ ಕೌಮಿಂಟಾಂಗ್ ಅವರಿಂದ ಶಾಂಘಾಯ್ ಮತ್ತು ಕ್ಯಾಂಟನ್‌ನಲ್ಲಿ ಕಮ್ಯುನಿಸ್ಟರ ಮೇಲೆ ನಡೆಯುತ್ತಿದ್ದ ಭೀಕರ ದಾಳಿಗಳು ಕಾಮಿಂಟರ್ನ್‌ನಲ್ಲಿ ಪ್ರಮುಖ ವಿವಾದವಾಗಿ ಮಾರ್ಪಟ್ಟಿತ್ತು.

ಸೆಪ್ಟೆಂಬರ್ 1927ರಲ್ಲಿ ರಾಯ್ ಮಾಸ್ಕೋಗೆ ಹಿಂತಿರುಗಿದರು, ಆದರೆ ಬಹಳ ಬೇಗ ಕಾಮಿಂಟರ್ನ್ ನಾಯಕತ್ವದೊಂದಿಗೆ ಸಂಬಂಧ ಕಳಚಿತು. 1929ರಲ್ಲಿ ಬರ್ಲಿನ್ನಿಗೆ ಹೋಗಿ ಅಲ್ಲಿ ಜರ್ಮನಿಯ ವಿರೋಧಿ ಕಮ್ಯುನಿಸ್ಟರೊಂದಿಗೆ ಸೇರ್ಪಡೆಯಾದರು. ಡಿಸೆಂಬರ್ 1929ರಲ್ಲಿ ಅವರನ್ನು ಕಾಮಿಂಟರ್ನ್‌ನಿಂದ ಉಚ್ಚಾಟಿಸಲಾಯಿತು.

1930ರಲ್ಲಿ ಭಾರತಕ್ಕೆ ಬಂದ ರಾಯ್ "ರಾಯಿಸ್ಟ್"ರು ಎನ್ನಲಾಗುತ್ತಿದ್ದ ತನ್ನ ಕೆಲವು ಅನುಯಾಯಿಗಳ ಒಂದು ಗುಂಪಿನೊಂದಿಗೆ ಕಾಂಗ್ರೆಸ್ ಪಕ್ಷದೊಂದಿಗೆ ಕೆಲಸ ಮಾಡಲು ಆರಂಭಿಸಿದರು. ಬಾಕಿ ಉಳಿದಿದ್ದ ಕೆಲವು ಹಳೇ ಪ್ರಕರಣ ಅಡಿಯಲ್ಲಿ ಬ್ರಿಟಿಷರು ಅವರನ್ನು ಬಂಧಿಸಿದರು. ವಿಚಾರಣೆಯಾಗಿ 12 ವರ್ಷಗಳ ಕಠಿಣ ಕಾರಾಗೃಹವಾಸ ಶಿಕ್ಷೆಯಾಯಿತು, ಮನವಿಯ ನಂತರ ಆರು ವರ್ಷಗಳಿಗೆ ಇಳಿಸಲಾಯಿತು. ಅವರು 1936ರಲ್ಲಿ ಜೈಲಿನಿಂದ ಹೊರಗೆ ಬಂದರು.

ಕಾರ್ಮಿಕ ಸಂಘಗಳಲ್ಲಿ ಮತ್ತು ಇತರ ರಾಜಕೀಯ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿದ್ದ ರಾಯಿಸ್ಟ್‌ಗಳು ಕಟ್ಟಾ ಕಮ್ಯುನಿಸ್ಟ್ ವಿರೋಧಿಗಳಾಗಿದ್ದರು. ಭಾರತ ಕಮ್ಯುನಿಸ್ಟ್ ಪಕ್ಷದ ವಿರುದ್ಧ ಎಂ.ಎನ್.ರಾಯರನ್ನು ಕಣಕ್ಕಿಳಿಸಲಾಗಿತ್ತು. ಆದರೆ ಅವರು ಎಂದೂ ಸೋವಿಯತ್ ಯೂನಿಯನನ್ನು ಉಗ್ರಟೀಕೆಗೆ ಗುರಿ ಮಾಡಿರಲಿಲ್ಲ ಮತ್ತು ವಾಸ್ತವದಲ್ಲಿ ಫ್ಯಾಸಿಸಂ ಸೋಲಿಸುವ ಸ್ಟಾಲಿನ್ ನೇತೃತ್ವದ ಯುದ್ಧ ಪ್ರಯತ್ನವನ್ನು ಬೆಂಬಲಿಸಿದ್ದರು. ರಾಯ್ 1943ರಲ್ಲಿ ಮಾರ್ಕ್ಸ್‌ವಾದವನ್ನು ತ್ಯಜಿಸಿದರು; 'ರ್‍ಯಾಡಿಕಲ್ ಹ್ಯೂಮನಿಸಂ'(ತೀವ್ರವಾದಿ ಮಾನವತಾವಾದ) ಎಂಬ ಹೊಸ ಪಂಥವನ್ನು ಅಳವಡಿಸಿಕೊಂಡರು.

ಅವರು ಕೊನೆಗೆ ಮಾರ್ಕ್ಸ್‌ವಾದವನ್ನು ತ್ಯಜಿಸಿದ್ದರೂ 1921ರಿಂದ 1926ರ ವರೆಗೆ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಬೆಳೆಸುವಲ್ಲಿನ ಅವರ ಪಥಪ್ರದರ್ಶಕ ಕೊಡುಗೆಗಳನ್ನು ಮರೆಯಲು ಸಾಧ್ಯವಿಲ್ಲ.

ಭಾರತ ಆರ್.ಸಿ.ಇ.ಪಿ. ಯಿಂದ ಹೊರಗಿರಲು ನಿರ್ಧರಿಸಿರುವುದು ರೈತರು–ಕಾರ್ಮಿಕರಿಗೆ ಒಂದು ದೊಡ್ಡ ವಿಜಯ–ಎಐಕೆಎಸ್

ನವೆಂಬರ್ 4 ರಂದು ಭಾರತ ಆರ್.ಸಿ.ಇ.ಪಿ.ಯಿಂದ ಹೊರಗಿರಲು ನಿರ್ಧರಿಸಿದೆ. ಇದು ರೈತರಿಗೆ ಮತ್ತು ಕಾರ್ಮಿಕರಿಗೆ ಒಂದು ಮಹತ್ವದ ವಿಜಯವಾಗಿದೆ. ಇದು ಸ್ಪಷ್ಟವಾಗಿಯೇ ದೇಶಾದ್ಯಂತ ರೈತರು ಮತ್ತು ಕಾರ್ಮಿಕರ ಐಕ್ಯ ಪ್ರತಿಭಟನೆಗಳಿಂದಾಗಿ ಉಂಟಾದ ಅಪಾರ ಒತ್ತಡದ ಫಲಿತಾಂಶ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಹೇಳಿದೆ.

ಎಐಕೆಎಸ್, ಅಖಿಲ ಭಾರತ ಕಿಸಾನ್ ಸಂಘರ್ಷ ಸಂಯೋಜನಾ ಸಮಿತಿ, ಸಿಐಟಿಯು ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ನವಂಬರ್ 4ರಂದು ಪ್ರಧಾನ ಮಂತ್ರಿಗಳ ಮತ್ತು ಆರ್.ಸಿ.ಇ.ಪಿ.ಯ ಪ್ರತಿಕೃತಿಗಳ ದಹನದೊಂದಿಗೆ ಮತ್ತು ಅದಕ್ಕೆ ಮೊದಲು ಸರಣಿಯಾಗಿ ಬೃಹತ್ ಪ್ರತಿಭಟನೆಗಳನ್ನು ದೇಶಾದ್ಯಂತ ನಡೆಸಿದವು ಎಂಬುದು ಗಮನಾರ್ಹ. ಹೈನು ರೈತರು ತಮ್ಮ ಪಶುಗಳನ್ನು ಜಿಲ್ಲಾಧಿಕಾರಿಗಳ ಕಚೇರಿಗಳಿಗೆ ಒಯ್ದು ಪ್ರತಿಭಟನೆಗಳೂ ನೂರಾರು ಸ್ಥಳಗಳಲ್ಲಿ ನಡೆದವು. ಬಿಜೆಪಿ ಹಿಂದಿನ ದಿನದ ವರೆಗೂ ಬಿಜೆಪಿ ಆರ್.ಸಿ.ಇ.ಪಿ.ಗೆ ಸೇರಲು ಅತ್ಯುತ್ಸಾಹದಿಂದಿತ್ತು. ಇತ್ತೀಚಿನ ಚುನಾವಣೆಗಳಲ್ಲಿ ಅದು ಅನುಭವಿಸಿರುವ ಚುನಾವಣಾ ಹಿನ್ನಡೆ ಕೂಡ ಬೃಹತ್ ಮುಕ್ತ ವ್ಯಾಪಾರ ಒಪ್ಪಂದದಲ್ಲಿ ಮುಂದೆ ಕಾಲಿಡದಂತೆ ಅವರಲ್ಲಿ ಭೀತಿ ಮೂಡಿಸಿತು. ಪ್ರಧಾನ ಮಂತ್ರಿಗಳು ಭಾರತದ ವಿಶಾಲ ಮಾರುಕಟ್ಟೆಯನ್ನು ಅನ್ವೇಷಿಸಿ ಮತ್ತು ನಮ್ಮ ದೊಡ್ಡ ವ್ಯಾಪಾರಸ್ಥರಿಗೆ ಸೌಲಭ್ಯಗಳನ್ನು ಕಲ್ಪಿಸಿಕೊಡಿ ಎಂದು ಸದಸ್ಯ ರಾಷ್ಟ್ರಗಳಿಗೆ ಕರೆ ನೀಡಿದ ಮರುದಿನವೇ ಆರ್.ಸಿ.ಇ.ಪಿ. ಯಿಂದ ಹೊರಗುಳಿಯುವ ನಿರ್ಧಾರ ಬಂದಿದೆ ಎಂಬುದೂ ಗಮನಾರ್ಹ ಎಂದು ಎಐಕೆಎಸ್ ಹೇಳಿದೆ.

ಯಾವುದೇ ಹೊಸ ಒಪ್ಪಂದಕ್ಕೆ ಮುಂದಾಗುವ ಮೊದಲು ಸರಕಾರ ನವ–ಉದಾರವಾದಿ ಆರ್ಥಿಕ ಧೋರಣೆಗಳು, ವ್ಯಾಪಾರ ಉದಾರೀಕರಣ ಮತ್ತು ವಿಶೇಷವಾಗಿ ಭಾರತ–ಆಸಿಯಾನ್ ಮುಕ್ತ ವ್ಯಾಪಾರ ಒಪ್ಪಂದದ ಪರಾಮರ್ಶೆಯನ್ನು ನಡೆಸಿರುವ ಒಂದು ಶ್ವೇತಪತ್ರವನ್ನು ಪ್ರಕಟಿಸಬೇಕು ಎಂದು ಎಐಕೆಎಸ್ ಬಹಳ ಕಾಲದಿಂದ ಆಗ್ರಹಿಸುತ್ತಿದೆ. ಈ ಬಗ್ಗೆ ಕೇಂದ್ರ ಸರಕಾರ ರಾಜ್ಯಗಳೊಂದಿಗೆ ಚರ್ಚಿಸಬೇಕಾಗಿದ ಮತ್ತು ಸಂಬಂಧಪಟ್ಟ ಎಲ್ಲ ಕಾಗದಪತ್ರಗಳನ್ನು ಸಂಸತ್ತಿನ ಮುಂದೆ ತಪಾಸಣೆಗೆ ಇಡಬೇಕಾಗಿದೆ. ಕೃಷಿ ಸರಕುಗಳನ್ನು ಮನಬಂದಂತೆ ತಂದು ಸುರಿಯುವುದನ್ನು ತಕ್ಷಣವೇ ನಿಲ್ಲಿಸಬೇಕಾಗಿದೆ ಹಾಗೂ ಹಿಂದೆ ಇದ್ದ ಪ್ರಮಾಣಾತ್ಮಕ ಮಿತಿಗಳನ್ನು ಮತ್ತೆ ಹಾಕಬೇಕಾಗಿದೆ. ಈ ನಿಟ್ಟಿನಲ್ಲಿ ತಕ್ಷಣವೇ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಎಐಕೆಎಸ್ ಆಗ್ರಹಿಸಿದೆ.

ಆರ್.ಸಿ.ಇ.ಪಿ. ಒಪ್ಪಂದದ ಪಠ್ಯ ಭಾರತದ ಅಂತಿಮ ನಿರ್ಣಯ ಪರಿಹಾರವಾಗದಿರುವ ಪ್ರಶ್ನೆಗಳ ತೃಪ್ತಿಕರ ಪರಿಹಾರವನ್ನು ಅವಲಂಬಿಸಿದೆ ಎಂದು ಸ್ಪಷ್ಟವಾಗಿ ಹೇಳುತ್ತದೆ. ಪ್ರಧಾನ ಮಂತ್ರಿಗಳ ಪ್ರಧಾನ ಒತ್ತು ಇದ್ದದ್ದು ಭಾರತೀಯ ವ್ಯವಹಾರಸ್ಥರಿಗೆ ಸೌಲಭ್ಯಗಳಿಗಾಗಿ ಎಂಬುದು ಸುವಿದಿತ. ಬಿಜೆಪಿ ಸರಕಾರ ಮತ್ತು ಪ್ರಧಾನ ಮಂತ್ರಿಗಳ ಹಿಂದಿನ ವರ್ತನೆಗಳು ಮತ್ತು ಹಿಂದಿನ ಆಶ್ವಾಸನೆಗಳಲ್ಲಿ ವಿಶ್ವಾಸದ್ರೋಹ ತಿಳಿದಿರುವ ಸಂಗತಿಯೇ ಆಗಿರುವುದರಿಂದ, ಅವರು ಮತ್ತೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಮುಂದಾಗುತ್ತಾರೆ. ಆದ್ದರಿಂದ ಜನತೆ ಎಚ್ಚರದಿಂದಿರಬೇಕು ಮತ್ತು ಕಾರ್ಪೊರೇಟ್ ಹಿತಗಳನ್ನು ಈಡೇರಿಸುವ ಪ್ರಯತ್ನ ನಡೆಸುವ ಅಸಮಾನ ಮತ್ತು ಅನ್ಯಾಯಪೂರ್ಣವಾದ ಮುಕ್ತ ವ್ಯಾಪಾರ ಒಪ್ಪಂದಗಳ ವಿರುದ್ಧ ತೀವ್ರ ಪ್ರಚಾರ–ಪ್ರಕ್ಷೋಭೆ ನಡೆಸಬೇಕು ಎಂದು ಎಐಕೆಎಸ್ ಜನತೆಗೆ ಕರೆ ನೀಡಿದೆ.

ಮೋದಿ ಸರಕಾರ ಆರ್.ಸಿ.ಇ.ಪಿ.ಗೆ ಸಹಿ ಹಾಕಲು ಕೈಮುಂದೆ ಮಾಡಿ ನಿಂತಿತ್ತು. ಈ ವಿನಾಶ ನಡೆಯದಂತೆ ಸರಿಯಾದ ಸಮಯದಲ್ಲಿ ತಡೆದಿರುವುದು ರೈತರು, ಹಾಲು ಉತ್ಪಾದಕರು, ಸಣ್ಣ ತಯಾರಿಕೆದಾರರು,



ಎಡಪಕ್ಷಗಳು ಮತ್ತು ಇತರ ಪ್ರತಿಪಕ್ಷಗಳು ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ)ನ ಪೊಲಿಟ್ ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಹೇಳಿದ್ದಾರೆ.

ಇದಕ್ಕೆ ಮೊದಲು ರೈತ ಸಂಘಟನೆಗಳು ಈ ಪ್ರಸ್ತಾವಿತ ಆರ್ ಸಿ ಇ ಪಿ ಯ ವಿರುದ್ಧ ನವಂಬರ್4 ರಂದು ನಡೆಸಿದ ಅಖಿಲ ಭಾರತ ಪ್ರತಿಭಟನೆಗೆ ಸಿಪಿಯ(ಎಂ) ಪೊಲಿಟ್‌ಬ್ಯುರೊ ಸೌಹಾರ್ದ ವ್ಯಕ್ತಪಡಿಸಿ ಅದನ್ನು ಬೆಂಬಲಿಸಿತ್ತು ಹಾಗೂ ಹೇಳಿದೆ. ಸರಕಾರ ಆರ್.ಸಿ.ಇ.ಪಿ.ಗ ತರಾತುರಿಯಿಂದ ಸಹಿ ಹಾಕಬಾರದು ಎಂದು ಆಗ್ರಹಿಸಿತ್ತು.

ಆಸಿಯಾನ್, ಚೀನಾ, ನ್ಯೂಝೀಲೆಂಡ್, ಆಸ್ಟ್ರೇಲಿಯ, ಜಪಾನ್, ದಕ್ಷಿಣ ಕೊರಿಯ ಮತ್ತು ಭಾರತದ ನಡುವಿನ ಒಂದು ಬೃಹತ್ ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ) "ಪ್ರಾದೇಶಿಕ ಸಮಗ್ರ ಆರ್ಥಿಕ ಒಪ್ಪಂದ"ಕ್ಕೆ (ಆರ್.ಸಿ.ಇ.ಪಿ.) ಬರಲು ಕೊನೆಯ ಗಳಿಗೆಯ ಮಾತುಕತೆಗಳು ನಡೆಯುತ್ತಿವೆ. ಬಿಜೆಪಿ ಕೇಂದ್ರ ಸರಕಾರ ಈ ಮಾತುಕತೆಗಳು ನೇರವಾಗಿ ತಟ್ಟುವ ವಿಭಾಗಗಳನ್ನು ತೊಡಗಿಸಿಕೊಳ್ಳದೆ ಮತ್ತು ರಾಜ್ಯಗಳು ಹಾಗೂ ಸಂಸತ್ತಿನೊಂದಿಗೆ ಸಮಾಲೋಚಿಸದೆ ಈ ಮಾತುಕತೆಗಳನ್ನು ರಹಸ್ಯಮಯವಾಗಿ ಮತ್ತು ಪ್ರಜಾಪ್ರಭುತ್ವ ರೀತಿಯನ್ನು ಬದಿಗಿಟ್ಟು ನಡೆಸುತ್ತಿರುವುದು ಅತ್ಯಂತ ಆಕ್ಷೇಪಾರ್ಹ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿತ್ತು.

ಭಾರತ ಈ ಮುಕ್ತ ವ್ಯಾಪಾರ ಒಪ್ಪಂದವನ್ನು ಸೇರಲು ನಿರ್ಧರಿಸಿದರೆ, ಅದು ಭಾರತದ ಸರಕು ತಯಾರಿಕಾ ವಲಯ ಮತ್ತು ಕೃಷಿಗೆ ಹಾನಿಯುಂಟು ಮಾಡುತ್ತದೆ, ಮತ್ತು ದೇಶದ ಪ್ರಸಕ್ತ ಚಾಲ್ತಿ ಖಾತೆ ಕೊರತೆಯನ್ನು (ಕರೆಂಟ್ ಅಕೌಂಟ್ ಡೆಫಿಸಿಟ್) ಹೆಚ್ಚಿಸುತ್ತದೆ. ಇದು ಉದ್ಯೋಗ ಹಾಗೂ ಜನಗಳ ಕಲ್ಯಾಣದ ಮೇಲೆ ಗಂಭೀರವಾದ ಪ್ರತಿಕೂಲ ಪರಿಣಾಮಗಳನ್ನು ಬೀರಲಿದೆ ಎಂದು ಸಿಪಿಐ(ಎಂ) ಎಚ್ಚರಿಸಿತ್ತು..

ಭಾರತದ ಅರ್ಥವ್ಯವಸ್ಥೆಯನ್ನು ಅಗತ್ಯಕ್ಕಿಂತ ಮೊದಲು ತೆರೆದು ಕೊಡುವ ಹಿಂದಿನ ಸರಕಾರದ ನಿರ್ಧಾರಗಳಿಂದಾಗಿ ಭಾರ ದ ವ್ಯಾಪಾರ ಕೊರತೆ ಸತತವಾಗಿ ಏರುತ್ತ ಬರುತ್ತಿದೆ. ಅದೀಗ 184 ಬಿಲಿಯ ಅಮೆರಿಕನ್ ಡಾಲರ್ ಆಗಿದೆ. ಈ ಪ್ರಸ್ತಾವಿತ ಮುಕ್ತ ವ್ಯಾಪಾರ ಒಪ್ಪಂದ(ಎಫ್‌ಟಿಎ) ಅದನ್ನು ಮತ್ತಷ್ಟು ಉಲ್ಬಣಗೊಳಿಸಲಿದೆ. ಏಕೆಂದರೆ, ಈಗಿರುವ ಸುಮಾರಾಗಿ ಎಲ್ಲ ಎಫ್ ಟಿ ಎ ಭಾಗೀದಾರರೊಂದಿಗೆ ಭಾರತ ವ್ಯಾಪಾರ ಕೊರತೆಯನ್ನು ಹೊಂದಿದೆ.

ಭಾರತೀಯ ಸರಕು ತಯಾರಿಕಾ ವಲಯ ಈಗಾಗಲೇ ಮಂದಗತಿಯನ್ನು ಎದುರಿಸಬೇಕಾಗಿರುವ ಮತ್ತು ಗ್ರಾಮೀಣ ಸಂಕಟ ನಿಲ್ಲದೆ ಮುಂದುವರೆಯುತ್ತಿರುವ ಸಮಯದಲ್ಲಿ, ಆರ್.ಸಿ.ಇ.ಪಿ. ಅಡಿಯಲ್ಲಿ ಹೂಡಿಕೆ, ಬೌದ್ಧಿಕ ಆಸ್ತಿ ಹಕ್ಕುಗಳು, ಸೇವೆಗಳು ಮತ್ತು ಇ–ವಾಣಿಜ್ಯ ಕುರಿತಂತೆ ಆಶ್ವಾಸನೆಗಳನ್ನು ಕೊಡುವುದರೊಂದಿಗೇ, ಆಮದು ಸುಂಕಗಳನ್ನು ತೆಗೆದು ಹಾಕಿದರೆ, ಅದರಿಂದ ತಯಾರಿಕೆ ವಲಯದ ಪುನರುಜ್ಜೀವನಕ್ಕೆ ಮತ್ತು ಹರಡಿರುವ ಕೃಷಿ ಬಿಕ್ಕಟ್ಟನ್ನು ಮೀರಿ ನಿಲ್ಲಲು ಪರಿಣಾಮಕಾರೀ ಧೋರಣೆಯನ್ನು ರೂಪಿಸುವ ಸರಕಾರದ ಸಾಮರ್ಥ್ಯಕ್ಕೆ ಕಡಿವಾಣ ಬೀಳುತ್ತದೆ.

ಆದ್ದರಿಂದ ಸರಕಾರ ಈ ಒಪ್ಪಂದಕ್ಕೆ ತರಾತುರಿಯಿಂದ ಸಹಿ ಹಾಕಬಾರದು, ಇದರ ಕರಡನ್ನು ಮುಂಬರುವ ಸಂಸತ್ತಿನ ಅಧಿವೇಶನದ ಮುಂದೆ ಮಂಡಿಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹಿಸಿತ್ತು.

ಸಾವಿರ–ಸಾವಿರ ಸಂಖ್ಯೆಯಲ್ಲಿ ಐ.ಟಿ. ನೌಕರರ ರಿಟ್ರೆಂಚ್‌ಮೆಂಟ್ –ಸಿಐಟಿಯು ಖಂಡನೆ

ಮಾಹಿತಿ ತಂತ್ರಜ್ಞಾನ(ಐ.ಟಿ.) ವಲಯದಲ್ಲಿ ನೌಕರರ ಸಾಮೂಹಿಕ ರಿಟ್ರೆಂಚ್ ಮೆಂಟ್ ನಡೆಯುತ್ತಿರುವ ಬಗ್ಗೆ ಸಿಐಟಿಯು ಆಳವಾದ ಆತಂಕವನ್ನು ವ್ಯಕ್ತಪಡಿಸಿದೆ. ದೈತ್ಯ ಐ.ಟಿ. ಕಂಪನಿಗಳಾದ ಕಾಗ್ನಿಝೆಂಟ್, ಇನ್ ಪೋಸಿಸ್, ಕ್ಯಾಪ್ ಜೆಮಿನಿ ಮುಂತಾದವುಗಳು ಸಾವಿರಾರು ನೌಕರರ ರಿಟ್ರೆಂಚ್ ಮೆಂಟ್ ಪ್ರಕಟಿಸಿವೆ ಎಂದು ವರದಿಯಾಗಿದೆ. ಕ್ಯಾಪ್ ಜೆಮಿನಿ ಈಗಾಗಲೇ 5000 ನೌಕರರ ಲೇ–ಆಫ್ ಮಾಡಿದೆ; ಕಾಗ್ನಿಝೆಂಟ್ ತನ್ನ 7000 ನೌಕರರ ಲೇ–ಆಫ್ ಮಾಡಿದೆ ಎಂದು ವರದಿಯಾಗಿದೆ; ಇನ್ ಫೋಸಿಸ್ ವಿವಿಧ ಮಟ್ಟಗಳಲ್ಲಿ 10% ನೌಕರರನ್ನು ತೆಗೆದು ಹಾಕಲಾಗುವುದು ಎಂದು ಪ್ರಕಟಿಸಿದೆ– ಸೀನಿಯರ್ ಮ್ಯಾನೇಜರ್ ಮಟ್ಟದಲ್ಲಿ 2200 ಮತ್ತು ಅಸೋಸಿಯೇಟ್ ಹಾಗೂ ಮಧ್ಯದ ಮಟ್ಟದಲ್ಲಿ 4000–10000 ನೌಕರರನ್ನು ತೆಗೆದು ಹಾಕಲಾಗುವುದು.

ಈ ಎಲ್ಲ ಐ.ಟಿ.. ಬಹುರಾಷ್ಟ್ರೀಯ ಕಂಪನಿಗಳು ಅಪಾರ ಲಾಭ ಗಳಿಸಿಕೊಂಡು ಬಂದಿವೆ, ನೌಕರರನ್ನು ತೆಗೆದು ಹಾಕಲು ಅವಕ್ಕೆ ಕಾರಣಗಳಿಲ್ಲ. "ಬೆಳವಣಿಗ ಯೋಜನೆಗಳು', 'ಪುನರ್ರಚನೆ', 'ಪಾತ್ರಗಳನ್ನು ತರ್ಕಬದ್ಧಗೊಳಿಸುವುದು' ಇತ್ಯಾದಿ ನೆಪಗಳನ್ನು ಕೊಟ್ಟು ನೌಕರರನ್ನು ತೆಗೆದು ಹಾಕಲಾಗುತ್ತಿದೆ. ಇವೆಲ್ಲ ನೌಕರರನ್ನು ಬಲಿಗೊಟ್ಟು ಲಾಭಗಳನ್ನು ಗರಿಷ್ಟಗೊಳಿಸುವ ಕ್ರಮಗಳಲ್ಲದೆ ಬೇರೇನೂ ಅಲ್ಲ ಎಂದು ಸಿಐಟಿಯು ಹೇಳಿದೆ.

ನೌಕರರನ್ನು ಈ ರೀತಿ ಕಾನೂನುಬಾಹಿರವಾಗಿ ಕೆಲಸದಿಂದ ತೆಗೆದು ಹಾಕುತ್ತಿರುವುದನ್ನ ಕೇಂದ್ರದಲ್ಲಿನ ಬಿಜೆಪಿ ಸರಕಾರ ಮತ್ತು ವಿವಿಧ ರಾಜ್ಯಸರಕಾರಗಳು ಮೂಕಪ್ರೇಕ್ಷಕರಾಗಿ ನೋಡುತ್ತಿರುವುದು ಅತ್ಯಂತ ಖೇದಕರ ಎಂದಿರುವ ಸಿಐಟಿಯು, ವಿವಿಧ ರಾಜ್ಯಗಳಲ್ಲಿ ಐ.ಟಿ. ನೌಕರರು ಐ.ಟಿ. ಕಂಪನಿಗಳ ಕಾನೂನುಬಾಹಿರ ಕ್ರಮಗಳನ್ನು ಪ್ರತಿರೋಧಿಸುತ್ತಿರುವುದು ಪ್ರಶಂಸನೀಯ ಎಂದಿದೆ. ಈ ಅನ್ಯಾಯದ ವಿರುದ್ಧ ಸಾಮೂಹಿಕವಾಗಿ ಹೋರಾಡಲು ಐ.ಟಿ. ನೌಕರರು ಕ್ರಮೇಣ ಸಂಘಟಿತರಾಗುತ್ತಿದ್ದಾರೆ.

ಕೇಂದ್ರದಲ್ಲಿನ ಸರಕಾರ ಮತ್ತು ಸಂಬಂಧಪಟ್ಟ ರಾಜ್ಯ ಸರಕಾರಗಳು ಈ ಕಾನೂನುಬಾಹಿರ ರಿಟ್ರೆಂಚ್ ಮೆಂಟ್‌ಗಳನ್ನು ನಿಲ್ಲಿಸಬೇಕು ಮತ್ತು ಐ.ಟಿ. ನೌಕರರನ್ನು ರಕ್ಷಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಐಟಿಯು ಆಗ್ರಹಿಸಿದೆ. ಅದು ಐ.ಟಿ. ನೌಕರರಿಗೆ ಬೆಂಬಲ ಮತ್ತು ಸೌಹಾರ್ದವನ್ನು ಪುನರುಚ್ಚರಿಸಿದೆ. ಮತ್ತು ಅವರು ತಮ್ಮ ಸಾಮೂಹಿಕ ಪ್ರತಿರೋಧವನ್ನು ಮುಂದುವರೆಸಬೇಕು ಎಂದು ಕೇಳಿಕೊಂಡಿದೆ.

ಸಿಐಟಿಯುನ ಎಲ್ಲ ಸದಸ್ಯರು ಮತ್ತು ರಾಜ್ಯಸಮಿತಿಗಳು ಐ.ಟಿ. ಬಹುರಾಷ್ಟ್ರೀಯ ಕಂಪನಿಗಳು ತಮ್ಮ ನೌಕರರನ್ನು ಕೆಲಸದಿಂದ ತೆಗೆದು ಹಾಕುವುದನ್ನು ಬಲವಾಗಿ ವಿರೋಧಿಸಬೇಕು ಮತ್ತು ಐ.ಟಿ. ನೌಕರರ ಬೆಂಬಲಕ್ಕೆ ನಿಲ್ಲಬೇಕು ಎಂದು ಸಿಐಟಿಯು ಕರೆ ನೀಡಿದೆ.



ಡಿವೈಎಫ್‌ಐ ನವಂಬರ್ 11 ರಂದು ನವದೆಹಲಿಯಲ್ಲಿ **"ರಾಷ್ಟ್ರೀಯ ಉದ್ಯೋಗದ ಹಕ್ಕು ಸಮಾವೇಶ'** ವನ್ನು ನಡೆಸಿತು. ಈ ಸಮಾವೇಶ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಸರಿಯಾದ ಜಾರಿಯನ್ನು ಪ್ರಶ್ನೆಯನ್ನು ಎತ್ತಿಕೊಳ್ಳಲು ಮತ್ತು ನಗರ ಉದ್ಯೋಗ ಖಾತ್ರಿ ಶಾಸನವೊಂದರ ಕರಡನ್ನು ಸಿದ್ಧಗೊಳಿಸಲು ನಿರ್ಧರಿಸಿದೆ. ಈ ಕರಡಿನ ಮೇಲೆ ಭಾರತದ ಯುವಜನತೆಯ ಪ್ರತಿಕ್ರಿಯೆಗಳನ್ನು ಆಹ್ವಾನಿಸಿ ನಂತರ ಅದನ್ನು ಒಂದು ಖಾಸಗಿ ಮಸೂದೆಯಾಗಿ ಸಂಸತ್ತಿನಲ್ಲಿ ಸಲ್ಲಿಸಲಾಗುವುದು ಎಂದು ಡಿವೈಎಫ್‌ಐ ಅಧ್ಯಕ್ಷ ಪಿ.ಎ. ಮಹಮ್ಮದ್ ರಿಯಾಸ್ ಹೇಳಿದ್ದಾರೆ. ಮುಂಬರುವ ದಿನಗಳಲ್ಲಿ ಉದ್ಯೋಗದ ಹಕ್ಕನ್ನು ಜಾರಿಗೊಳಿಸಲು ಡಿವೈಎಫ್‌ಐ ಕೋಟ್ಯಂತರ ಯುವಜನರನ್ನು ಒಂದು ಬೃಹತ್ ಆಂದೋಲನದಲ್ಲಿ ಅಣಿನೆರೆಸುತ್ತದೆ ಎಂದೂ ಅವರು ಹೇಳಿದ್ದಾರೆ.

ಎಂತಹ ಕಷ್ಟದ ದಿನಗಳು! ರಕ್ಷಣಾ ಅಗತ್ಯಗಳನ್ನು ಪೂರೈಸಲು ರಕ್ಷಣಾ ಇಲಾಖೆಯ ಭೂಮಿಗಳ ಮೆಗಾ ಸೇಲ್!



ತಾನೊಬ್ಬ ಜನ ಬೆಂಬಲದಿಂದ ಪ್ರವರ್ಧಮಾನಕ್ಕೆ ಬರುತ್ತಿರುವ ಜಾಗತಿಕ ಬಲಪಂಥದ ಅಗ್ರಮಾನ್ಯ ನಾಯಕ ಎಂದು ಮೋದಿಯವರು ಭಾವಿಸಿರಬಹುದು. ಆದರೆ, ಅವರು ತಾನು ಸಾಮ್ರಾಜ್ಯಶಾಹಿಯ ಸುಳಿಯಲ್ಲಿ ಸಿಕ್ಕಿಕೊಂಡಿದ್ದೇನೆ ಮತ್ತು ವಿಶ್ವದಲ್ಲಿ ಅಮೇರಿಕಾದ ಯಜಮಾನಿಕೆಯನ್ನು ಬಲಪಡಿಸುವುದೇ ತನಗಿಗಿರುವ ಏಕೈಕ ಆಯ್ಕೆ ಎಂಬುದನ್ನು ಅರ್ಥಮಾಡಿಕೊಂಡಿಲ್ಲ. ಫಲಿತಾಂಶವೆಂದರೆ, ಭಾರತವನ್ನು ಒಂದು "ಮಹಾನ್ ಶಕ್ತಿಶಾಲಿ" ದೇಶವನ್ನಾಗಿ ಮಾರ್ಪಡಿಸುವ ಕನಸನ್ನು ಆರು ವರ್ಷಗಳ ಹಿಂದೆ ಭಾರತದ ಜನತೆಗೆ ಕಾಣಿಸಿದ್ದ ಅವರ ಆಳ್ವಿಕೆಯಲ್ಲಿ ಈಗ ದೇಶ ತನ್ನ ಚರಿತ್ರೆಯಲ್ಲಿ, ರಕ್ಷಣಾ ಮಂತ್ರಾಲಯವು ತನ್ನ ಖರ್ಚು ವೆಚ್ಚಗಳಿಗೆ ತನ್ನ ಆಸ್ತಿಗಳನ್ನು ಮಾರಿಕೊಂಡು ಕಾಲ ಸಾಗಿಸುವ ಹಂತವನ್ನು ನಾವೀಗ ತಲುಪಿದ್ದೇವೆ.

ಕನ್ನಡಕ್ಕೆ: ಕೆ.ಎಂ.ನಾಗರಾಜ್

ಅರ್ಜುನ್ ಬಿ. (ಪೀಪಲ್ಸ್ ಡೆಮಾಕ್ರಸಿ, ನವಂಬರ್ 10, 2019)

ಆರು ವರ್ಷಗಳ ಹಿಂದೆ, ಪ್ರಧಾನ ಮಂತ್ರಿ ಮೋದಿಯವರು ಭಾರತವನ್ನು ಒಂದು "ಮಹಾನ್ ಶಕ್ತಿಶಾಲಿ" ದೇಶವನ್ನಾಗಿ ಮಾರ್ಪಡಿಸುವ ಕನಸನ್ನು ಭಾರತದ ಜನತೆಗೆ ಕಾಣಿಸಿದ್ದರು. ಭಾರತದ ಕೀರ್ತಿ ಪತಾಕೆಯನ್ನು ಜಾಗತಿಕ ಮಟ್ಟದಲ್ಲಿ ಹಾರಿಸುವುದಾಗಿ ಅವರು 2014ರಲ್ಲಿ ಘೋಷಿಸಿದ್ದರು. ದೇಶದ ರಕ್ಷಣೆ ಮಾಡಿಕೊಳ್ಳುವುದರ ಜೊತೆಗೆ ಜಾಗತಿಕ ವ್ಯವಹಾರ-ವಿದ್ಯಮಾನಗಳಲ್ಲೂ ಭಾರತವು ಪ್ರಧಾನ ಭೂಮಿಕೆ ನಿರ್ವಹಿಸುತ್ತದೆ ಎಂದು ಮೋದಿ ಭಾವಿಸಿದ್ದರು. ಎರಡನೆಯ ಅವಧಿಗೆ ಅಧಿಕಾರಕ್ಕೆ ಬಂದ ನಂತರವಂತೂ ಮೋದಿಯವರ ವರ್ಚಸ್ಸಿನಿಂದ ಭಾರತದ ಮತದಾರರು ಮಾತ್ರವಲ್ಲ ಅಂತಾರಾಷ್ಟ್ರೀಯ ಸಮುದಾಯವೇ ನಿಬ್ಬೆರಗಾಗಿದೆ ಎಂದೇ ಮೋದಿ ಭಕ್ತರು ಭಾವಿಸಿದ್ದಾರೆ. ಹಾಗಾಗಿ, ಕಾಶ್ಮೀರದ ವಿಶೇಷ ಸ್ಥಾನ-ಮಾನ ಕಲ್ಪಿಸುವ 370ನೇ ವಿಧಿಯನ್ನು ಸರಿಯಾದ ಸಮಯದಲ್ಲಿ ಮೋದಿ ರದ್ದುಗೊಳಿಸಿದ್ದಾರೆ, ಏಕೆಂದರೆ, ಭಾರತದ ಪರವಾಗಿ ಅಂತಾರಾಷ್ಟ್ರೀಯ ಅಭಿಪ್ರಾಯವನ್ನು ಅವರು ಪ್ರಭಾವಿಸುವ ಸಾಮರ್ಥ್ಯ ಹೊಂದಿದ್ದಾರೆ ಎಂಬುದಾಗಿ ಆರ್‌ಎಸ್‌ಎಸ್‌ನ ಸಹಚರರು ನಂಬಿದ್ದಾರೆ.

ದೇಶದ ಜನಸಂಖ್ಯೆಯ ಬೃಹತ್ ಗಾತ್ರ, ಅದರ ಭೌಗೋಳಿಕ ನೆಲೆ ಮತ್ತು ಅದರ ಆರ್ಥಿಕ ವಹಿವಾಟುಗಳ ಸ್ವರೂಪ ಮತ್ತು ಗಾತ್ರಗಳಿಂದಾಗಿ, ಜಾಗತಿಕ ವಾಣಿಜ್ಯ-ವ್ಯವಹಾರ ವಹಿವಾಟುಗಳಲ್ಲಿ ಭಾರತವು ಸ್ವಾಭಾವಿಕವಾಗಿಯೇ ಒಂದು ಪ್ರಮುಖ ಜಾಗತಿಕ ಪೈಪೋಟಿದಾರ ಎಂಬುದು ಭಾರತದ ಬಲಪಂಥದ ನಂಬಿಕೆ. ವಿದೇಶಗಳಲ್ಲಿ ನೆಲೆಸಿರುವ ಭಾರತೀಯ ಸಂಜಾತರನ್ನು ಸಂಮೋಹಗೊಳಿಸುವ ಯಶಸ್ವಿ ಕಲೆಯೇ ದೇಶದ ಶಕ್ತಿ-ಸಾಮರ್ಥ್ಯವೆಂಬ ಗುಂಗಿನಲ್ಲಿರುವ ಮೋದಿಯವರು ಅಮೇರಿಕಾದ ಅಧ್ಯಕ್ಷರನ್ನೂ ತನ್ನ ತಾಳಕ್ಕೆ ತಕ್ಕಂತೆ ಕುಣಿಸಬಹುದು ಎಂದು ಭಾವಿಸಿದ್ದಾರೆ.

ಇಂತಹ ದೊಡ್ಡಸ್ತಿಕೆಯ ಭ್ರಮೆಗಳ ಪ್ರಚಾರದ ಮೂಲಕ ವಾಸ್ತವವನ್ನು ಮುಚ್ಚಿಡಲಾಗದು. ಕಟು ವಾಸ್ತವ ಏನೆಂದರೆ, ಕೈಗಾರಿಕೆಗಳ ಅಶಕ್ತ ತಳಹದಿ, ಉನ್ನತವಲ್ಲದ ಮಟ್ಟದ ತಂತ್ರಜ್ಞಾನ, ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ ಸಂಖ್ಯೆಯ ಜ್ಞಾನ ಬೋಧನೆಯ ಉತ್ಕೃಷ್ಟ ಕೇಂದ್ರಗಳನ್ನು ಹೊಂದಿರುವ ಭಾರತವು ಜಾಗತಿಕ ಗಣ್ಯರನ್ನು ಪ್ರಭಾವಿಸಲಾಗುವುದಿಲ್ಲ.

ಆದಾಗ್ಯೂ, ಮೋದಿ ಸರ್ಕಾರ ಮತ್ತು ಅವರ ಬೆಂಬಲಿಗರು ವಾಸ್ತವ ಜಗತ್ತಿನಿಂದ ದೂರ ಸರಿದು ತಮ್ಮ ಕಲ್ಪನೆಯ ಲೋಕದಲ್ಲಿ ವಿಹರಿಸುತ್ತಲೇ ಇದ್ದಾರೆ. ಇತ್ತೀಚೆಗೆ ಬ್ಯಾಂಕಾಕ್‌ನಲ್ಲಿ ನಡೆದ ಪ್ರಾದೇಶಿಕ ಸಮಗ್ರ ಆರ್ಥಿಕ ಒಪ್ಪಂದ ಸಭೆಯಲ್ಲಿ ಪ್ರಧಾನಿ ಮೋದಿ ಹೇಳಿದರು: "ಭಾರತದಲ್ಲಿ ಉದ್ಯಮ ಸ್ಥಾಪಿಸಲು ಇದು ಅತ್ಯುತ್ತಮ ಸಮಯ. ಅನೇಕ ಸಂಗತಿಗಳಲ್ಲಿ ಏರಿಕೆ-ಇಳಿಕೆಗಳಾಗುತ್ತಿವೆ. ದೇಶದಲ್ಲಿ ವ್ಯವಹಾರ ನಡೆಸುವುದು ಸುಗಮವಾಗಿದೆ. ಬದುಕು ಸುಗಮವಾಗಿದೆ. ವಿದೇಶಿ ನೇರ ಹೂಡಿಕೆ, ಮೈದುಂಬಿದ ಅರಣ್ಯಗಳು, ಪೇಟೆಂಟ್ಸ್ (ಸ್ವಾಮ್ಯ), ಉತ್ಪಾದಕತೆ ಮತ್ತು ಮೂಲಸೌಕರ್ಯಗಳು ಹೆಚ್ಚುತ್ತಿವೆ. ಅದೇ ಸಮಯದಲ್ಲಿ ತೆರಿಗೆಗಳು, ತೆರಿಗೆ ದರಗಳು, ಕಛೇರಿಗಳಲ್ಲಿ ವಿಧಾನ-ವಿಳಂಬಗಳು, ಲಂಚಗುಳಿತನಗಳು ಮತ್ತು ಚಮಚಾಗಿರಿ ಇಳಿಯುತ್ತಿವೆ".

ಆದರೆ, ಅಹಿತವಾದ ವಾಸ್ತವ ಏನೆಂದರೆ, ಭಾರತವು ಈಗ ಆರ್ಥಿಕ ಮಂದಗತಿಯಲ್ಲಿ ಒದ್ದಾಡುತ್ತಿದೆ. ನೆರೆಯ ಬಾಂಗ್ಲಾದೇಶವು, ಭಾರತಕ್ಕಿಂತಲೂ ವೇಗವಾಗಿ, 8.1% ಆರ್ಥಿಕ ಬೆಳವಣಿಗೆ ಸಾಧಿಸುತ್ತಿದೆ. ನೇಪಾಳವೂ ಸಹ 2019ರಲ್ಲಿ ಭಾರತಕ್ಕಿಂತಲೂ ವೇಗವಾಗಿ ಬೆಳೆಯುತ್ತದೆ ಎಂದು ಅಂದಾಜು ಮಾಡಲಾಗಿದೆ. ವಿಶ್ವ ಬ್ಯಾಂಕಿನ ಪ್ರಕಾರ, ಆರ್ಥಿಕ ರಂಗದಲ್ಲಷ್ಟೇ ಅಲ್ಲ, ಹಲವು ಸಾಮಾಜಿಕ ಸೂಚಿಗಳಲ್ಲೂ ಬಾಂಗ್ಲಾದೇಶವು ಭಾರತಕ್ಕಿಂತ ಮುಂದಿದೆ. ಬಾಂಗ್ಲಾದೇಶದ ಸರಾಸರಿ ಮಾನವ ಜೀವಿತಾವಧಿ 72 ವರ್ಷಗಳಿದ್ದರೆ, ಭಾರತದಲ್ಲಿ ಅದು 69.1 ವರ್ಷಗಳು. ಬಾಂಗ್ಲಾದೇಶದ ಶಿಶು ಮರಣ ಸಂಖ್ಯೆ 25.1 ಇದ್ದರೆ, ಭಾರತದಲ್ಲಿ ಅದು 31.5 ಇದೆ.

ಕೇಂದ್ರ ಸರ್ಕಾರದ ಹಣಕಾಸಿನ ಪರಿಸ್ಥಿತಿ ಅದೆಷ್ಟು ಹದಗೆಟ್ಟಿದೆ ಎಂದರೆ, ಅದು ತನ್ನ ಮಾಮೂಲಿ ಖರ್ಚು-ವೆಚ್ಚಗಳಿಗೂ ಹಣ ಹೊಂದಿಸಿಕೊಳ್ಳುವ ಪರಿಸ್ಥಿತಿಯಲ್ಲಿಲ್ಲ. ಹಾಗಾಗಿ, ತನ್ನ ಉದ್ದಿಮೆಗಳನ್ನೇ ಮಾರುತ್ತಿದೆ. ಈ ಬಗ್ಗೆ ಸಿಪಿಐ(ಎಂ) ನಾಯಕ ಸೀತಾರಾಂ ಯೆಚೂರಿ ಹೀಗೆ ಟ್ವೀಟ್ ಮಾಡಿದ್ದರು: "ಮೋದಿ ಸರ್ಕಾರ ಪಾಪರಾಗಿದೆಯೇ? ತನ್ನ ದುಂದುಗಾರಿಕೆಯ ಖರ್ಚುಗಳಿಗೆ ಮತ್ತು ಕಟ್ಟು ಕತೆ ಹಾಗೂ ಅಸತ್ಯಗಳಿಂದ ಕೂಡಿದ ಪ್ರಚಾರಗಳಿಗೆ ಹಣ ಹೊಂದಿಸಿಕೊಳ್ಳಲು ಜನತೆಗೆ ಸೇರಿದ ಸಂಪತ್ತನ್ನು ಮಾರುವುದೇ?"

ಕೇಂದ್ರ ಸರ್ಕಾರದ ಆದಾಯವು ಕಳೆದ ಎರಡು ವರ್ಷಗಳಿಂದಲೂ ಸತತವಾಗಿ ಇಳಿಯುತ್ತಿದೆ. ಹಾಗಾಗಿ, ಅದರ ವಿತ್ತೀಯ ಕೊರತೆ ಹೆಚ್ಚುತ್ತಿದೆ. ಈ ಕೊರತೆಯನ್ನು ಸರಿದೂಗಿಸಿಕೊಳ್ಳುವ ಸಲುವಾಗಿಯೇ, ರಿಸರ್ವ್ ಬ್ಯಾಂಕ್ ಹೊಂದಿದ್ದ ಮೀಸಲು ನಿಧಿಯಿಂದ 1.76 ಲಕ್ಷ ಕೋಟಿ ರೂಗಳನ್ನು ಇತ್ತೀಚೆಗಷ್ಟೇ ಕಸಿದುಕೊಂಡಿತ್ತು. ಆದಾಗ್ಯೂ, ಕೇಂದ್ರ ಸರ್ಕಾರವು ರಿಸರ್ವ್ ಬ್ಯಾಂಕ್ ಮೀಸಲು ಇಟ್ಟುಕೊಂಡಿರುವ ಚಿನ್ನವನ್ನೂ ಸಹ ಹರಾಜು ಹಾಕುವ ಸನ್ನಾಹದಲ್ಲಿದೆ ಎಂಬ ವರದಿ ಪ್ರಕಟವಾಗಿದೆ.

ಅಷ್ಟಾಗಿಯೂ, ಖಜಾನೆಯಲ್ಲಿ ಸಾಕಷ್ಟು ಹಣವಿಲ್ಲದಿರುವ ಪರಿಸ್ಥಿತಿಯಲ್ಲಿ, ಆದಾಯದ ಕೊರತೆಯನ್ನು ಸರಿದೂಗಿಸಿಕೊಳ್ಳಲು ಸರ್ಕಾರವು ಜನತೆಗೆ ಸೇರಿದ ಸಾರ್ವಜನಿಕ ಉದ್ದಿಮೆಗಳ ಸ್ವತ್ತುಗಳನ್ನು ಮಾರುತ್ತಿದೆ.

ಮಹಾರತ್ನ ಕಂಪೆನಿ ಎಂಬ ಅಭಿದಾನಕ್ಕೆ ಪಾತ್ರವಾಗಿದ್ದ ಮತ್ತು ಇಲ್ಲಿಯವರೆಗೆ 17,246 ಕೋಟಿ ರೂಗಳ ಲಾಭಾಂಶವನ್ನು ಕೇಂದ್ರ ಸರ್ಕಾರಕ್ಕೆ ನೀಡಿರುವ ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ನಿನ 53.29% ಷೇರುಗಳನ್ನು; ಹಿಂದಿನ ವರ್ಷದಲ್ಲಿ 171% ಲಾಭಾಂಶ ಕೊಟ್ಟಿರುವ ಮತ್ತು ನವರತ್ನ ಕಂಪೆನಿಗಳಲ್ಲಿ ಒಂದಾದ ಕಂಟೈನರ್ ಕಾರ್ಪೋರೇಷನ್ನಿನ 63.75%; ಷಿಪ್ಪಿಂಗ್ ಕಾರ್ಪೋರೇಷನ್ನಿನ 63.75%; ತೆಹ್ರಿ ಹೈಡ್ರೊ ಡೆವೆಲ್ಪಮೆಂಟ್ ಕಾರ್ಪೋರೇಷನ್ನಿನ 75%; ನಾರ್ತ್ ಈಸ್ಟ್ ಇಲೆಕ್ಟ್ರಿಕ್ ಪವರ್ ಕಾರ್ಪೋರೇಷನ್ನಿನ 100% ಷೇರುಗಳನ್ನು ಮಾರುವ ನಿರ್ಧಾರವನ್ನು ಕೇಂದ್ರ ಸಚಿವ ಸಂಪುಟವು ಕೈಗೊಂಡಿದೆ. ಮಾರಾಟದ ಪಟ್ಟಿಯಲ್ಲಿ, ಹಿಂದಿನ ವರ್ಷ ಒಂದರಲ್ಲೇ 7,218 ಕೋಟಿ ರೂ ಗಳ ಲಾಭ ಗಳಿಸಿರುವ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಷನ್ನಿನ 100% ಷೇರುಗಳ ಮಾರಾಟವನ್ನು ಕೊನೆ ಗಳಿಗೆಯಲ್ಲಿ ಸೇರಿಸಲಾಗಿದೆ ಎಂದು ವರದಿಯಾಗಿದೆ.

ಸರ್ಕಾರದ ಆರ್ಥಿಕ ಪರಿಸ್ಥಿತಿ ಅದೆಷ್ಟು ಬಿಗಡಾಯಿಸಿದೆ ಎಂದರೆ, ಕಾಯಂ ಸೇನೆಯನ್ನು ಪರಿಣಾಮಕಾರಿಯಾಗಿ ನಿಯುಕ್ತಿಗೊಳಿಸಲು ಮತ್ತು ಅದನ್ನು ನವೀನವಾಗಿ ಸಜ್ಜುಗೊಳಿಸಲು ಸಾಕಾಗುವಷ್ಟು ಹಣ ಸರ್ಕಾರದ ಬಳಿ ಇಲ್ಲ. ವಿತ್ತೀಯ ಮುಂಜಾಗರೂಕತೆಯ ಹೆಸರಿನಲ್ಲಿ, ಮಾಜಿ ಯೋಧರಿಗೆ ಸಲ್ಲಬೇಕಿದ್ದ ಮತ್ತು ವಾಗ್ದಾನ ಮಾಡಿದ್ದ ಒಂದು ಶ್ರೇಣಿ-ಒಂದು ನಿವೃತ್ತಿ ವೇತನವನ್ನು ನಿರಾಕರಿಸಲಾಗಿದೆ.

ಇದು ಒಂದು ಸ್ವಯಂ ನಿರ್ಮಿತ ಸಮಸ್ಯೆ. ಮೂಗು ಹೊರಲಾರದಷ್ಟು ದೊಡ್ಡದಾದ ಮೂಗುತಿ ಎನ್ನುವ ರೀತಿಯ ವಿದೇಶ ನೀತಿಯ ಅನುಸರಣೆ ಮತ್ತು ಚಾಣಕ್ಯತೆ ಮತ್ತು ಮಹತ್ವಾಕಾಂಕ್ಷೆಗಳಿಂದ ಕೂಡಿದ ಮನೋಭಾವದ ಕಾರಣಗಳಿಂದಾಗಿ ಈ ಸಮಸ್ಯೆ ಉದ್ಭವವಾಗಿದೆ. ಶಕ್ತಿಶಾಲಿ ದೇಶಗಳ ಮಿಲಿಟರಿ ಮೈತ್ರಿ ಕೂಟಗಳಿಗೆ ಸೇರಿಕೊಳ್ಳುವ ನೀತಿಗೆ ಬಲು ದುಬಾರಿ ಬೆಲೆಯನ್ನೇ ತೆರಬೇಕಾಗುತ್ತದೆ. ಮಿಲಿಟರಿ ಮೈತ್ರಿ ಕೂಟದ ಪಾಲುದಾರ ದೇಶಗಳು ಹೊಂದಿರುವ ಅತ್ಯಾಧುನಿಕ ಶಸ್ತ್ರ ಸಜ್ಜಿತ ಯುದ್ಧ ವಿಮಾನ, ಜಲಾಂತರ್ಗಾಮಿ ನೌಕೆ ಮತ್ತು ಟ್ಯಾಂಕರ್ ಇತ್ಯಾದಿಗಳಿಗೆ ಹೊಂದಿಕೊಳ್ಳುವ ಮಾದರಿಯ ಉಪಕರಣಗಳನ್ನೇ ಭಾರತ ಕೊಳ್ಳಬೇಕಾಗುತ್ತದೆ. ಅವುಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ದಂಡಿಯಾಗಿ ಹಣ ಖರ್ಚುಮಾಡಬೇಕಾಗುತ್ತದೆ.

ಇಂತಹ ಖರ್ಚುಗಳಿಂದಾಗಿ ಉಂಟಾಗಿರುವ ಆರ್ಥಿಕ ಒತ್ತಡವನ್ನು ನಿಭಾಯಿಸುವ ಸಲುವಾಗಿ, ಅಂದರೆ, ದೇಶದ ರಕ್ಷಣೆ ಮತ್ತು ಆಂತರಿಕ ಭದ್ರತೆಯ ವೆಚ್ಚಗಳಿಗೆ ಖಜಾನೆಯ ಹೊರಗಿನ ಮೂಲಗಳಿಂದ ಹಣ ಹೊಂದಿಸಿಕೊಳ್ಳುವ ಉದ್ದೇಶದಿಂದ, ಹದಿನೈದನೆಯ ಹಣಕಾಸು ಆಯೋಗದ ಪರಾಮರ್ಶೆಯ ವಿಷಯ ವ್ಯಾಪ್ತಿಯನ್ನು ತಿದ್ದುಪಡಿ ಮಾಡಲು ಸರ್ಕಾರವು ಹವಣಿಸುತ್ತಿದೆ. ಇಂತಹ ಒಂದು ಪ್ರಸ್ತಾಪದ ಸಮರ್ಥನೆಯಾಗಿ ಸರ್ಕಾರ ಕೊಡುವ ಕಾರಣವೆಂದರೆ, "ಖರ್ಚುಗಳ ಬಗ್ಗೆ ರಕ್ಷಣಾ ಮಂತ್ರಾಲಯದ ಮುನ್ನಂದಾಜಿಗೂ ಮತ್ತು ವಿತ್ತ ಮಂತ್ರಾಲಯವು ಹಂಚುವ ಹಣದಲ್ಲಿ ಸತತವಾಗಿ ಶೇ.25ರಷ್ಟು ಕೊರತೆಯಾಗುತ್ತಿದೆ".

ಹದಿನೈದನೆಯ ಹಣಕಾಸು ಆಯೋಗದ ಪರಾಮರ್ಶೆಯ ವಿಷಯ ವ್ಯಾಪ್ತಿಯ ತಿದ್ದುಪಡಿಯ ಮೂಲಕ ರಕ್ಷಣಾ ಇಲಾಖೆಯ ಭೂಮಿಯನ್ನು ಹರಾಜಿಗಿಡುವ ಪ್ರಕ್ರಿಯೆ ಆರಂಭವಾಗುತ್ತದೆ. ಈಗಾಗಲೇ ಭೂಮಿಯ ಹರಾಜಿನ ವಾಸನೆ ಹಿಡಿದಿರುವ ಭೂಗಳ್ಳರು ಮತ್ತು ಖಾಸಗಿ ವಲಯದ ರಣ ಹದ್ದುಗಳು ಅದನ್ನು ಕಬಳಿಸಲು ಹೊಂಚುಹಾಕುತ್ತಾ ಕುಳಿತಿವೆ. ರಕ್ಷಣಾ ಇಲಾಖೆಯು ಹೊಂದಿರುವ 17.5 ಲಕ್ಷ ಎಕರೆಗಳಷ್ಟು ಭೂಮಿಯಲ್ಲಿ, ಎಲ್ಲೆಲ್ಲಿ ಎಷ್ಟೆಷ್ಟು ಭೂಮಿ ಒತ್ತುವರಿಯಾಗಿದೆ ಮತ್ತು ನಾಗರಿಕ ಉದ್ದೇಶಗಳಿಗಾಗಿ ಅಗತ್ಯವಿರುವ ಸೇನೆಯ ಭೂಮಿ ಎಷ್ಟು ಎಂಬುದರ ಬೇಡಿಕೆಯನ್ನು ಗುರುತಿಸುವ ಕೆಲಸ ನಡೆಯುತ್ತಿದೆ.

ತಹ ಹರಾಜಿನ ಮೂಲಕ ರಕ್ಷಣಾ ಮಂತ್ರಾಲಯವು ಕನಿಷ್ಠ 25,000 ಕೋಟಿ ರೂಗಳನ್ನು ಪಡೆಯಬಹುದು ಎಂಬುದು ತಜ್ಞರ ಅಂದಾಜು. ಈ ಹಣವನ್ನು ಮೂಲ ಧನವಾಗಿ ಇಟ್ಟುಕೊಂಡು ಅದರಿಂದ ಬರುವ ಬಡ್ಡಿಯನ್ನು ಸೇನೆಯ ವಿಶೇಷ ಅಗತ್ಯಗಳನ್ನು ಪೂರೈಸಿಕೊಳ್ಳಬಹುದು ಎಂಬುದು ತಜ್ಞರ ಸಲಹೆ.

ಈ ಸಂಬಂಧವಾಗಿ ಸಾರ್ವಜನಿಕ ಅಭಿಪ್ರಾಯ ರಪಿಸುವ ಉದ್ದೇಶದಿಂದ ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾಗುವಂತೆ ನೋಡಿಕೊಳ್ಳುವ ಕೆಲಸ ರಭಸದಿಂದ ನಡೆಯುತ್ತಿದೆ. ಸಾರ್ವಜನಿಕರಲ್ಲಿ ಅನುಕಂಪ ಹುಟ್ಟಿಸುವ ಉದ್ದೇಶದಿಂದ "ದೇಶದ ಉದ್ದಗಲಕ್ಕೂ ಈಗಾಗಲೇ 9600 ಎಕರೆಗೂ ಮೇಲ್ಪಟ್ಟ ಭೂಮಿಯ ಒತ್ತುವರಿಯಾಗಿದೆ. ಈ ಸಂಬಂಧವಾಗಿ, ಹಲವಾರು ರಾಜ್ಯಗಳು ಮತ್ತು ನಗರ ಸಭೆಗಳ ವಿರುದ್ಧ ರಕ್ಷಣಾ ಮಂತ್ರಾಲಯ ದಾವೆ ಹೂಡಿದೆ" ಎಂಬ ಕತೆಗಳನ್ನು ಹೆಣೆಯಲಾಗುತ್ತಿದೆ.

ಈ ಎಲ್ಲ ವಿದ್ಯಮಾನಗಳು ಸೂಚಿಸುವ ಸಾರಾಂಶ ಏನೆಂದರೆ, ದೇಶದ ಚರಿತ್ರೆಯಲ್ಲಿ, ರಕ್ಷಣಾ ಮಂತ್ರಾಲಯವು ಸೇನೆಯ ಖರ್ಚು ವೆಚ್ಚಗಳ ನಿರ್ವಹಣೆಗಾಗಿ ಸೇನೆಯ ಆಸ್ತಿ ಮಾರಾಟದಿಂದ ಬರುವ ಬಡ್ಡಿಯನ್ನು ಅವಲಂಬಿಸಿ ಕಾಲ ಸಾಗಿಸುವ ಹಂತವನ್ನು ನಾವೀಗ ತಲುಪಿದ್ದೇವೆ.

ಮಹಾನ್ ದೇಶಗಳು ತಮ್ಮ ಸೇನೆಯ ಖರ್ಚು ವೆಚ್ಚಗಳಿಗೆ ಕಂಡ ಕಂಡ ಸಂದಿ ಮೂಲೆಗಳನ್ನೂ ತಡಕಾಡಿ ತಮ್ಮ ಖಜಾನೆ ತುಂಬಿಸಿಕೊಳ್ಳುವುದಿಲ್ಲ. ಒಂದು ಹುರುಪಿನ ಕಾಯಂ ಸೇನೆಯನ್ನು ಪೋಷಿಸಿ ಅದನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಲು ಹೆಣಗಾಡುವ ಯಾವುದೇ ದೇಶದ ಖಜಾನೆಯು ತನ್ನ ಸರ್ಕಾರಕ್ಕೆ ನೆಲದ ಮೇಲೆ ನಿಲ್ಲುವಂತೆ ಮತ್ತು ಅದರ ಮಹತ್ವಾಕಾಂಕ್ಷೆಯನ್ನು ತಾನು ಹೊರುವಷ್ಟು ಮಟ್ಟಕ್ಕೆ ಇಳಿಸಿಕೊಳ್ಳುವಂತೆ ಹೇಳಬೇಕು.

ನಮ್ಮ ಕೊರತೆಗಳನ್ನು ಲೆಕ್ಕಿಸದೆ ಹಿಂದೂ ಮಹಾಸಾಗರದಲ್ಲಿ ನಾವು ಚೀನಾದೊಂದಿಗೆ ಪೈಪೋಟಿಗೆ ಇಳಿಯಲಾಗದು. ಅಪಾರ ಖರ್ಚು ವೆಚ್ಚಗಳು ತಗಲುವಂತಹ ಇಂದ್ರಜಾಲಗಳೋ ಎಂಬಂತಹ ಮಿಲಿಟರಿ ರಕ್ಷಣಾ ದೃಶ್ಯಾವಳಿಗಳನ್ನು ಆಗು ಮಾಡಿಕೊಳ್ಳಲಾಗದು. ನಮ್ಮ ವಿದೇಶ ನೀತಿಯನ್ನು ಮಾರ್ಪಡಿಸಿದ ನಂತರ, ನಮ್ಮ ರಾಜತಾಂತ್ರಿಕತೆ ಯಶಸ್ವಿಯಾಗುತ್ತದೆಂದು ಊಹಿಸಿಕೊಳ್ಳಲಾಗದು.

ಮೋದಿಯವರ ವಿದೇಶ ನೀತಿಯು ಸುಕ್ಕುಗಟ್ಟಿದೆ ಮತ್ತು ಅತಿ ಆಡಂಬರದಿಂದ ಕೂಡಿದೆ. ಅದು ಸೌಮ್ಯವಾಗಿರಬೇಕು ಮತ್ತು ತಾಳ್ಮೆಯಿಂದ ಕೂಡಿರಬೇಕು. ಬೇರೆ ಬೇರೆ ದೇಶಗಳಲ್ಲಿ ಅದ್ದೂರಿಯ ಸಭೆ ಸಮಾರಂಭಗಳನ್ನು ಏರ್ಪಡಿಸಲು ಮೋದಿ ಸರ್ಕಾರವು ಸಾವಿರಾರು ಕೋಟಿ ರೂ ಗಳನ್ನು ಖರ್ಚುಮಾಡುತ್ತಿದೆ. ಇವೆಲ್ಲ ಹಿಂದೆಂದೂ ಆಚರಿಸದ, ಕಂಡರಿಯದ ಕೇಳರಿಯದ ಕ್ರಮಗಳು. ಮೂರು ಟ್ರಿಲಿಯನ್ ಗಾತ್ರದ ಒಂದು ಅರ್ಥವ್ಯವಸ್ಥೆಯು ತನ್ನ ಇತಿ ಮಿತಿಗಳನ್ನು ಅರ್ಥಮಾಡಿಕೊಳ್ಳುವುದನ್ನು ಕಲಿಯಬೇಕು. ಅಂಧ ಶ್ರದ್ಧೆ ಮತ್ತು ನಂಬಿಕೆಗಳಷ್ಟೇ ಒಂದು ಪರಿಪಕ್ವ ಕಾರ್ಯನೀತಿಗೆ ಆಧಾರವಾಗಲಾರವು. ಮೋದಿಯವರ ವಿದೇಶ ನೀತಿಯ ಸಮಸ್ಯೆಯೆಂದರೆ, ಅದು, ದೇಶೀಯವಾಗಿ ಕಡಿಮೆ ಸಾಮರ್ಥ್ಯದ ಆಯುಧ ಮತ್ತು ಮದ್ದುಗುಂಡುಗಳನ್ನು ತಯಾರಿಸುವ ಮಧ್ಯಮ ಬಲದ ದೇಶವೊಂದಕ್ಕೆ ಹೊರಲಾರದಷ್ಟು ಭವ್ಯ ಪ್ರಮಾಣದ್ದು.

ಬಲಪಂಥದ ಸಮಸ್ಯೆಯೆಂದರೆ, ಅದು ಬಲ ಪ್ರಯೋಗ ಮಾಡುವ ಇಚ್ಛಾಶಕ್ತಿಯನ್ನು ರಾಷ್ಟ್ರ ಗೌರವದೊಂದಿಗೆ ತಳುಕುಹಾಕುತ್ತದೆ. ದೇಶದ ಸಾರ್ವಭೌಮತೆಯ ಹಿರಿಮೆಯು ಅದು ಹೊಂದಿರುವ ಮಿಲಿಟರಿ ಶಕ್ತಿ ಮತ್ತು ಅದರ ಬಲ ಪ್ರದರ್ಶನಗಳಿಗೆ ನೇರವಾಗಿ ಅನುಗುಣವಾಗಿರುತ್ತದೆ ಎಂದು ಬಲಪಂಥ ಭಾವಿಸುತ್ತದೆ. ಆದರೆ, ಇದೇನೂ ಸಾರ್ವತ್ರಿಕವಾಗಿ ಅನ್ವಯವಾಗುವ ನಿಯಮವಲ್ಲ ಎಂಬುದು ಅದರ ಜಾಣ ಮರೆವು.

ತನ್ನ ಶಸ್ತ್ರಾಸ್ತ್ರಗಳ ಅಗತ್ಯವನ್ನು ಮತ್ತು ಸಂಪರ್ಕ-ಸಾಧನಗಳನ್ನು ಹೊರ ದೇಶಗಳಿಂದ ಪೂರೈಸಿಕೊಳ್ಳುವ ಮಧ್ಯಮ ಬಲದ ದೇಶ ತಾನೊಂದು ಗಟ್ಟಿ ಶಕ್ತಿಯೆಂದು ತೋರಿಸುವ ಅದರ ಆಕಾಂಕ್ಷೆ ಹೆಚ್ಚಿದಷ್ಟು ಅದರ ಸಾರ್ವಭೌಮತ್ವ ಕುಗ್ಗುತ್ತದೆ. ರಾಷ್ಟ್ರ ಹಿತವನ್ನು ಕಾಪಾಡುವ ಪ್ರಯತ್ನಗಳು ಅವಾಸ್ತವಿಕವಾಗಿದ್ದರೆ, ದೇಶವು ಹೆಚ್ಚು ಪರಾಧೀನವೂ ಮತ್ತೂ ಬೇಧ್ಯವೂ ಆಗುತ್ತದೆ.

ತಾನೊಬ್ಬ ಜನ ಬೆಂಬಲದಿಂದ ಪ್ರವರ್ಧಮಾನಕ್ಕೆ ಬರುತ್ತಿರುವ ಜಾಗತಿಕ ಬಲಪಂಥದ ಅಗ್ರಮಾನ್ಯ ನಾಯಕ ಎಂದು ಮೋದಿಯವರು ಭಾವಿಸಿರಬಹುದು. ಆದರೆ, ಅವರು ತಾನು ಸಾಮ್ರಾಜ್ಯಶಾಹಿಯ ಸುಳಿಯಲ್ಲಿ ಸಿಕ್ಕಿಕೊಂಡಿದ್ದೇನೆ ಮತ್ತು ವಿಶ್ವದಲ್ಲಿ ಅಮೇರಿಕಾದ ಯಜಮಾನಿಕೆಯನ್ನು ಬಲಪಡಿಸುವುದೇ ತನಗಿಗಿರುವ ಏಕೈಕ ಆಯ್ಕೆ ಎಂಬುದನ್ನು ಅರ್ಥಮಾಡಿಕೊಂಡಿಲ್ಲ.



ಹಾಸನ: ಟಿಪ್ಪು ಇತಿಹಾಸ ಸಂರಕ್ಷಣಾ ಸಮಿತಿಯಿಂದ ಟಿಪ್ಪು ಜಯಂತಿ

ರಾಜಕೀಯ ಅಜೆಂಡಾಗಳ ಆಧಾರದ ಮೇಲೆ ಇತಿಹಾಸವನ್ನು ಮರುವ್ಯಾಖ್ಯಾನ ಮಾಡುತ್ತಿರುವುದರಿಂದ ಇತಿಹಾಸವು ತಪ್ಪುತಪ್ಪಾಗಿ ಕಾಣಿಸುತ್ತಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಎಚ್.ಆರ್. ನವೀನ್‌ಕುಮಾರ್ ಅಭಿಪ್ರಾಯಪಟ್ಟರು.

ಟಿಪ್ಪು ಇತಿಹಾಸ ಸಂರಕ್ಷಣಾ ಸಮಿತಿ, ಹಾಸನ ಇವರು ಹಾಸನದ ಆರ್.ಸಿ.ರಸ್ತೆಯಲ್ಲಿರುವ ಸಿಐಟಿಯು ಕಚೇರಿ ಶ್ರಮದಲ್ಲಿ ಆಯೋಜಿಸಿದ್ದ ಮೈಸೂರು ಹುಲಿ ಟಿಪ್ಪು ಸುಲ್ತಾನ್ ಅವರ ಜಯಂತಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತಿದ್ದರು. ಟಿಪ್ಪುವನ್ನು ಅರ್ಥ ಮಾಡಿಕೊಳ್ಳಲು ಪೂರ್ವಾಗ್ರಹವಿಲ್ಲದ ಐತಿಹಾಸಿಕ ಪ್ರಜ್ಞೆ ಇರಬೇಕು. ಜೊತೆಗೆ ರಾಜಕೀಯ ಪಕ್ಷದ ಆಲೋಚನೆ ಅಡಿಯಲ್ಲಿ ಇತಿಹಾಸವನ್ನು ನೋಡಿದರೆ ಇತಿಹಾಸವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಾಗದು. ಇಂದು ರಾಜಕೀಯ ಅಧಿಕಾರ ನಡೆಸುತ್ತಿರುವವರು ಅವರ ರಾಜಕೀಯ ಪಕ್ಷದ ಆಲೋಚನೆಯಂತೆ ಇತಿಹಾಸವನ್ನು ನೋಡುತ್ತಿರುವ ಕಾರಣಕ್ಕಾಗಿ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ದುಡಿದ ಟಿಪ್ಪು ತಪ್ಪುತಪ್ಪಾಗಿ ಕಾಣಿಸುತ್ತಿದ್ದಾರೆ ಎಂದು ಅಭಿಪ್ರಾಯಪಟ್ಟರು.



300 ವರ್ಷಗಳ ಹಿಂದಿನ ಕಾಲಘಟ್ಟವನ್ನು ಇಂದು ನಿಂತು ನೋಡದೆ ಅಂದಿನ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಐತಿಹಾಸಿಕ ಅಂಶಗಳನ್ನು ಅರ್ಥಮಾಡಿಕೊಳ್ಳದೆ ಇಂದಿನ ಅಂಶಗಳ ಮೇಲೆ ಅಥವಾ ಇಂದು ಅಂಶದ ಮೇಲೆ ನೋಡಿದರೆ ಅದು ಇತಿಹಾಸಕ್ಕೆ ಮಾಡುವ ಅಪಚಾರ. ಹೈದರಾಲಿ ತನ್ನ ಅಂತಿಮಕಾಲದಲ್ಲಿ ಬರೆದ ಪತ್ರದ ಆಧಾರದಲ್ಲಿ ಅತ್ಯಂತ ಜನಪರ ಆಡಳಿತ ನಡೆಸಿದ ಟಿಪ್ಪು ಇಂದು ಖಳನಾಯಕನನ್ನಾಗಿ ಮಾಡುತ್ತಿರುವ ಹಿಂದೆ ಸ್ಥಾಪಿತ ಹಿತಾಸಕ್ತಿಗಳ ದ್ವೇಷವಡಗಿದೆ. ಬ್ರಿಟಿಷರು ಭಾರತದಲ್ಲಿ ತಮ್ಮ ಸುವರ್ಣಯುಗ ಆರಂಭವಾಯಿತು ಎಂದು ಭಾವಿಸುತ್ತಿರುವಾಗಲೇ ಮೈಸೂರಲ್ಲಿ ಟಿಪ್ಪು ಬ್ರಿಟಿಷರಿಗೆ ಸಿಂಹಸ್ವಪ್ನವಾಗಿ ಕಾಡಿದ. ಇಡೀ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷರ ವಿರುದ್ಧ ಹೋರಾಡುತ್ತಲೇ ಯುದ್ಧಭೂಮಿಯಲ್ಲಿ ಪ್ರಾಣಬಿಟ್ಟ ಏಕೈಕ ರಾಜ ಎಂದರೆ ಅದು ಟಿಪ್ಪು ಮಾತ್ರ ಎಂದರು.ಡ

ಟಿಪ್ಪು ತನ್ನ ಆಡಳಿತ ಅವಧಿಯಲ್ಲಿ ಜಾರಿಗೊಳಿಸಿದ ಭೂಮಿ ಹಂಚಿಕೆ, ತೆರಿಗೆ ಸುಧಾರಣೆ ಮತ್ತಿತರ ಯೋಜನೆಗಳಿಂದ ಬಹುಸಂಖ್ಯಾತ ಜನರು ಲಾಭ ಪಡೆದುಕೊಂಡರು. ಟಿಪ್ಪುವಿನ ಆಡಳಿತದಲ್ಲಿ ಧರ್ಮನಿರಪೇಕ್ಷವಾಗಿ ಆಡಳಿತ ನಡೆಸಿದ ಎನ್ನುವುದಕ್ಕೆ ನೂರಾರು ಸಾಕ್ಷಿಗಳಿವೆ. ಟಿಪ್ಪುವನ್ನು ಕೆಲವರು ಮತಾಂಧ ಎಂದು ಟೀಕಿಸುತ್ತಿರುವುದು ಕೇವಲ ಒಂದೆರಡು ಅಂಶಗಳ ಆಧಾರದ ಮೇಲೆ. ಮೈಸೂರು ಸಂಸ್ಥಾನದ ಆಡಳಿತಕ್ಕೆ ಒಳಗಿದ್ದುಕೊಂಡೇ ಬ್ರಿಟಿಷರಿಗೆ ಸಹಾಯ ಮಾಡಿದವರ ಮೇಲೆ ಟಿಪ್ಪು ಓರ್ವ ರಾಜನಾಗಿ ಕ್ರಮ ತೆಗೆದುಕೊಂಡಿದ್ದಾನೆ. ಅದು ಇಂದಿಗೂ ಸರ್ಕಾರಗಳು ನಡೆದುಕೊಳ್ಳುವ ಕ್ರಮವೇ ಆಗಿದೆ. ಮೈಸೂರು ಸಂಸ್ಥಾನದಲ್ಲಿ ಪ್ರಮುಖ ಹುದ್ದೆಗಳಲ್ಲಿ ಮುಸ್ಲಿಮೇತರೇ ಆಗಿದ್ದರು ಎನ್ನುವುದನ್ನು ಕಾಣಬಹುದು. ಅವನ ವ್ಯಕ್ತಿತ್ವವನ್ನು ಮಂಡ್ಯ ಭಾಗದ ಜನರು ಲಾವಣಿಗಳನ್ನು ಕಟ್ಟಿ ಹಾಡುತ್ತಿರುವುದು ಸಾಕ್ಷಿಯಾಗಿದೆ ಎಂದರು.

ಆಜಾದ್ ಟಿಪ್ಪು ಸಂಘರ್ಷ ಸಮಿತಿಯ ಮುಬಷೀರ್ ಅಹಮದ್ ಅಧ್ಯಕ್ಷತೆ ವಹಿಸಿದ್ದರು. ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಎಂ.ಜಿ.ಪೃಥ್ವಿ ಕಾರ್ಯಕ್ರಮ ನಿರ್ವಹಿಸಿದರು. ಕರವೇ ಸ್ವಾಭಿಮಾನಿ ಸೇನೆ ಜಿಲ್ಲಾಧ್ಯಕ್ಷ ಹರೀಶ್ ಗೌಡ, ಕರ್ನಾಟಕ ಟಿಪ್ಪು ಸಂಘರ್ಷ ಸಮಿತಿಯ ಸೈಯ್ಯದ್ ಅನ್ಸರ್, ಎಸ್‌ಎಫ್‌ಐ ಜಿಲ್ಲಾಧ್ಯಕ್ಷೆ ಆಶಾ, ಡಿವೈಎಫ್‌ಐ ಶಶಿ ಹಾಗು ಸಿಐಟಿಯು ಮುಖಂಡರಾದ ಜಿ.ಪಿ ಸತ್ಯನಾರಾಯಣ ಉಪಸ್ಥಿತಿತರಿದ್ದರು. ಅಮೀರ್ ಜಾನ್, ಅಕ್ರಮ್, ಕೆ.ಎಸ್. ಮಂಜುನಾಥ್ ಇನ್ನಿತರರು ಭಾಗವಹಿಸಿದ್ದರು.

ಕೆಜಿಎಫ್ ನಗರಸಭೆ ಚುನಾವಣೆ ಕಾಮ್ರೇಡ್ ಪಿ. ತಂಗರಾಜು ಅವರಿಗೆ ಗೆಲುವು



ಸಿಪಿಐಎಂ ಪಕ್ಷದ ಕೋಲಾರ ಜಿಲ್ಲಾ ಸಮಿತಿ ಸದಸ್ಯರು ಮತ್ತು ಯುವಜನ ಸಂಘಟನೆ ಡಿವೈಎಫ್‌ಐ ನ ಜಿಲ್ಲಾಧ್ಯಕ್ಷರೂ ಆದ ಕಾಮ್ರೇಡ್ ಪಿ.ತಂಗರಾಜ್ ಅವರು ಕೆಜಿಎಫ್ ನಗರ ಸಭೆ ಚುನಾವಣೆಯಲ್ಲಿ ವಾರ್ಡ್ ನಂ: 08 ಗಿಲ್ಬರ್ಟ್ಸ್ ನಲ್ಲಿ ಗೆಲುವು ಸಾಧಿಸಿದ್ದಾರೆ.

ಗಿಲ್ಬರ್ಟ್ಸ್ ವಾರ್ಡಿನ ಜನತೆ ಸತತವಾಗಿ ಐದನೇ ಬಾರಿ ಸಿಪಿಐಎಂ ಪಕ್ಷದ ಅಭ್ಯರ್ಥಿ ಕಾಂ. ಪಿ. ತಂಗರಾಜು ಅವರು ಗೆ ಲುವು ಸಾಧಿಸಿದ್ದಾರೆ.

ಎಲ್ಲಾ ರಾಷ್ಟ್ರೀಯ ಭಾಷೆಗಳಿಗೂ ಸಮಾನ ಸ್ಥಾನಮಾನ ಸಿಗಬೇಕು.... ಪುಟ 16 ರಿಂದ

ಹಾಗೂ ರಾಷ್ಟ್ರೀಯತೆಗಳ ಮೂಲಕ ನಮ್ಮ ದೇಶವು ಹೊಂದಿರುವ ಬಹುತ್ವವು ಸಂಘಪರಿವಾರದ ಕುತಂತ್ರಗಳಿಗೆ ಅಡೆತಡೆ ಒಡ್ಡುತ್ತಿದೆ ಎಂದು ತೆಲಂಗಾಣದ ಕಾರ್ಯದರ್ಶಿ ವೀರಭದ್ರಂ ತಿಳಿಸಿದರು.

ಕರ್ನಾಟಕ ರಾಜ್ಯದ ಪಕ್ಷವನ್ನು ಪ್ರತಿನಿಧಿಸಿ ಮಾತನಾಡಿದ ಸುರೇಂದ್ರರಾವ್ ಅವರು "ಜನರ ನಿಜವಾದ ಕಿತ್ತುತಿನ್ನುವ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಅಸಮರ್ಥವಾಗಿರುವ ಕೇಂದ್ರ ಸರ್ಕಾರವು ಭಾಷೆಯನ್ನು ದುರ್ಬಳಕೆ ಮಾಡಿಕೊಂಡು ಜನರ ಐಕ್ಯತೆಯನ್ನು ಒಡೆಯಲು ಪ್ರಯತ್ನಿಸುತ್ತಿದೆ. ಈ ನಿಟ್ಟಿನಲ್ಲಿ ಹಿಂದಿ ಹೇರಿಕೆಯನ್ನು ನಾವು ಪರಿಗಣಿಸಬೇಕು. ಇದರ ಹಿಂದೆ ಒಂದು ರಾಜಕೀಯ ಇದೆ, ಅದು 'ಹಿಂದಿ, ಹಿಂದು ಮತ್ತು ಹಿಂದೂರಾಷ್ಟ್ರ' ಎಂಬ ಭಾವನಾತ್ಮಕ ವಿಷಯವನ್ನು ಮುಂದು ಮಾಡಿ ಸಾಂಸ್ಕೃತಿಕ ರಾಜಕೀಯ ಮಾಡುತ್ತಾ ಹಿಂದಿ ಭಾಷೆಯನ್ನು ದೇಶದ ಎಲ್ಲಾ ರಾಜ್ಯಗಳ ಮೇಲೆ ಹೇರುತ್ತಿದೆ. ಜನಸಮುದಾಯವು ಈ ಭಾಷಾ ಜಂಜಾಟದಲ್ಲಿ ಮುಳುಗಿ ತನ್ನ ನಿಜವಾದ ಸಮಸ್ಯೆಗಳನ್ನು ಮರೆತುಬಿಡಲಿ ಎಂಬ ಸರ್ಕಾರದ ಹುನ್ನಾರ ಇದಾಗಿದೆ ಎಂದರು. ಕರ್ನಾಟಕದಲ್ಲಿ ಕೇಂದ್ರ ಸರ್ಕಾರಿ ಸಂಸ್ಥೆಗಳಾದ ಬ್ಯಾಂಕ್, ಅಂಚೆ ಕಛೇರಿ, ಇತ್ಯಾದಿಗಳು ತಮ್ಮ ದಿನನಿತ್ಯದ ವ್ಯವಹಾರಗಳಲ್ಲಿ ಹಿಂದಿ ಬಳಸುವುದರ ಮೂಲಕ ಕನ್ನಡಗ್ರಾಹಕರ ಕೋಪಕ್ಕೆ ಒಳಗಾಗಿವೆ. ಮೆಟ್ರೋ ರೈಲುಗಳಲ್ಲಿ ಪ್ರಕಟಣೆಗಳನ್ನು ಮತ್ತು ಬೋರ್ಡುಗಳಲ್ಲಿ ಹಿಂದಿ ಭಾಷೆಯ ಬಳಕೆ ವಿರುದ್ಧ ವ್ಯಾಪಕ ಹೋರಾಟ ನಡೆದು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮಾತ್ರ ವ್ಯವಹಾರ ನಡೆಯುವಂತೆ ಮಾಡಲಾಗಿದೆ. ಈ ಸಮಾವೇಶದ ಸಂದೇಶವನ್ನು ದೇಶದ ಎಲ್ಲಾ ರಾಜ್ಯಗಳಿಗೂ ವಿಸ್ತರಿಸಿ, ಅಖಿಲ ಭಾರತ ಮಟ್ಟದಲ್ಲಿ ಕೇಂದ್ರ ಸರ್ಕಾರದ ಕುತಂತ್ರದ ವಿರುದ್ಧ ಹೋರಾಟ ನಡೆಯುವಂತೆ ಮಾಡಬೇಕೆಂದು" ತಿಳಿಸಿದರು.

ತಮಿಳು ವಿಶ್ವವಿದ್ಯಾನಿಲಯದ ಮಾಜಿ ಉಪಕುಲಪತಿ ಎಂ.ರಾಜೇಂದ್ರನ್ "ಮಾನವ ಅಭಿವೃದ್ಧಿಯಲ್ಲಿ ಭಾಷೆಯು ಒಂದು ಪ್ರಮುಖ ಪಾತ್ರ ವಹಿಸುತ್ತದೆ, ಮಾನವೀಯ ಆಧುನಿಕ ಆವಿಷ್ಕಾರಗಳಲ್ಲಿ ಕೂಡ ಭಾಷೆಯ ಪ್ರಭಾವ ಇರುತ್ತದೆ. ಈಗ ಹಿಂದಿ ಭಾಷೆಗೆ ಸಿಗುತ್ತಿರುವ ವಿಶೇಷ ಸವಲತ್ತುಗಳನ್ನು ಸಂವಿಧಾನದ 8 ನೇ ಅನುಬಂಧವು ಮಾನ್ಯ ಮಾಡಿರುವ



ಎಲ್ಲಾ 22 ಭಾಷೆಗಳಿಗೂ ವಿಸ್ತರಿಸಬೇಕು. 2019 ರ ರಾಷ್ಟ್ರೀಯ ಶಿಕ್ಷಣ ನೀತಿ ಕರಡಿನಲ್ಲಿ ಹಿಂದಿಗೆ ಮತ್ತು ಸಂಸ್ಕೃತಕ್ಕೆ ಪ್ರಾಶಸ್ತ್ಯ ನೀಡಿರುವುದನ್ನು ನಿಲ್ಲಿಸಬೇಕು, ಇತರ ಭಾಷೆಗಳಿಗೂ ಸಮಾನ ಅವಕಾಶ ಇರಬೇಕು" ಎಂದು ಮಾತನಾಡಿದರು.

ದಿನಗೂಲಿ ನೌಕರರಿರಲಿ ಅಥವಾ ವಿದ್ಯಾವಂತರಿರಲಿ ಎಲ್ಲರ ಬದುಕಿನಲ್ಲಿಯೂ ಭಾಷೆ ಪ್ರಮುಖ ಸ್ಥಾನ ಪಡೆದಿದೆ ಎಂದು ಕೆ.ಬಾಲಭಾರತಿ ಹೇಳಿದರು. ಮಾರ್ಕ್ಸ್‌ವಾದಿಗಳಾದ ನಾವು, ನಮ್ಮ ಮಾತೃಭಾಷೆಗಳು ಅಭಿವೃದ್ಧಿಯಾಗದಂತೆ ಧೋರಣೆ ಹೊಂದಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೀತಿಗಳನ್ನು ನೋಡುತ್ತಾ ಸುಮ್ಮನೆ ಕುಳಿತುಕೊಳ್ಳುವುದು ಸಾಧ್ಯವಿಲ್ಲ.

ಒಂದುದೇಶ, ಒಂದು ಭಾಷೆ, ಒಂದು ಸಂಸ್ಕೃತಿ ಎನ್ನುವ ಆರ್.ಎಸ್.ಎಸ್.ನ ಘೋಷಣೆಯ ಮೂಲಕ ಜನರನ್ನು ಅಧೀನರನ್ನಾಗಿಸಿಕೊಳ್ಳುವ ತಂತ್ರವನ್ನು ಬಿಜೆಪಿ ಸರ್ಕಾರ ಅನುಸರಿಸುತ್ತಿದೆ. ಈ ಧೋರಣೆಯ ಮೂಲಕ ದೇಶದ ಇತರ ಭಾಷೆಗಳನ್ನು ನಾಶ ಮಾಡುವ ಹುನ್ನಾರ ಇದೆ ಎಂದು ಅಧ್ಯಕ್ಷತೆ ವಹಿಸಿ ಮಾತನಾಡಿದ ಕೆ.ಬಾಲಕೃಷ್ಣನ್ ಹೇಳಿದರು. ಹಿಂದಿ ಹೇರಿಕೆಯ ವಿರುದ್ಧ ಮತ್ತು ನಮ್ಮ ಮಾತೃಭಾಷೆಯನ್ನು ಸಂರಕ್ಷಿಸಲು ನಾವೆಲ್ಲರೂ ಒಟ್ಟಾಗಿ ಹೋರಾಟ ಮಾಡಬೇಕೆಂದು ವಿನಂತಿ ಮಾಡಿದರು.

ಕರಡು ನಿರ್ಣಯವನ್ನು ಸಮಾವೇಶವು ಸರ್ವಾನುಮತದಿಂದ ಅಂಗೀಕರಿಸಿತು. ಈ ಹಿಂದಿ ಹೇರಿಕೆಯ ವಿರುದ್ಧ ಮತ್ತು ಮಾತೃಭಾಷೆ ರಕ್ಷಣೆಗೆ ಒಂದು ಪ್ರಬಲವಾದ ಚಳುವಳಿಯನ್ನು ನಡೆಸಲು ದೇಶದ ಎಲ್ಲಾ ವಿಭಾಗಗಳ ಜನರು ಕೈಜೋಡಿಸಬೇಕೆಂದು ಸಮಾವೇಶ ಕರೆ ನೀಡಿತು. •


ಶಿಕ್ಷಣ ಸಚಿವರ ರಾಜಿನಾಮೆಗೆ ಎಸ್‌ಎಫ್‌ಐ ಒತ್ತಾಯ...... ಪುಟ 5 ರಿಂದ

ಯಾವುದೇ ಪ್ರಸ್ತಾಪ ಸರಕಾರದ ಅಥವಾ ಶಿಕ್ಷಣ ಸಚಿವರ/ ಇಲಾಖೆಯ ಗಮನಕ್ಕೆ ಇರದೆ ಅಂತಿಮವಾಗುವುದಿಲ್ಲ. ಸುರೇಶ್ ಕುಮಾರ್ ಹಾಗೂ ಬಿಜೆಪಿಯವರಿಗೆ ಸಂವಿಧಾನದ ಬಗ್ಗೆ ಗೌರವ ಇಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಹಾಗಾಗಿ ಈ ವಿವಾದಕ್ಕೆ ಸುರೇಶ್ ಕುಮಾರ ಅವರೇ ನೇರ ಹೊಣೆಯಾಗಿರುತ್ತಾರೆ. ವಿವಾದಾತ್ಮಕ ಹೇಳಿಕೆಯನ್ನು ಬರೆಯುವುದರ ಮೂಲಕ ಸಮಾಜದ ಶಾಂತಿ ಸುವ್ಯವಸ್ಥೆಗೆ ಧಕ್ಕೆ ತರಲು ಯತ್ನಿಸಿದ ಸಿಎಂಸಿಎ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಿ ಸಂಸ್ಥೆಯ ಅಧಿಕಾರಿಗಳು, ಶಿಕ್ಷಣ ಇಲಾಖೆಯ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಜರುಗಿಸಬೇಕಿದೆ ಮತ್ತು ಶಿಕ್ಷಣ ಸಚಿವರಾದ ಸುರೇಶ್ ಕುಮಾರ್ ಅವರು ಕೂಡಲೇ ರಾಜಿನಾಮೆ ನೀಡಬೇಕೆಂದು ಎಸ್‌ಎಫ್‌ಐ ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸುತ್ತದೆ.

ಬೊಲಿವಿಯಾದಲ್ಲೂ ಅಮೆರಿಕ ಪ್ರಾಯೋಜಿತ ಕ್ಷಿಪ್ರಕ್ರಾಂತಿ

ಜಗದ ಸುತ್ತ

ನಾಗರಾಜ ನಂಜುಂಡಯ್ಯ



ಬೊಲಿವಿಯಾದ ಅಧ್ಯಕ್ಷರಾಗಿ ಚುನಾಯಿತರಾದ ಇವೊ ಮೊರಲೆಸ್ ಅವರನ್ನು ಕೆಲವೇ ಶ್ರೀಮಂತ ಕುಳಗಳನ್ನು ಪ್ರತಿನಿಧಿಸುವ ಶಕ್ತಿಗಳ ಪಡೆಗಳು ನಡೆಸಿದ ಪಿತೂರಿಯಲ್ಲಿ ಪದಚ್ಯುತಗೊಳಿಸಲಾಗಿದೆ. ಇದಕ್ಕೆ ಅಮೆರಿಕ ಸಂಯುಕ್ತ ಸಂಸ್ಥಾನ(ಯುಎಸ್) ನೆರವು ನೀಡಿರುವುದು ಖಾತ್ರಿಯಾಗಿದೆ. ಮೊರಲೆಸ್ ಜೀವಕ್ಕೆ ಗಂಭೀರ ಬೆದರಿಕೆ ಒಡ್ಡಿದ ಕಾರಣ, ಅವರು ಮೆಕ್ಸಿಕೊದಲ್ಲಿ ಆಶ್ರಯ ಪಡೆಯ ಬೇಕಾಗಿದೆ. ಲ್ಯಾಟಿನ್ ಅಮೆರಿಕಾದಲ್ಲಿ ಪ್ರಗತಿಪರ, ಎಡ ಒಲವಿನ ಅಧ್ಯಕ್ಷರನ್ನು ಉರುಳಿಸಲು ಯುಎಸ್ ಹಸ್ತಕ್ಷೇಪ ಮಾಡಿ ನೆರವು ನೀಡಿದ ದೇಶಗಳ ದೀರ್ಘ ಪಟ್ಟಿಗೆ ಬೊಲಿವಿಯಾ ಈಗ ಸೇರಿಕೊಂಡಂತಾಗಿದೆ.

ತನ್ನ ಹತ್ತಿರದ ಎದುರಾಳಿ ಕಾರ್ಲೋಸ್ ಮೆಸಾ ಅವರಿಗಿಂತ ಶೇ.10 ರಷ್ಟು ಮತಗಳನ್ನು ಗಳಿಸುವ ಮೂಲಕ ಚುನಾವಣೆಯಲ್ಲಿ ಸ್ಪಷ್ಟವಾಗಿ ಜಯಗಳಿಸಿದ್ದರೂ ಮೊರಲೆಸ್ ಅವರನ್ನು ರಾಜೀನಾಮೆ ನೀಡುವಂತೆ ಒತ್ತಾಯಿಸಲಾಯಿತು. 2003 ರಲ್ಲಿ ಮೂವ್ಮೆಂಟ್ ಟು ಸೋಶಿಯಲಿಸಂ (ಎಮ್.ಎ.ಎಸ್), ವಿರುದ್ಧ ಕೇವಲ 42,242 ಮತಗಳ ಅಂತರದಿಂದ ಮೆಸಾ ಉಪಾಧ್ಯಕ್ಷರಾಗಿ ಗೆದ್ದಿದ್ದರು. ಆದರೆ ಈ ಚುನಾವಣೆಯಲ್ಲಿ ಎಮ್.ಎ.ಎಸ್ ಸುಮಾರು, 6,40,000 ಕ್ಕೂ ಹೆಚ್ಚು ಮತಗಳಿಂದ ಗೆದ್ದಿದೆ. ಇದು ಮೊರಲೆಸ್ ಗೆಲುವು ಸ್ಪಷ್ಟವಾಗಿಲ್ಲ, ಮೋಸ ನಡೆಸಲಾಗಿದೆ ಎನ್ನುವ ಬಲಪಂಥೀಯ ಪ್ರತಿಪಕ್ಷಗಳ ಆಪಾದನೆಯ ಟೊಳ್ಳನ್ನು ಸಾಬೀತು ಮಾಡುತ್ತದೆ.

ಬೊಲಿವಿಯಾದಲ್ಲಿ ಇತ್ತೀಚೆಗೆ ನಡೆದ ಸಂಸತ್ತಿನ ಚುನಾವಣೆಗಳಲ್ಲಿ, ಇವೊ ಮೊರಲ್ಸ್ ಶೇ.46.64 ರಷ್ಟು ಮತಗಳನ್ನು ಪಡೆದು ಸ್ಪಷ್ಟ ಗೆಲುವು ಸಾಧಿಸಿದ್ದರು. ಆದಾಗ್ಯೂ, ಈ ಚುನಾವಣಾ ಪ್ರಕ್ರಿಯೆಯ ವಿರುದ್ಧ ಅಪಪ್ರಚಾರ ನಡೆಸುವುದಕ್ಕಾಗಿಯೇ ವಾಷಿಂಗ್ಟನ್‌ನಲ್ಲಿ ನಡೆದ, 'ಅಮೆರಿಕನ್ ಪ್ರಭುತ್ವಗಳ ಸಂಘಟನೆ' (ಆರ್ಗನೈಸೇಶನ್ ಆಫ್ ಅಮೇರಿಕನ್ ಸ್ಟೇಟ್ಸ್–ಒ.ಎ.ಎಸ್.) ಯ ವಿಶೇಷ ಸಭೆಯಲ್ಲಿ ಬೊಲಿವಿಯಾದಲ್ಲಿ ರಾಜಕೀಯ ಅಸ್ಥಿರತೆ ಉತ್ತೇಜಿಸುವ ಅಭಿಯಾನವನ್ನು ಕೈಗೊಳ್ಳಲಾಗಿದೆ. ಯುಎಸ್ ನ ಈ ರೀತಿಯ ಹಸ್ತಕ್ಷೇಪವನ್ನು ರಾಜಕೀಯ ವಲಯದಲ್ಲಿ ತೀವ್ರವಾಗಿ ಖಂಡಿಸಲಾಗಿದೆ.

ಜನಪ್ರಿಯ ಎಡಪಂಥೀಯ ಅಭ್ಯರ್ಥಿ ಇವೊ ಮೊರಲೆಸ್‌ರ ಗೆಲುವನ್ನು ಹುಸಿಗೊಳಿಸುವ ಪ್ರಯತ್ನದ ಅಭಿಯಾನ ಇದಾಗಿತ್ತು ಎನ್ನಲಾಗಿದೆ. ಒಎಎಸ್ ಮತ್ತು ಅಮೆರಿಕಾವು, "ಸಾರ್ವಭೌಮ ರಾಷ್ಟ್ರ ಗಳ ಅಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ" ಮಾಡುವುದು ಇದರಿಂದ ಬೆಳಕಿಗೆ ಬಂದಿದೆ. ಇದು ಯುಎಸ್ ಸಾಮ್ರಾಜ್ಯಶಾಹಿ ನೀತಿಯ ಭಾಗವಾಗಿದೆ ಮತ್ತು ಜಗತ್ತಿನ ಯಾವುದೇ ಭಾಗದಲ್ಲಿ ಎಡಪಂಥೀಯ ಅಥವಾ ಸೋಶಿಯಲಿಸ್ಟ್ ಒಲವಿನ ಸರ್ಕಾರಗಳು ಸ್ಥಾಪನೆಗೊಂಡರೆ, ಅದನ್ನು ಅಸ್ಥಿರಗೊಳಿಸಿ ತನ್ನ ವಶಕ್ಕೆ ತೆಗೆದುಕೊಳ್ಳುತ್ತದೆ. ಇದು ಜಗತ್ತಿಗೆ ತಿಳಿಯದ ಸಂಗತಿಯೇನಲ್ಲ. ಹಾಗೆಯೇ, ತನ್ನ ಯೋಜಿತ ನವ ಉದಾರಿಕರಣದ ಬ್ಯಾನರ್‌ಗಳನ್ನು ಯಾರು ಎತ್ತಿ ಹಿಡಿದು, ಅದು ಹೇಳಿದ ಹಾಗೆ ಕೇಳುತ್ತಾರೋ, ಅಂತಹ ಸರ್ಕಾರಗಳನ್ನು ಬೆಂಬಲಿಸಿ ತನ್ನ ಅಧೀನದಲ್ಲಿ ಇಟ್ಟು ಕೊಳ್ಳುವುದು ಸಾಮ್ರಾಜ್ಯಶಾಹಿ ಗುಣಲಕ್ಷಣಗಳ ಮತ್ತೊಂದು ಭಾಗ.

ಒಎಎಸ್, ನಿರೀಕ್ಷೆಯಂತೆ, ಸೋತ ಬಲಪಂಥೀಯರೊಂದಿಗೆ ಹೊಂದಾಣಿಕೆ ಮಾಡಿಕೊಂಡಿದೆ. ಮತದಾನದ ವ್ಯವಸ್ಥೆ ಮತ್ತು ಚುನಾವಣಾ ಕಾನೂನುಗಳನ್ನು ಪ್ರಶ್ನಿಸಲು ನಿರ್ಧರಿಸಿದೆ. ಅದು ಸೋತ ಅಭ್ಯರ್ಥಿಯನ್ನು ವಿಜೇತರೆಂದು ಘೋಷಿಸುತ್ತದೆ. ಅಧ್ಯಕ್ಷ ಇವೊ ಮೊರಲೆಸ್ ಇದು ಬೊಲಿವಿಯಾ ಜನರ ವಿರುದ್ಧ ಒಎಎಸ್ ನಡೆಸಿರುವ ಒಂದು ದಾಳಿ ಎಂದಿದ್ದಾರೆ. ಲಾ ಪಾರ್ಝ್ ದಲ್ಲಿರುವ ತನ್ನ ರಾಯಭಾರ ಕಚೇರಿ ಯಿಂದ ಯುಎಸ್ ಸರ್ಕಾರವು ಬಲಪಂಥೀಯ ಪ್ರತಿಪಕ್ಷಗಳಿಗೆ ಮಾರ್ಗದರ್ಶನಗಳನ್ನು ನೇರವಾಗಿ ನೀಡಿದೆ ಎಂದು, ಯುಎಸ್ ನ ಹಸ್ತಕ್ಷೇಪವನ್ನು ಮೊರಲೆಸ್ ಖಂಡಿಸಿದ್ದಾರೆ.

ಒಎಎಸ್ ತನ್ನ ಸಭೆಯಲ್ಲಿ, ಚುನಾವಣೆಯಲ್ಲಿ ಅಕ್ರಮ, ವಂಚನೆ ನಡೆದಿರುವ ಸಾಧ್ಯತೆಗಳು ಇರುವುದರಿಂದ, ಮೊರಲೆಸ್‌ರ ವಿಜಯವನ್ನು ನಿರಾಕರಿಸಿ, ಮರುಎಣಿಕೆ ನಡೆಸಬೇಕೆಂದು, ಅಥವಾ ಮರು ಚುನಾವಣೆ ನಡೆಸಬೇಕೆಂದು ಒತ್ತಾಯಿಸಿತು. ಮೊರಲೆಸ್ ಚುನಾವಣಾ ಮೋಸದ ಪುರಾವೆಗಳನ್ನು ಕೊಡಿ ಎಂದಾಗ ಕೊಡಲಿಲ್ಲ. ಆದರೂ ಮೊರಲೆಸ್ ಮರು ಎಣಿಕೆ ಅಥವ ಮರುಚುನಾವಣೆಗೆ ಒಪ್ಪಿಕೊಂಡಾಗ, ಅವರು ರಾಜೀನಾಮೆ ಕೊಡಬೇಕು, ಮರುಚುನಾವಣೆಯಲ್ಲಿ ಸ್ಪರ್ಧಿಸಬಾರದು ಎಂಬ ಹೊಸದೊಂದು ಬೇಡಿಕೆಯನ್ನು ಇಡಲಾಯಿತು. ಅಂದರೆ ಅವರ ನಿಜವಾದ ಉದ್ದೇಶ ಇವೊ ಮೊರಲೆಸ್ ಮತ್ತೆ ಅಧ್ಯಕ್ಷರಾಗಬಾರದು ಎಂದೇ ಆಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

ನಿಕರಾಗುವಾದ ಪ್ರತಿನಿಧಿ ರುತ್ ತಫಿಯಾ, ಹಾಗೂ ಮೆಕ್ಸಿಕನ್ ರಾಯಭಾರಿ ಲುಜ್ ಎಲೆನಾ ಬಾನೋಸ್‌ರವರು ಇದಕ್ಕೆ ಪ್ರತಿಕ್ರಿಯಿಸುತ್ತಾ, "ಸಾರ್ವಭೌಮ ರಾಷ್ಟ್ರಗಳ ಅಂತರಿಕ ವ್ಯವಹಾರಗಳಲ್ಲಿ ಮಧ್ಯಪ್ರವೇಶ ಅಥವಾ ನೇರ ಹಸ್ತಕ್ಷೇಪ ನಡೆಸಲು ಒಎಎಸ್ ಗೆ ಯಾವುದೇ ಅಧಿಕಾರವಿಲ್ಲ" ಎಂದು ಎಚ್ಚರಿಸುತ್ತಾ,, ಒಎಎಸ್ ಸಭೆಯಲ್ಲಿ ಮಂಡಿಸಿದ ಚುನಾವಣಾ ದಾಖಲೆಗಳ ವಿಶ್ಲೇಷಣೆ ಸರಿಯಿಲ್ಲ ಎಂದು ತಿಳಿಸಿದ್ದಾರೆ.

ಇದರೊಂದಿಗೆ, ಅಮೆರಿಕನ್ ನೆಟ್‌ವರ್ಕ್, ಜುಬಿಲಿಯೊ ಸುರ್, ಇತ್ತೀಚೆಗೆ ತನ್ನ ವೆಬ್‌ಸೈಟ್‌ನಲ್ಲಿ, ಹಲವಾರು ಲೇಖನಗಳನ್ನು ಪ್ರಕಟಿಸಿದೆ. ಬೊಲಿವಿಯಾದ ಚುನಾವಣಾ ಪ್ರಕ್ರಿಯೆಯಲ್ಲಿ, ಯುಎಸ್ ನ ನೇರ ಹಸ್ತಕ್ಷೇಪವನ್ನು ಬಹಿರಂಗ ಪಡಿಸಿದೆ. ಇದರಲ್ಲಿ, ಪ್ರಮುಖವಾಗಿ, ಶಸ್ತ್ರಾಸ್ತ್ರಗಳನ್ನು ತುಂಬಿದ ಹಡಗುಗಳು, ನಿರ್ದಿಷ್ಟವಾಗಿ ಯುಎಸ್ ನ ಮಿಯಾಮಿ ಯಿಂದ, ಚಿಲಿಯ 'ಹಡಗು ಬಂದರು' ಇಕ್ವಿಕ್ ಗೆ ಪ್ರಯಾಣಿಸುತ್ತಿವೆ ಎಂಬ ನಿರ್ದಿಷ್ಟ ವರದಿಯನ್ನು ಪ್ರಕಟಿಸಿದೆ.

ಜುಬಿಲಿಯೊ ಸುರ್ ರವರ, ಅಮೆರಿಕನ್ ವೆಬ್‌ಸೈಟ್‌ನಲ್ಲಿ ಪ್ರಕಟವಾದ ಇತರ ಲೇಖನಗಳು ಯುಎಸ್ ರಾಜತಾಂತ್ರಿಕ ಕೇಂದ್ರ ಕಚೇರಿಯು, ರಹಸ್ಯ ಸಹಯೋಗಿಗಳ ಮೂಲಕ ಶಸ್ತ್ರಾಸ್ತ್ರ ಮತ್ತು ಯುದ್ಧ ಸಾಮಾಗ್ರಿಗಳ ವಿತರಣೆಯನ್ನು ನಿರಂತರವಾಗಿ ನಡೆಸುತ್ತಿದೆ ಎಂದು ಸೂಚಿಸುತ್ತವೆ. ಅದೇ ರೀತಿ, ಅವರು ಬೊಲಿವಿಯಾನ್ ವಿರೋಧ ಪಕ್ಷದ ಕೇಂದ್ರ ನಾಯಕರನ್ನು ಭೇಟಿ ಮಾಡಿ ಯೋಜಿತ ಹಿಂಸಾಚಾರ ನಡೆಸಲು, ಹಣಕಾಸು ಒದಗಿಸುವ ಬಗ್ಗೆ, ಅವರನ್ನು ಉದ್ದೇಶಿಸಿ ಸಲಹೆ ನೀಡುತ್ತಾರೆ ಎಂಬ ವರದಿಗಳು ಪ್ರಕಟಗೊಂಡಿವೆ.

ಒಂದೆಡೆ, ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಎರಡೂ ಸದನಗಳ ಅಧ್ಯಕ್ಷರುಗಳ ರಾಜೀನಾಮೆಯಿಂದ ಉಂಟಾದ ನಿರ್ವಾತದಲ್ಲಿ ಕಾಲಿಡಲು ಪ್ರತಿಪಕ್ಷದ ಸೆನೆಟರ್ ಮತ್ತು ಸೆನೆಟ್ ಎರಡೂ ಭಾಷಣಕಾರರ ರಾಜೀನಾಮೆಯಿಂದ ಉಂಟಾದ ಬಲವಂತದ ಕಾಲಿಡಲು ಪ್ರಯತ್ನಿಸುತ್ತಿದ್ದ ವಿರೋಧ ಪಕ್ಷದ ಸೆನೆಟರ್ ಜೀನೈನ್ ಅನೆಜ್ ತಮ್ಮನ್ನು ತಾವೇ ಬೊಲಿವಿಯಾದ ಅಧ್ಯಕ್ಷರೆಂದು ಘೋಷಿಸಿಕೊಂಡಿದ್ದಾರೆ. ಆದರೆ ಈ ಘೋಷಣೆಯು, ಸಂವಿಧಾನದ ಅಗತ್ಯತೆಗಳನ್ನು ಉಲಂಘಿಸಿದೆ. ಈ ಸಂದರ್ಭದಲ್ಲಿ ಕೇವಲ ಪ್ರತಿಪಕ್ಷಗಳ ಸದಸ್ಯರಿದ್ದರು, ಬಹುಮತದಲ್ಲಿರುವ ಎಂಎಎಸ್‌ನ ಸದಸ್ಯರು ಭದ್ರತೆಯ ಅಭಾವದಿಂದಾಗಿ ಹಾಜರಾಗಲು ಆಗಿರಲಿಲ್ಲ. ಅಂದರೆ, ಸಂಸತ್ತಿನಲ್ಲಿ ಕೋರಂನ ಕೊರತೆ ಇತ್ತು. ಆದ್ದರಿಂದ ಈ ಹೊಸ ಅಧ್ಯಕ್ಷರ ಘೋಷಣೆ ಅಸಿಂಧು ಎನ್ನಲಾಗಿದೆ.



ತೀವ್ರ ದಮನದ ನಡುವೆಯೂ ಇವೊ ಮೊರಲೆಸ್ ಪದಚ್ಯುತಿಗೆ ಜನಗಳ ತೀವ್ರ ಪ್ರತಿರೋಧ ವ್ಯಕ್ತಗೊಂಡಿದೆ.

ಆಲ್ಬರ್ಟೊ ಫರ್ನಾಂಡೀಸ್ ಅರ್ಜೆಂಟೀನಾದ ಹೊಸ ಅಧ್ಯಕ್ಷ:

ಅಕ್ಟೋಬರ್‌ನಲ್ಲಿ ಅರ್ಜೆಂಟೀನಾ ಸಂಸತ್ತಿಗೆ ನಡೆದ ಚುನಾವಣೆಯಲ್ಲಿ ಅಲ್ಬರ್ಟೊ ಫರ್ನಾಂಡೀಸ್ ಶೇ.48.03 ರಷ್ಟು ಮತಗಳನ್ನು ಪಡೆದು ಗೆಲುವು ಸಾಧಿಸಿದ್ದಾರೆ. ಅವರ ಪ್ರತಿಸ್ಪರ್ಧಿ ಪ್ರಸ್ತುತ ಅಧ್ಯಕ್ಷ ಮ್ಯಾಕ್ರಿ ಶೇ.40.44 ರಷ್ಟು ಮತಗಳನ್ನು ಪಡೆದು ಸೋತಿದ್ದಾರೆ. 1983 ರಲ್ಲಿ ಅರ್ಜೆಂಟೀನಾ ಪ್ರಜಾಪ್ರಭುತ್ವವನ್ನು ಮರಳಿ ಪಡೆದ ನಂತರ, ಫರ್ನಾಂಡೀಸ್ ದೇಶದ ಒಂಭತ್ತನೇ ಅಧ್ಯಕ್ಷರಾಗಿರುತ್ತಾರೆ.

ಶೆ.80 ರಷ್ಟು ಮತದಾರರು ಈ ಚುನಾವಣೆಯಲ್ಲಿ ಭಾಗವಹಿಸಿದ್ದಾರೆ ಎಂದು ವರದಿಗಳು ಸೂಚಿಸುತ್ತವೆ. ಅರ್ಜೆಂಟೀನಾ "ಅಂತರಾಷ್ಟ್ರೀಯ ಹಣಕಾಸು ನಿಧಿ" (ಐ.ಎಂ.ಎಫ್) ಶರತ್ತುಗಳನ್ನು ಒಪ್ಪಿಕೊಂಡದ್ದರಿಂದ ಆರ್ಥಿಕ ಮತ್ತು ಸಾಮಾಜಿಕ ಬಿಕ್ಕಟ್ಟನ್ನು ಎದುರಿಸುತ್ತಿರುವ ರಾಷ್ಟವಾಗಿ ಚುನಾವಣಾ ಪ್ರಕ್ರಿಯೆಗೆ ಧುಮುಕಿತ್ತು. ಇದನ್ನು ಅಲ್ಲಿನ ಜನರು "ಮ್ಯಾಕ್ರಿ ದುರಂತ"ವೆಂದು ಕರೆಯುತ್ತಾರೆ.

ಅರ್ಜೆಂಟೀನಾವು, ಧಾನ್ಯಗಳು ಮತ್ತು ಮಾಂಸ ಉತ್ಪಾದನೆಗೆ ಮಾನ್ಯತೆ ಪಡೆದ ದೇಶವಾಗಿದ್ದು, ಇಂದು ಇದರ, ಬಡತನದ ಪ್ರಮಾಣವು ಶೇ.35.4, ರಷ್ಟಾಗಿದೆ. ಒಂದು ವರ್ಷದ ಅವಧಿಯಲ್ಲಿಯೇ ಶೇ.8.1 ರಷ್ಟು ಬಡತನ ಹೆಚ್ಚಾಗಿದೆ. ಹಾಗೆಯೇ, ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಸ್ಟ್ಯಾಟಿಸ್ಟಿಕ್ಸ್ ಅಂಡ್ ಸೆನ್ಸಸ್ (ಐ.ಎನ್.ಇ.ಸಿ) ವರದಿಯ ಪ್ರಕಾರ, ಶೇ.25.4 ಕುಟುಂಬಗಳಿಗೆ ಮೂಲ ಆಹಾರ ಸಿಗುತ್ತಿಲ್ಲ. ಪರಿಸ್ಥಿತಿ ತುಂಬಾ ಶೋಚನೀಯವಾಗಿದೆ.

ಮಾಜಿ ಅಧ್ಯಕ್ಷ ಮಾರಿಸಿಯೋ ಮ್ಯಾಕ್ರಿ ಐ.ಎಂ.ಎಫ್ ನಿಂದ, 50 ಶತಕೋಟಿ ಡಾಲರ್‌ಗಳ ಹೆಚ್ಚಿನ ಸಾಲವನ್ನು ತರಲು ನಿರ್ಧರಿಸಿದ್ದರು. ಇದಕ್ಕಾಗಿ, ಐ.ಎಂ.ಎಫ್. ವಿಧಿಸುವ ಎಲ್ಲಾ ತರದ ಕಠಿಣ ಷರತ್ತುಗಳನ್ನು ಒಪ್ಪಿಕೊಂಡಿದ್ದರು. ಇದರ ದುಷ್ಪರಿಣಾಮಗಳನ್ನು ಜನರಿಂದ ಭರಿಸಲು ತೀರ್ಮಾನಿಸಿದ್ದರು. ಅಲ್ಲಿನ ಜನರ ಜೀವನ ವೆಚ್ಚವು ಶೇ.57.3 ರಷ್ಟು ಹೆಚ್ಚಿದ್ದರಿಂದ ಇತ್ತೀಚಿನ ದಿನಗಳಲ್ಲಿ, ಭಾರೀ ಪ್ರತಿಭಟನೆಗಳು ನಡೆದಿದ್ದವು.



ಅಧಿಕೃತ ಅಂಕಿ ಅಂಶಗಳ ಪ್ರಕಾರ, ಒಂದೂವರೆ ಕೋಟಿಗಿಂತಲೂ ಅಧಿಕ ಅರ್ಜೆಂಟೀನಾ ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ. ಪ್ರಮುಖ ಆಹಾರ ಪದಾರ್ಥಗಳ ಬೆಲೆಗಳು ಶೇ.58.3 ರಷ್ಟು ಏರಿಕೆಯಾಗಿವೆ. ನಿರುದ್ಯೋಗ ಪ್ರಮಾಣವು 2018–2019 ರಲ್ಲಿಯೇ, ಸುಮಾರು ಶೇ.19.3 ರಷ್ಟು ಹೆಚ್ಚಾಗಿದೆ. ಇದು ಯುವಜನರಲ್ಲಿ ಅಸಮಾಧಾನ ಉಂಟು ಮಾಡಿದೆ.

ಇಂತಹ, ಕ್ಲಿಷ್ಟ ಆರ್ಥಿಕ ಪರಿಸ್ಥಿತಿಯಲ್ಲಿ, ಅಲ್ಬರ್ಟೊ ಫರ್ನಾಂಡೀಸ್ ಹೊಸ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಅರ್ಜೆಂಟೀನಾ ಜನರು ಫರ್ನಾಂಡೀಸ್ ರವರಿಂದ ಸಾಕಷ್ಟು ಹೊಸತನವನ್ನು ಬಯಸುತ್ತಿದ್ದಾರೆ. 'ಮ್ಯಾಕ್ರಿ ದುರಂತ'ದ ಹಿನ್ನೆಲೆಯಲ್ಲಿ ಇದು ಬಹು ಕಷ್ಟದ ಕೆಲಸ. "ಹಾಗಾಗಿ, ನಾವು ಹಂತ ಹಂತವಾಗಿ ಮುನ್ನಡೆಯ ಬೇಕಿದೆ. ಬದಲಾವಣೆಗಳನ್ನು ತರುವ ನಿಟ್ಟಿನಲ್ಲಿ ಎಲ್ಲರೂ ಒಟ್ಟಾಗಿ ಶ್ರಮಿಸೋಣ. ನಿವೃತ್ತರು ಮತ್ತು ಐ.ಎಂ.ಎಫ್ ಬ್ಯಾಂಕ್‌ಗಳ ನಡುವೆ, ನಾವು ನಿವೃತ್ತರನ್ನು ಆಯ್ಕೆ ಮಾಡುತ್ತೇವೆ; ಸಾರ್ವಜನಿಕ ಶಿಕ್ಷಣ ಮತ್ತು ಐ.ಎಂ.ಎಫ್. ನಡುವೆ, ನಾವು ಶಿಕ್ಷಣವನ್ನು ಆರಿಸಿಕೊಳ್ಳಲು ಬಯಸುತ್ತೇವೆ" ಎಂದು ಅಲ್ಬರ್ಟೊ ಫರ್ನಾಂಡೀಸ್ ಹೇಳಿದ್ದಾರೆ.

Posted on 16 November 2019, (Periodical)
JANASHAKTHI KANNADA VARA PATRIKE NOVEMBER 11-17 , 2019 Price: Rs. 10/- Date of Publication: 8 NOVEMBER 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

"ಎಲ್ಲಾ ರಾಷ್ಟ್ರೀಯ ಭಾಷೆಗಳಿಗೂ ಸಮಾನ ಸ್ಥಾನಮಾನ ಸಿಗಬೇಕು"

ಸಿಪಿಐ(ಎಂ) ದಕ್ಷಿಣ ಭಾರತ ರಾಜ್ಯಗಳ ಚನ್ನೈ ಸಮ್ಮೇಳನದ ಕರೆ

ಸಂಘ ಪರಿವಾರದ ಕಾರ್ಯಸೂಚಿಯ ಭಾಗವಾಗಿ ಮೋದಿ ಸರ್ಕಾರವು ಹೇಗಾದರೂ ಮಾಡಿ ಹಿಂದಿ ಮತ್ತು ಸಂಸ್ಕೃತ ಹೇರುವ ಕ್ರಮಕ್ಕೆ ಮುಂದಾಗಿದೆ. 2019 ರ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡಿನಲ್ಲಿ ಬೇರೆಲ್ಲಾ ಭಾಷೆಗಳಿಗೆ ಹಾನಿಯುಂಟಾಗುವಂತೆ ಸಂಸ್ಕೃತವನ್ನು ಬಹಿರಂಗವಾಗಿ ಪ್ರೋತ್ಸಾಹಿಸುತ್ತಿದೆ. ಭಾರತದ ಸಂವಿಧಾನವು 8ನೇ ಅನುಬಂಧದಲ್ಲಿ 22 ಭಾಷೆಗಳನ್ನು ರಾಷ್ಟ್ರೀಯ ಭಾಷೆಗಳನ್ನಾಗಿ ಮಾನ್ಯ ಮಾಡಿದೆ. ಈ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರದ ಈ ಸಂವಿಧಾನ ವಿರೋಧಿ ಕ್ರಮದ ವಿರುದ್ಧ, ಸಿಪಿಐ(ಎಂ) ತಮಿಳುನಾಡು ರಾಜ್ಯ ಸಮಿತಿಯು ಚನ್ನೈನಲ್ಲಿ ನವಂಬರ್ 5, 2019 ರಂದು "ಹಿಂದಿ ಹೇರಿಕೆಯನ್ನು ವಿರೋಧಿಸಿ ಮತ್ತು ಮಾತೃಭಾಷೆಗಳನ್ನು ಸಂರಕ್ಷಿಸಲು" ಸಿಪಿಐ(ಎಂ) ದಕ್ಷಿಣ ಭಾರತ ರಾಜ್ಯಗಳ ಸಮಾವೇಶವನ್ನು ಆಯೋಜಿಸಿತ್ತು.

ಸಂಗಾತಿ ಕೆ.ಬಾಲಕೃಷ್ಣನ್, ಪಕ್ಷದ ತಮಿಳುನಾಡು ಕಾರ್ಯದರ್ಶಿಯವರು ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ತೆಲಂಗಾಣ ರಾಜ್ಯ ಸಮಿತಿಯ ಕಾರ್ಯದರ್ಶಿ ಟಿ.ವೀರಭದ್ರಂ, ಕೇಂದ್ರ ಸಮಿತಿ ಸದಸ್ಯರೂ ಹಾಗೂ ಕೇರಳ ಎಡರಂಗದ ಸಂಚಾಲಕರೂ ಆಗಿರುವ ಎ.ವಿಜಯರಾಘವನ್, ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಟಿ.ಸುರೇಂದ್ರರಾವ್, ತಂಜಾವೂರು ತಮಿಳು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾಗಿರುವ ಎಂ.ರಾಜೇಂದ್ರನ್



ಮತ್ತು ಶ್ರೀಮತಿ ಕೆ.ಬಾಲಭಾರತಿ, ಮಾಜಿ ಶಾಸಕರು ಹಾಗೂ ತಮಿಳುನಾಡು ರಾಜ್ಯ ಸಮಿತಿ ಸದಸ್ಯರು ಈ ಜ್ವಲಂತ ಸಮಸ್ಯೆಯ ಬಗ್ಗೆ ಮಾತನಾಡಿ ಒಕ್ಕೊರಲಿನ ವಿರೋಧವನ್ನು ವ್ಯಕ್ತಪಡಿಸಿದರು.

ಸಮಾವೇಶದ ನಿರೂಪಣೆಯನ್ನು ಪ್ರೊ.ಅರುಣನ್ ನಡೆಸಿಕೊಟ್ಟರು. ಪಕ್ಷದ ಪಿ.ಬಿ.ಸದಸ್ಯರಾಗಿರುವ 'ಜಿ.ರಾಮಕೃಷ್ನನ್, ಕೇಂದ್ರ ಸಮಿತಿ ಸದಸ್ಯರಾಗಿರುವ ಕೆ.ವರದರಾಜನ್, ಎ.ಕೆ.ಪದ್ಮನಾಭನ್, ಪಿ.ಸಂಪತ್ ಮತ್ತು ಇತರ ಹಿರಿಯ ಮುಖಂಡರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಸಮಾವೇಶದ ಕರಡು ನಿರ್ಣಯವನ್ನು ಸಂಸದರೂ ಹಾಗೂ ಪಕ್ಷದ ತಮಿಳುನಾಡು ರಾಜ್ಯ ಸಮಿತಿ ಸದಸ್ಯರೂ ಆಗಿರುವ ಸು.ವೆಂಕಟೇಶನ್ ಮಂಡಿಸಿದರು. ನಿರ್ಣಯದ ಪ್ರತಿಯನ್ನು ಪ್ರತ್ಯೇಕವಾಗಿ ಇಲ್ಲಿ ಪ್ರಕಟಿಸಲಾಗಿದೆ. ಸ್ವಾತಂತ್ರ್ಯಾನಂತರ ದೇಶಾದ್ಯಂತ ಹಲವಾರು ಹೋರಾಟಗಳು ನಡೆದು 1950ರಲ್ಲಿ ಭಾಷೆಗಳ ಆಧಾರದಲ್ಲಿ ಅನೇಕ ರಾಜ್ಯಗಳನ್ನು ರಚಿಸಲಾಯಿತು. ಆದಾಗ್ಯೂ ಭಾಷೆಯ ಸಮಸ್ಯೆಗಳಿಗೆ ಸರಿಯಾದ ಪರಿಹಾರ ದೊರೆತಿಲ್ಲ. ಬದಲಾಗಿ ಹಿಂದಿಯನ್ನು ಕೇಂದ್ರ ಸರ್ಕಾರದ ಆಡಳಿತ ಭಾಷೆಯನ್ನಾಗಿ ಘೋಷಿಸಲಾಗಿದೆ. ಎಲ್ಲಾ ರಾಜ್ಯಗಳ ಮೇಲೂ ಹಿಂದಿ ಭಾಷೆಯನ್ನು ಹೇರುವ ಪ್ರಯತ್ನಗಳಾಗುತ್ತಿವೆ. ಈ ಧೋರಣೆಯು ಸಂವಿಧಾನದ ಒಕ್ಕೂಟ ವ್ಯವಸ್ಥೆಗೆ ಮಾರಕವಾಗುವುದರ ಜತೆಯಲ್ಲೇ ಉಳಿದ ಭಾಷೆಗಳ ಅಳಿವು ಉಳಿವಿನ ಮೇಲೆ ತೀವ್ರ ಆಘಾತ ಉಂಟಾಗಲಿದೆ. ಭಾರತದ ಬಹುತ್ವ ಮತ್ತು ಏಕತೆಗೆ ಭಂಗಉಂಟಾಗುತ್ತಿದೆ. ದೇಶದ ಏಕತೆಯ ದೃಷ್ಟಿಯಿಂದ ಎಲ್ಲಾ ಅಧಿಕೃತ ಭಾಷೆಗಳ ಅಭಿವೃದ್ಧಿಗೆ ಸಮಾನ ಅವಕಾಶಗಳು ಹಾಗೂ ನಿಧಿಯನ್ನು ಕೇಂದ್ರ ಸರ್ಕಾರವು ಒದಗಿಸಬೇಕೆಂದು ಕರಡು ನಿರ್ಣಯ ಮಂಡಿಸಿ ಮಾತನಾಡಿದ ವೆಂಕಟೇಶನ್ ತಿಳಿಸಿದರು.

ಕೇರಳದ ವತಿಯಿಂದ ಮಾತನಾಡಿದ ಎ.ವಿಜಯರಾಘವನ್ ಅವರು "ದಕ್ಷಿಣ ಭಾರತದ ಭಾಷೆಗಳಾದ ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂ ಭಾಷೆಗಳು ಜಾಗತಿಕ ಪ್ರಮುಖ 35 ಭಾಷೆಗಳ ಪಟ್ಟಿಯಲ್ಲಿವೆ" ಎಂದರು. ಎಡ ಪಕ್ಷಗಳು ಕೇಂದ್ರದ ಬಿಜೆಪಿ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಸಮರಶೀಲ ಹೋರಾಟ ಮಾಡುತ್ತಿವೆ. ಎಲ್ಲಾ ಜನವಿಭಾಗಗಳನ್ನು ಹೋರಾಟದಲ್ಲಿ ಒಳಗೊಳ್ಳುವಂತೆ ಮಾಡುವುದರ ಮೂಲಕ ಮಾತ್ರವೇ ಸರ್ಕಾರದ ಕೆಟ್ಟ ನೀತಿಗಳನ್ನು ಸೋಲಿಸಲು ಸಾಧ್ಯ ಎಂದರು.

ಭಾಷೆಯು ಜನರನ್ನು ಒಟ್ಟುಗೂಡಿಸುತ್ತದೆ. ತಮ್ಮ ಮಾತೃಭಾಷೆಯಲ್ಲಿ ಓದುವುದರ ಮೂಲಕ ತಮ್ಮ ತಿಳುವಳಿಕೆಯನ್ನು ಉತ್ತಮಪಡಿಸಿಕೊಳ್ಳಬಹುದು. ಇದು ಸಾರ್ವತ್ರಿಕ ಸತ್ಯ. ಜನಸಮುದಾಯದ ಜತೆ ಮಾತನಾಡಲು ಭಾಷೆಯ ಅಗತ್ಯವಿದೆ. ಆದ್ದರಿಂದ ದೇಶದಲ್ಲಿ ಜನರು ಮಾತನಾಡುವ ಭಾಷೆಗಳಿಗೆ ಸಮಾನ ಮಾನ್ಯತೆ ಸಿಗಬೇಕು. ಹಿಟ್ಲರ್ ಮತ್ತು ಮುಸೊಲಿನಿಯಂತೆ ಸಂಘ ಪರಿವಾರವು ಜನರಲ್ಲಿ ಧಾರ್ಮಿಕ ಭಾವನೆಗಳನ್ನು ಬಡಿದೆಬ್ಬಿಸುತ್ತಿದೆ. ಸಂಸ್ಕೃತಿಯ ಹೆಸರಿನಲ್ಲಿ ಸಂಘಟಿಸಲಾಗುತ್ತಿದೆ. ಆದರೆ ಹಲವಾರು ಭಾಷೆಗಳು, ಅನೇಕ ಸಂಸ್ಕೃತಿಗಳು

ಪುಟ 14 ಕ್ಕೆ

ತಾಯಿಭಾಷೆಯನ್ನು ಕಾಪಾಡಲು ಮತ್ತು ಹಿಂದಿ ಹೇರಿಕೆಯನ್ನು ವಿರೋಧಿಸಲು

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ದಕ್ಷಿಣ ರಾಜ್ಯಗಳ ಸಮ್ಮೇಳನ ಕಾಮರಾಜರ್ ಅರಂಗಂ, ಚೆನ್ನೈ ನವಂಬರ್ 5, 2019

ಭಾರತವು ಒಂದು ಬಹು ರಾಷ್ಟ್ರೀಯತೆಯ ಜನಾಂಗೀಯ ದೇಶವಾಗಿದೆ. ನಮ್ಮ ಸಂವಿಧಾನವು ಇದನ್ನು ಮಾನ್ಯ ಮಾಡಿದೆ. ಇದರ ಆಧಾರದಲ್ಲಿಯೇ, ಭಾರತೀಯ ಸಂವಿಧಾನದ ಮೊಟ್ಟ ಮೊದಲ ವಿಭಾಗದಲ್ಲೇ ಭಾರತವು ಒಂದು ರಾಜ್ಯಗಳ ಸಂಘ ಎಂಬುದನ್ನು ನಿರ್ದಿಷ್ಟಪಡಿಸಿದೆ. ದೇಶದ ಬಹುತ್ವ ಸ್ವಭಾವವನ್ನು ಅದು ಮಾನ್ಯ ಮಾಡಿದೆ. ಆದ್ದರಿಂದಲೇ ವೈವಿಧ್ಯತೆಯಲ್ಲಿ ಏಕತೆಯನ್ನು ದೇಶವು ಹೆಮ್ಮೆಯ ಅಸ್ಮಿತೆಯಾಗಿ ಆಚರಿಸುತ್ತಿದೆ.

ಸ್ವಾತಂತ್ರ್ಯಾನಂತರ, ಅಸಂಖ್ಯಾತ ಹೋರಾಟಗಳ ಮೂಲಕ ಭಾಷಾಧಾರಿತ ರಾಜ್ಯಗಳನ್ನಾಗಿ ಸೃಷ್ಟಿಸಲಾಯಿತು. ಆದರೆ ನಮ್ಮ ದೇಶದ ಭಾಷಾ ಸಮಸ್ಯೆಯನ್ನು ಸಮಾಧಾನಕರ ರೀತಿಯಲ್ಲಿ ಪರಿಹರಿಸಲಾಗಿಲ್ಲ. ಭಾರತವು ಹಲವಾರು ಭಾಷೆಗಳ ಜನರನ್ನು ಹೊಂದಿರುವ ದೇಶ. ಕೇಂದ್ರ ಸರ್ಕಾರವು ಹಿಂದಿ ಭಾಷೆಯನ್ನು ಆಡಳಿತ ಭಾಷೆಯಾಗಿ ಹೇರಲು ಯತ್ನಿಸುವ ಜತೆಯಲ್ಲೇ ಹಿಂದಿಯನ್ನು ಮತ್ತು ಸಂಸ್ಕೃತವನ್ನು ಎಲ್ಲಾ ರಾಜ್ಯಗಳ ಮೇಲೆ ಬಲವಂತವಾಗಿ ಹೇರುತ್ತಿದೆ.

ಮೊದಲಿನಿಂದಲೂ ನಮ್ಮ ದೇಶದ ಒಕ್ಕೂಟ ಸಂರಚನೆಯನ್ನು ಮತ್ತು ಭಾಷಾವಾರು ರಾಜ್ಯಗಳನ್ನು ವಿರೋಧಿಸುವುದೇ ಆರ್.ಎಸ್.ಎಸ್. ಮತ್ತದರ ಅಂಗಸಂಸ್ಥೆಗಳ ಸೈದ್ಧಾಂತಿಕ ನಿಲುವು ಆಗಿದೆ. ಈ ಸೈದ್ಧಾಂತಿಕ ನಿಲುವಿನ ಆಧಾರದಲ್ಲಿಯೇ "ಒಂದು ದೇಶ ಒಂದು ಭಾಷೆ" ಘೋಷಣೆಯೊಂದಿಗೆ ಹಿಂದಿಯನ್ನು ಹೇರಲು ಎಲ್ಲಾ ರೀತಿಯ ಚಟುವಟಿಕೆಗಳಲ್ಲಿ ಅವರು ನಿರತರಾಗಿದ್ದಾರೆ. ಕೇಂದ್ರ ಸರ್ಕಾರವು ಹಿಂದಿ ಅಭಿವೃದ್ಧಿಗಾಗಿ ನೂರಾರು ಕೋಟಿ ರೂಪಾಯಿಗಳನ್ನು ಉದಾರವಾಗಿ ಖರ್ಚು ಮಾಡುತ್ತಿರುವಾಗಲೇ, ಇತರ ಭಾಷೆಗಳ ಅಭಿವೃದ್ಧಿಗೆ ಎಂದೂ ಕಾಳಜಿ ವಹಿಸಿಲ್ಲ.

ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸ್ವಹಿತಾಸಕ್ತಿಗಾಗಿ ಹಿಂದಿಯನ್ನೂ ಒಳಗೊಂಡಂತೆ ಯಾವು ಭಾಷೆಯನ್ನೂ ಕಲಿಯಲು ಹಕ್ಕಿದೆ. ಆದರೆ ಹಿಂದಿ ಬಾರದ ಬೇರೆ ಭಾಷಿಕರ ಮೇಲೆ ಹಿಂದಿ ಹೇರುವುದನ್ನು ಎಂದೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಕೇಂದ್ರ ಸರ್ಕಾರದ ಕರಡು ಶಿಕ್ಷಣ ನೀತಿಯು ಹಿಂದಿಯನ್ನು ಹಿಂಬಾಗಿಲಿನಿಂದ ಹೇರುತ್ತಿದೆ. ಒಂದು ಕಡೆಯಲ್ಲಿ ಹಿಂದಿಯನ್ನು ಹೇರುತ್ತಾ ಮತ್ತೊಂದೆಡೆಯಲ್ಲಿ ಸಂವಿಧಾನದ ಎಂಟನೇ ಅನುಬಂಧದಲ್ಲಿರುವ 22 ಭಾಷೆಗಳನ್ನು ಕಡೆಗಣಿಸುವ ಧೋರಣೆಯು ನಮ್ಮ ದೇಶದ ಒಕ್ಕೂಟ ವ್ಯವಸ್ಥೆಯನ್ನು ಹಾಳುಗೆಡುವುದಾಗಿದೆ ಎಂಬುದನ್ನು ಈ ಸಮ್ಮೇಳನವು ಎತ್ತಿ ಹೇಳಲು ಬಯಸುತ್ತದೆ.

ತನ್ನ ತಾಯಿಭಾಷೆಯನ್ನು ರಕ್ಷಿಸುವುದು ಹಾಗೂ ಅಭಿವೃದ್ಧಿಪಡಿಸುವುದು ಪ್ರತಿಯೊಬ್ಬ ವ್ಯಕ್ತಿಯ ಜನ್ಮಸಿದ್ಧ ಹಕ್ಕು. ಒಂದು ನಿರ್ದಿಷ್ಟ ರಾಜ್ಯದ ಭಾಷೆಯನ್ನು ಆ ರಾಜ್ಯದ ಆಡಳಿತ ಭಾಷೆಯಾಗಿ ಮತ್ತು ನ್ಯಾಯಾಲಯಗಳ ಭಾಷೆಯಾಗಿ ಗೌರವಿಸುವುದು ಮತ್ತು ಸಂವಿಧಾನದ ಎಂಟನೇ ಅನುಬಂಧದಲ್ಲಿರುವ 22 ಭಾಷೆಗಳನ್ನು ಸಮಾನವಾಗಿ ಮಾನ್ಯಮಾಡುವುದರ ಮೂಲಕ ಮಾತ್ರವೇ ದೇಶದ ಬಹುತ್ವವನ್ನು ಹಾಗೂ ಐಕ್ಯತೆಯನ್ನು ಕಾಪಾಡಲು ಸಾಧ್ಯ ಎಂಬುದನ್ನು ಈ ಸಮ್ಮೇಳನವು ದೃಢವಾಗಿ ನಂಬುತ್ತದೆ.

ಈ ಬಹುಮುಖ್ಯವಾದ ಉದ್ದೇಶವನ್ನು ಈಡೇರಿಸುವ ಸಲುವಾಗಿ, ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ದಕ್ಷಿಣ ರಾಜ್ಯಗಳ ಈ ಸಮ್ಮೇಳನವು ದೇಶದ ಹಿತಾಸಕ್ತಿ ಹಾಗೂ ಐಕ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ಈ ಕೆಳಗಿನ ಅಂಶಗಳನ್ನು ಮುಂದಿಡುತ್ತದೆ:

* ಕರಡು ಶಿಕ್ಷಣ ನೀತಿಯನ್ನೂ ಒಳಗೊಂಡಂತೆ ವಿವಿಧ ರೀತಿಗಳಲ್ಲಿ ಎಲ್ಲಾ ರಾಜ್ಯಗಳ ಮೇಲೆ ಹಿಂದಿ ಮತ್ತು ಸಂಸ್ಕೃತ ಹೇರಿಕೆಯನ್ನು ಈ ಸಮ್ಮೇಳನವು ಖಂಡಿಸುತ್ತದೆ. ಅದೇ ಸಮಯದಲ್ಲಿ ಯಾರಿಗೂ ಯಾವುದೇ ಭಾಷೆಯನ್ನು ಕಲಿಯಲು ಯಾವುದೇ ಅಡ್ಡಿ ಆತಂಕಗಳು ಇರಬಾರದೆಂದು ಈ ಸಮ್ಮೇಳನವು ಗಟ್ಟಿಯಾಗಿ ಸಾರುತ್ತದೆ.
* ಎಲ್ಲಾ ಭಾರತೀಯ ಭಾಷೆಗಳಿಗೆ ಸಮಾನ ಅವಕಾಶ ಹಾಗೂ ಅಭಿವೃದ್ಧಿ ನಿಧಿಯನ್ನು ಖಾತ್ರಿಪಡಿಸಬೇಕೆಂದು ಈ ಸಮ್ಮೇಳನವು ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸುತ್ತದೆ.
* ರಾಜ್ಯಗಳಲ್ಲಿರುವ ಪ್ರತಿಯೊಬ್ಬರಿಗೂ ಎಲ್ಲಾ ಹಂತದವರೆಗೂ ತನ್ನ ತಾಯಿಭಾಷೆಯಲ್ಲಿ ಕಲಿಯಲು ಮತ್ತು ಆ ರಾಜ್ಯದ ಭಾಷೆಯನ್ನು ಆಡಳಿತ ಭಾಷೆಯಾಗಿ ಮತ್ತು ಆ ರಾಜ್ಯದ ನ್ಯಾಯಾಲಯಗಳ ಭಾಷೆಯಾಗಿ ಪರಿಗಣಿಸಲು ವ್ಯವಸ್ಥೆ ಮಾಡಬೇಕು. ತುರ್ತು ಪರಿಸ್ಥಿತಿಗೆ ಮುಂಚೆ ಇದ್ದಂತೆ ಶಿಕ್ಷಣವನ್ನು ರಾಜ್ಯ ಪಟ್ಟಿಗೆ ತರಬೇಕು.
* ರಾಜ್ಯಗಳಲ್ಲಿರುವ ಕೇಂದ್ರ ಸಾರ್ವಜನಿಕ ಉದ್ದಿಮೆಗಳಲ್ಲಿ ಆ ರಾಜ್ಯದ ಭಾಷೆಯನ್ನೇ ಬಳಸುವಂತೆ ಖಾತ್ರಿಪಡಿಸಬೇಕು.
* ಕೇಂದ್ರ ಸರ್ಕಾರವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಸಂವಿಧಾನದ ಎಂಟನೇ ಅನುಬಂಧದಲ್ಲಿರುವ ಎಲ್ಲಾ ಭಾಷೆಗಳಲ್ಲಿ ನಡೆಸಬೇಕು.
* ಕೇಂದ್ರ ಸರ್ಕಾರದ ಅಡಿಯಲ್ಲಿನ ಸಂಸತ್ತಿನಲ್ಲಿ ಎಲ್ಲಾ ಭಾಷೆಗಳಿಗೂ ಸಮಾನತೆಯನ್ನು ಮಾನ್ಯ ಮಾಡಬೇಕು. ಹಿಂದಿ ಮಾತ್ರವೇ ಆಡಳಿತ ಭಾಷೆ ಎನ್ನುವ ಧೋರಣೆಯನ್ನು ಕೈಬಿಡಬೇಕು. ಸಂವಿಧಾನದ 17ನೇ ಅನುಬಂಧವನ್ನು ತಿದ್ದುಪಡಿಮಾಡಿ ಈ ಸೌಲಭ್ಯ ಒದಗಿಸಬೇಕು.
* ಸಂಸದರು ತಮ್ಮ ತಮ್ಮ ರಾಜ್ಯಗಳ ಭಾಷೆಯಲ್ಲೇ ಸಂಸತ್ತಿನಲ್ಲಿ ಮಾತನಾಡುವ ಹಕ್ಕಿರಬೇಕು ಮತ್ತು ಏಕಕಾಲದಲ್ಲಿ ಅವರ ಮಾತು ಬೇರೆ ಭಾಷೆಗಳಿಗೆ ಅನುವಾದವಾಗುವಂತೆ ವ್ಯವಸ್ಥೆ ಮಾಡಬೇಕು.
* ಕೇಂದ್ರ ಕಾಯಿದೆಗಳು, ಸರ್ಕಾರಿ ಆದೇಶಗಳು ಮತ್ತು ನಿರ್ಣಯಗಳು ಎಲ್ಲಾ ರಾಷ್ಟ್ರೀಯ ಭಾಷೆಗಳಲ್ಲಿ ಲಭ್ಯವಾಗುವುದನ್ನು ಖಾತ್ರಿಪಡಿಸಬೇಕು.

ದೇಶದ ವೈವಿಧ್ಯತೆಯನ್ನು ಕಡೆಗಣಿಸಿ, ದೇಶದ ವಿವಿಧ ರಾಷ್ಟ್ರೀಯತೆ ಜನಾಂಗೀಯ ಜನರ ಮೇಲೆ ಹಿಂದಿ ಮತ್ತು ಸಂಸ್ಕೃತ ಹೇರುವಿಕೆಯ ಪ್ರಯತ್ನವನ್ನು ಬಲವಾಗಿ ಖಂಡಿಸುತ್ತೇವೆ. ಕೇಂದ್ರ ಸರ್ಕಾರವು ಎಲ್ಲಾ ರಾಷ್ಟ್ರೀಯ ಭಾಷೆಗಳನ್ನು ಸಮಾನವಾಗಿ ಮಾನ್ಯ ಮಾಡುವವಂತಾಗಲು ಹೋರಾಟಕ್ಕೆ ಮುಂದಾಗಬೇಕೆಂದು ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಈ ಸಮ್ಮೇಳನವು ಕರೆ ನೀಡುತ್ತದೆ.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**